ಶ್ರೀ ಬಿ.ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ವಿದೇಯಕವನ್ನು ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

(1994-95ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಉತ್ತರ)

*ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಿನ್ನೆ ದಿನ ನಾನು ವಿತ್ತೀಯ ಕಾರ್ಯಕಲಾಪಗಳ ಅಡಿಯಲ್ಲಿ ಕೆಲವು ಬೇಡಿಕೆಗಳ ಬಗ್ಗೆ ಮಾತನಾಡಿ, ವಿಶೇಷವಾಗಿ ವೈದ್ಯಕೀಯ ಶಿಕ್ಷಣ ಇಲಾಖೆ ಬೇಡಿಕೆ ಮೇಲೆ ಎರಡು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಒಂದನೆಯದು ಜಯದೇವ ಆಸ್ಪತ್ರೆಯನ್ನು ಎಸ್.ಜಿ.ಎಂ. ಸ್ಯಾನಿಟೋರಿಯಂ ಜೊತೆಯಲ್ಲಿ ಮತ್ತೆ ಸೇರಿಸಬೇಕೆಂಬ ಪ್ರಯತ್ನ ಏನಿದೆ? ಅದನ್ನು ಕೈಬಿಡಬೇಕು, ಅದರಿಂದ ಸಾರ್ವಜನಿಕರಿಗೆ ಉಪಯೋಗವಾಗುವುದಿಲ್ಲ ಎನ್ನತಕ್ಕಂಥ ಒತ್ತಾಯವನ್ನು ಮತ್ತೊಮ್ಮೆ ಈ ಸಂದರ್ಭದಲ್ಲಿ ಮಾಡುತ್ತೇನೆ. ಆಮೇಲೆ ನಮ್ಮ ರಾಜ್ಯದಲ್ಲಿ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಈ ಮೂರು ಇಲಾಖೆಗಳು ಏನಿವೆ, ಈ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ,

12.00 ಪಿ.ಎಂ

ಸರಕಾರವರು ಅಥವಾ ಇಲಾಖೆಗೆ ಸಂಬಂಧಪಟ್ಟವರು ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲ ಎನ್ನತಕ್ಕಂಥಾದ್ದು ಬಹಳ ದುರ್ದೈವದ ವಿಚಾರವಾಗಿದೆ. ವಿಶೇಷತ : ಆಯುರ್ವೇದ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತನಾಡಬೇಕೆಂದರೆ, ಕೆಲವಾರು ಕಾಯಿಲೆಗಳನ್ನು ತಡೆಗಟ್ಟತಕ್ಕಂಥ, ನಿವಾರಣೆ ಮಾಡತಕ್ಕಂಥ ಒಂದು ಶಕ್ತಿ ಇದರಲ್ಲಿದೆ. ಅದರ ಉಪಯೋಗವನ್ನು ನಮ್ಮ ಸರಕಾರ ಮತ್ತು ನಾವುಗಳು ಯಾರು ಕೂಡ ಸರಿಯಾಗಿ ಮಾಡಿಕೊಳ್ಳಲಿಕ್ಕೆ ಆಗದೇ ಇರತಕ್ಕಂಥಾದ್ದು ದುರ್ದೈವದ ವಿಚಾರಾಗಿದ್ದು ಅದಕ್ಕೆ ಹೆಚ್ಚಿನ ಮಹತ್ವವನ್ನು ಈ ಸರಕಾರವು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೆಯೇ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ನಮ್ಮ ವಿಷಯ ಸಮಿತಿಯ ವರದಿಯಲ್ಲಿ ವಿಶೇಷವಾಗಿ ಹೌಸಿಂಗ್ ಬೋರ್ಡ್ ಬಗ್ಗೆ ಒಂದು ಪ್ರಸ್ತಾಪ ಮಾಡಿದ್ದಾರೆ.

" However the Committee finds that implementation of Housing schemes has been very tardy. The committee note, with anguish and pain that as a rule houses being constructed under Government housing schemes remain

half completed over long periods, leading not only to cost escalation but also to the the deterioration of the constructions. Such delay eats into the scarece resources of the State. There are also instances where completed houses are not handed over to the beneficiaries giving room for theft and pilferage of material used in the consturctions."

ಎನ್ನುವ ವಿಚಾರ ಅದರಲ್ಲಿದೆ. ನಮ್ಮ ವಸತಿ ಸಚಿವರು ಎಷ್ಟು ಹೌಸಿಂಗ್ ಬೋರ್ಡ್ ಕಾಲನಿಗಳಿಗೆ ಭೇಟಿ ಕೊಟ್ಟಿದ್ದಾರೋ ನನಗಂತೂ ಗೊತ್ತಿಲ್ಲ. ರಾಜ್ಯದಲ್ಲಿರ ತಕ್ಕಂಥ ಇಂಥ ಯಾವುದೇ ಕಾಲನಿಗಳಿಗೆ ಭೇಟಿ ಕೊಡಿ. ಅದೊಂದು ರೀತಿಯಲ್ಲಿ ಸ್ಮಶಾನದ ರೀತಿಯಲ್ಲಿ ಕಾಣಿಸುತ್ತದೆ. ಮತ್ತು ನಾವೇನು ಅವರಿಗೆ ಒಂದು ಲಕ್ಷಕ್ಕೋ, 80 ಸಾವಿರ ರೂಪಾಯಿಗಳಿಗೊ ಲೆಟರ್ ಕೊಟ್ಟು ಮನೆ ಕೊಡುತ್ತೇವೆ ಎಂದು ಹೇಳುತ್ತೇವೋ ಅದನ್ನು ಕಟ್ಟಿಕೊಡುವಷ್ಟು ಹೊತ್ತಿಗೆ ಎರಡು, ಎರಡೂವರೆ ಲಕ್ಷ ರೂಪಾಯಿಗಳಷ್ಟು ಆಗುತ್ತದೆ. ನ್ಯಾಚುರಲಿ ಅವರದ್ದು ಡ್ಯೂ ಆಗುತ್ತದೆ, ಖರ್ಚು ಎಸ್ಕಲೇಟ್ ಆಗುತ್ತದೆ. ಪ್ರತಿ ಸಂದರ್ಭದಲ್ಲಿಯೂ ಹೌಸಿಂಗ್ ಬೋರ್ಡ್‌ನ ಚೇರ್‌ಮನ್‌ಗಳು ಆಗಾಗ ಬದಲಾಗುತ್ತಾ ಇರುತ್ತಾರೆ. ಹಾಗೆ ಬಂದ ಬಂದ ಹಾಗೆಲ್ಲ ಅವರ ನೀತಿಯನ್ನು 'ಬದಲಾವಣೆ ಮಾಡುತ್ತಾ ಇರುತ್ತಾರೆ. ಇದ್ದರಿಂದಾಗಿ ರಾಜ್ಯದಲ್ಲಿರತಕ್ಕಂಥ ಎಲ್ಲಾ ಹೌಸಿಂಗ್‌ಬೋರ್ಡ್ ಕಾಲನಿಗಳಲ್ಲಿಯೂ ಒಂದು ಮನೆ ಕೂಡ ಕ್ವಾಲಿಟಿ ಆಫ್ ಕನ್‌ಸ್ಟ್ರಕ್ಷನ್ ಇಲ್ಲ, ಪೊಸಿಶನ್‌ಗೆ ಕೂಡ ಹೋಗುತ್ತಾ ಇಲ್ಲ. ಇನ್ನೊಂದು ಕಡೆಯಲ್ಲಿ ಜನರು ಹಣ ಕಟ್ಟಲು ಕೂಡ ಆಗುತ್ತಾ ಇಲ್ಲ. ಹೀಗಾಗಿ ಬೋರ್ಡ್‌ನ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತವಾಗತಕ್ಕಂಥ ಪರಿಸ್ಥಿತಿಯು ಬಂದಿದೆ. ಹುಡ್ಕೋ ಸಂಸ್ಥೆಯವರು ಹೌಸಿಂಗ್‌ಬೋರ್ಡ್‌ನ ಚಟುವಟಿಕೆಗಳಿಗೆ ಏನು ಹಣ ಸಹಾಯವನ್ನು ಕೊಡುತ್ತಾ ಇದ್ದರು ಮುಂದೆ ಅದನ್ನು ನಿಲ್ಲಿಸ ಬಹುದೆಂಬುದು ಕೂಡ ನನ್ನ ಅಭಿಪ್ರಾಯವಾಗಿದೆ. ಏನೂ ಇಲ್ಲದೆ ಇರತಕ್ಕ ಬಡವರಿಗೆ ಇಂದಿರಾ ಅವಾಜ್, ಹುಡ್ಕೋ, ಜನತಾ ಮನೆ, ಆಶ್ರಯ ಯೋಜನೆಗಳ ಮೂಲಕ ನಾವು ಮನೆಗಳನ್ನು ಕೊಟ್ಟಿದ್ದೇವೆ. ಆದರೆ ಮಧ್ಯಮ ವರ್ಗದ ಜನರಿಗೆ ಸಹಾಯ ಮಾಡಲು ಇರತಕ್ಕಂಥ ಏಕೈಕ ಏಜನ್ಸಿ ಅಂದರೆ ಅದು ಹೌಸಿಂಗ್ ಬೋರ್ಡ್ ಹಾಗಿದೆ. ಉದಾಹರಣೆಗೆ ನನ್ನ ಕ್ಷೇತ್ರ ಕನಕಪುರದ ವಿಚಾರ ಹೇಳುತ್ತೇನೆ. ಅಲ್ಲಿ ಮನೆಗಳನ್ನು ಕಟ್ಟಿ ಸುಮಾರು ಎರಡೂವರೆ ವರ್ಷಗಳು ಆಗಿವೆ. ಅದರ ಉದ್ಘಾಟನೆ ಮಾಡಬೇಕೆಂದು ಆಗಾಗ ಎಲ್ಲಾ ಮಂತ್ರಿಗಳಿಗೂ ಕೂಡ ಹೇಳಿಕೊಂಡು ಬಂದಿದ್ದೇನೆ. ಉದ್ಘಾಟನೆ ಇರಲಿ, ಅದನ್ನು ಫಲಾನುಭವಿಗಳಿಗೆ ಹ್ಯಾಂಡ್ ಓವರ್ ಮಾಡಿಲ್ಲ, ಅಲ್ಲಿ ಕಳ್ಳತನ ಪ್ರಾರಂಭವಾಗಿದೆ. ಮನೆಗಳ ಕಿಟಕಿ ಬಾಗಿಲುಗಳನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಅದೊಂದು ರೀತಿಯಲ್ಲಿ ಗ್ಲೋರಿಫೈಡ್ ಸ್ಲಂ ರೀತಿಯಲ್ಲಿ ಆಗಿಬಿಟ್ಟಿದೆ. ಇದು ಒಂದು ಹೌಸಿಂಗ್‌ಬೋರ್ಡ್‌ನ ಕಾಲೋನಿ ವಿಚಾರವಲ್ಲ ಇಡೀ ರಾಜ್ಯದಲ್ಲಿಯೇ ಈ ಪರಿಸ್ಥಿತಿ ಇದೆ. ಇದನ್ನು ಕಮಿಟಿಯವರೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸಿ.ಬೈರೇಗೌಡ :- ಇದು ಕೇವಲ ಸಿಂಧ್ಯರವರ ಕ್ಷೇತ್ರದಲ್ಲಿ ಮಾತ್ರವಲ್ಲ ಎಲ್ಲಾ ಕಡೆಯಲ್ಲಿ ಇದೆ. ಬೆಂಗಳೂರು ನಗರದಲ್ಲಿಯೂ ಅಂಥವು ಸಾಕಷ್ಟು ಇದ್ದಾವೆ. ಕಟ್ಟಿರತಕ್ಕಂಥ ಮನೆಗಳು ಬಿದ್ದು ಹೋಗಿ ನಿರ್ನಾಮವಾಗಿದ್ದಾವೆ. ಕಿಟಕಿ ಬಾಗಿಲುಗಳು ಇಲ್ಲ, ಗೋಡೆಗಳಿಗೆ ಬಿರುಕು ಬಂದಿದೆ. ಮನುಷ್ಯರು ಅದರಲ್ಲಿ ವಾಸ ಮಾಡಲು ಆಗುವುದಿಲ್ಲ. ಹಾಕಿರತಕ್ಕಂಥ ಚಾವಣಿ ಸುರಿಯುತ್ತಾ ಇದೆ ನಾವೇನು ಭಾತಬಂಗಲೆಗಳು ಎಂದು ಸಿನೀಮಾದಲ್ಲಿ ಏನು ನೋಡುತ್ತೇವೆ, ಅಂಥ ಮಾದರಿಯ ಕಟ್ಟಡಗಳು ಬೆಂಗಳೂರಿನಲ್ಲಿಯೇ ಇದ್ದಾವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ವಿಷಯ ಸಮಿತಿಯವರು ಆಶ್ರಯ ಯೋಜನೆಯ ಬಗ್ಗೆ ಹೇಳಿದ ಒಂದು ಪ್ಯಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

" It was informed by the Department that under the Ashraya scheme, the contractors had been given a sum of Rs.19,03,06,298/- as advances and a sum of Rs.5 crores and odd has been recovered as on date and attempts are being made to recover the remaining amount. It was further stated that COD enquiry is in progress in this regard. The committee condemns the huge advances made to the contractors in gross violation and flotation of all norms. The committe storngly urges the Department to expedite the enquiry and to bring to book these found guilty in this regard. The Committee desires that though a huge amount is still to be recovered from the contractors, this should not in any way come in the way of expediently implementing the Ashrayascheme"

ಅಂದರೆ ನೀವು ಇನ್ನೂ 14 ಕೋಟಿ ರೂಪಾಯಿಗಳನ್ನು ಕಂಟ್ರಾಕ್ಟರ್‌ಗಳಿಗೆ ಕೊಟ್ಟಿರುವ ಹಣವನ್ನು ವಾಪಸ್ ಪಡೆಯಲಿಕ್ಕೆ ಆಗಿಲ್ಲ. ಎರಡು ವರ್ಷಗಳಿಂದ ಎನ್‌ಕ್ವೈರಿ ಮಾಡುತ್ತಿರುವವರು ಯಾವ ದೇಶದವರು? ತಮಿಳುನಾಡಿನವರೇ? ಕೇರಳದವರೇ? ಅಥವಾ ನಿಮ್ಮ ಸಚಿವಸಂಪುಟದಲ್ಲಿರುವವರಿಗೆ ಯಾರಿಗಾದರೂ ರಕ್ಷಣೆ ಕೊಡಬೇಕೆಂದು ಮಾಡುತ್ತಿದ್ದೀರೋ? ಯಾವ ಕಾರಣಕ್ಕಾಗಿ ಹೀಗೆ ಮಾಡುತ್ತಿದ್ದೀರಿ? ಇನ್ನೇನು ಮಾಡಬಹುದು ಕಮಿಟಿ? ನಿಮಗೆ ಹೊಡೆಯಲಿಕೆ ಆಗುತ್ತದೆಯೋ ಕಮಿಟಿಯಲ್ಲಿರುವುದು ವಿರೋಧಪಕ್ಷದ ಸದಸ್ಯರಿರುವುದು 3 ಜನ. ಆಡಳಿತ ಪಕ್ಷದವರೇ ಹೆಚ್ಚಿರುವ ಕಮಿಟಿ ಇದು. ನಾನು ಹೇಳುತ್ತಿರುವುದಲ್ಲ ಇದು, ಯೂನಾನಿಮಸ್ಲಿ ಹೇಳಿದೆ. ಇದಕ್ಕೆ ಹೊಣೆ ಯಾರು? ಅಧ್ಯಕ್ಷರೇ ನಾನು ಹೇಳುತ್ತೇನೆ, ಇವರು ಏನು ಮಾಡುತ್ತಿದ್ದಾರೆಂದರೆ, 14 ಕೋಟಿ ರೂಪಾಯಿಗಳನ್ನು ಸಂಬಂಧಪಟ್ಟ ಕೆಲವು ಅಧಿಕಾರಿಗಳು ಮೆಂಟೀರಿಯಲನ್ನು ಇವರ ಸಿಒಡಿ ಎನ್‌ಕ್ವೈರಿ

ನಡೆಯುತ್ತಿದ್ದ ಹಾಗೆಯೇ ಅವರ ಜೊತೆ ಕೊಲ್ಯೂಡ್ ಆಗಿ ಆ ಯಾರ್ಡ್‌ಗಳಿಗೆ ತಂದುಹಾಕುವ ಕೆಲಸ ಮಾಡಿ ಪುಸ್ತಕಗಳಿಗೆ ಎಂಟ್ರಿ ಹಾಕತಕ್ಕಂತಹ ಕೆಲಸ ಮಾಡಿ ಪುಸ್ತಕಗಳಿಗೆ ಎಂಟ್ರಿ ಹಾಕತಕ್ಕಂತಹ ಕೆಲಸ ಮಾಡುತ್ತಿದ್ದಾರೆ. ಇವತ್ತು ಹೇಳುತ್ತಿದ್ದೇನೆ, 14 ಕೋಟಿ ನಿಮ್ಮ ಕೈಲಿ ರಿಕವರ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಇದರಲ್ಲಿ ಸರ್ಕಾರದವರು ಶಾಮಿಲಾಗಿದ್ದೀರಿ ಎಂದು ನೇರ ಅಪಾದನೆ ನಾನು ಮಾಡುತ್ತಿದ್ದೇನೆ. ಎರಡು ವರ್ಷ ಬೇಕಾ ನಿಮಗಿದು ಕಲೆಕ್ಟ್ ಮಾಡುವುದಕ್ಕೆ? ಇದರ ಜವಾಬ್ದಾರಿ ಯಾರು? ನನಗೆ ಗೊತ್ತಿದೆ, ಇನ್ನೆರಡೊವರೆ ತಿಂಗಳಿದೆ, ರಾಜ್ಯದ ಜನ ಇದರಬಗ್ಗೆತೀರ್ಮಾನ ಕೊಡುತ್ತಾರೆ. ನಾನು ಏಕೆ ಒತ್ತಾಯಮಾಡುತ್ತಿದ್ದೇನೆಂದರೆ, ನೀವೇನೋ ನಮ್ಮ ಸರ್ಕಾರದಲ್ಲಿ ಏನೂ ಇಲ್ಲ, ನಮ್ಮದು ಓಪನ್ ಸರ್ಕಾರ, ತಪ್ಪೇ ಮಾಡಿಲ್ಲ ಎನ್ನುತ್ತೀರಲ್ಲ ಈಗ ಚುನಾವಣೆಗೆ ಹೋಗುತ್ತಿರುವುದು 200 ದಿನಗಳ ಮೊಯ್ಲಿಯವರ ಸರ್ಕಾರ ಪ್ಲಸ್ ನೂರು ದಿನಗಳ ವೀರೆಂದ್ರಪಾಟೀಲರ ಸರ್ಕಾರ ಎಂದಲ್ಲ, ನೀವು ಹೋಗುತ್ತಿರುವುದು 89ರ ಚುನಾವಣಾ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಗೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದಾದನಂತರ ಈ ನಾಲ್ಕೂವರೆ ವರ್ಷಗಳ ಕಾಲದಲ್ಲಿ ಏನು ನೀವು ಸಾದನೆ ಮಾಡಿದ್ದೀರಿ ಅದನ್ನು ತೋರಿಸಿ ಹೋಗಬೇಕಾಗುತ್ತದೆ ಎನ್ನುವುದನ್ನು ಮರಯಬಾರದು. ಅಪಾದನೆ ಜೊತೆಗೆ ನಾನು ಈ ಸರ್ಕಾರಕ್ಕೆ ಎಚ್ಚರಿಕ್ಕೆ ಕೊಡುತ್ತಿದ್ದೇನೆ. ಇನ್ನು ಒಂದೂವರೆ ತಿಂಗಳಲ್ಲಿ ಈ ಹಣವನ್ನು ಕಂಟ್ರಾಕ್ಟ್‌ದಾರರಿಂದ ಅಥವಾ ಯಾರ್‍ಯಾರು ಹಂಚಿಕೊಂಡಿದ್ದಾರೋ ಅವರೆಲ್ಲರಿಂದ ವಾಪಸ್ ಹೌಸಿಂಗ್ ಬೋರ್ಡಿಗೆ ಕೊಟ್ಟರೆ ಆ ಬಡವರಿಗೆ ಉಪಯೋಗವಾಗುತ್ತದೆ. ಅವರ ಶಾಪ ನಿಮಗೆಲ್ಲರಿಗೂ ತಟ್ಟುತ್ತದೆ. ಒಬ್ಬರಿಗೂ ಸಹ ತಪ್ಪಿದಲ್ಲ. ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದಾದನಂತರ ನಗರಾಭಿವೃದ್ದಿ ಇಲಾಖೆಗೆ ಸಂಬಂಧಿಸಿದಂತೆ ನಮ್ಮ ಕರ್ನಾಟಕ ಅರ್ಬನ್ ವಾಟರ್‌ಸಪ್ಲೈ ಅಂಡ್ ಸ್ಯಾನಿಟೇಷನ್ ಡ್ರೈನೇಜ್ ಬೋರ್ಡ್ ಆಗಿದೆ. ಅದ್ಯಕ್ಷರೇ, ನನಗೆ ಒಂದು ಅರ್ಥವಾಗದೇ ಇರುವುದು ಎಂದರೆ ನಗರಪ್ರದೇಶಗಳಲ್ಲಿನ ಜನರಿಗೆ ಕುಡಿಯುವ ನೀರಿನ ಕೊರತೆ ಬಹಳ ಇದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಇರುವ ತಾಲ್ಲೂಕು ಕೇಂದ್ರಸ್ಥಳಗಳಲ್ಲಿ ದಿವಸಕ್ಕೆ ಅರ್ಧ ಗಂಟೆ ಅಥವಾ ಒಂದು ಗಂಟೆ ಯಾದರೂ ನಾವು ನೀರು ಕೊಡುವುದಕ್ಕೆ ಆಗುತ್ತಿಲ್ಲ. ಇದು ಇರುವ ಪರಿಸ್ಥಿತಿ. ಇಂತಹ ದೊಡ್ಡ ಸಂಸ್ಥೆಗೆ ಈ ವರ್ಷ ಇವರು ಅನುದಾನ ಕೊಟ್ಟಿರುವುದು ಎರಡು ಕೋಟಿ ರೂಪಾಯಿ ಕರ್ನಾಟಕ ಕುಡಿಯುವನೀರಿನಾಗಿ ಇಡೀ ರಾಜ್ಯಕ್ಕೆ ಇವರು ಒದಗಿಸಿರುವುದು ಎರಡು ಕೋಟಿ ರೂಪಾಯಿಗಳು . ಎರಡು ಕೋಟಿ ರೂಪಾಯಿಗಳನ್ನು ನೀವು ಕೊಟ್ಟಿದ್ದೀರಿ, ಆದರೆ ಸಮಿತಿಯವರು ಏನು ಹೇಳಿದ್ದಾರೆಂದರೆ, ಕೊನೆಯಪಕ್ಷ 30 ಕೋಟಿ ರೂಪಾಯಿಗಳನ್ನು ನೀವು ಕೊಡಬೇಕು ಎಂದು. ಇವರು ಏನೂ ಮಾಡಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಬರೀ ಅಶ್ವಾಸನೆಗಳನ್ನು ಕೊಟ್ಟುಕೊಂಡು ಬಂದಿದ್ದೀರಿ.

ಶ್ರೀ ಕೆ.ಜೆ.ಜಾರ್ಜ :- ಸನ್ಮಾನ್ಯ ಅಧ್ಯಕ್ಷರೇ, ಸಿಂಧ್ಯರವರು ನಾಲ್ಕು ವರ್ಷಗಳಿಂದ ಏನೂ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ವಾಸ್ತಾವಂಶ ಏನು ಎಂದು ನಾನು ಹೇಳುತ್ತೇನೆ. ಶ್ರೀ ವೀರೆಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯ ಸರ್ಕಾರ 17

ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಹಾಗೆ ಶ್ರೀ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ 65 ಕೋಟಿ ರೂಪಾಯಿಗಳನ್ನು ರಾಜ್ಯ ಅರ್ಬನ್ ಅಂಡ್ ವಾಟರ್ ಸಪ್ಲೈ ಬೋರ್ಡಿಗೆ ಕೊಟ್ಟಿದೆ. ಈ ವರ್ಷ ಎಷ್ಟು ಕೊಟ್ಟಿದ್ದಾರೆ ಅಂದರೆ ಬರೀ ಎರಡು ಕೋಟಿ ರೂಪಾಯಿಗಳು. ಇದರಿಂದ ನಿಜವಾಗಿ ರಾಜ್ಯ ಸರ್ಕಾರಕ್ಕೆ ಈ ವಿಚಾರದಲ್ಲಿ ಯಾವ ಕಳಕಳಿಯೂ ಇಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇದು ನಾನು ಹೇಳಿರತಕ್ಕದಲ್ಲ, ಇದನ್ನು ಆ ಸಮಿತಿಯವರು ಹೇಳಿರತಕ್ಕದ್ದು. ನೀವು ಆ ಸಮಿತಿಯಲ್ಲಿದ್ದೀರಿ, ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್ :- ಆ ಸಮಿತಿಗೆ ನನ್ನನ್ನು ಹಾಕಿದ್ದುದು ನಿಜ. ಆದರೆ ನಾನು ಆ ಸಮಿತಿ ಸಭೆಗಳಲ್ಲಿ ಪಾಲೊಗೊಳ್ಳಲ್ಲ. ಅದರಿಂದ ಯಾವ ಪ್ರಯೋಜನ ಆಗುವುದಿಲ್ಲವೆಂದು ತಿಳಿದುಕೊಂಡು ನಾನು ಆ ಸಭೆಗಳಲ್ಲಿ ಪಾಲ್ಗೊಳ್ಳಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ :- ನಾನು ಸಮಿತಿಯ ವರದಿಯ ಆಧಾರದ ಮೇಲೆ ಮಾತನಾಡುತ್ತಿದ್ದೇನೆ. ನಿನ್ನೆ ದಿನ ನಾನು ಮತ್ತು ಮಾನ್ಯ ಬೈರೇಗೌಡರು ಕಾವೇರಿ ನೀರಿನ ವಿಚಾರದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಇವರು ಏತಕ್ಕೆ ಈ ಸುಳ್ಳು ಭರವಸೆಯನ್ನು ಈ ಸದನಕ್ಕೆ ಕೊಡುತ್ತಿದ್ದಾರೆ ಎಂಬುದು ನನಗೆ ಗೊತ್ತಾಗಲಿಲ್ಲ. ರಾಜ್ಯದ ಜನತೆಗೆ ಏತಕ್ಕೆ ಮೋಸ ಮಾಡಿಕೊಂಡು ಹೋಗುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿ ಸಗೀರ್ ಅಹ್ಮದ್‌ರವರು ಇದ್ದರು. ಆದರೆ ಮಾನ್ಯ ಪೆರಿಕಲ್ ಮಲ್ಲಪ್ಪನವರು ಇಲ್ಲ. ಮೊನ್ನೆ ಕಾವೇರಿ ನಾಲ್ಕನೇ ಸ್ಟೇಜಿಗೆ ಫೌಂಡೇಷನ್ ಸ್ಟೋನ್ ಹಾಕಿದ್ದಾರೆ. ನನಗೆ ಗೊತ್ತಿರುವ ಹಾಗೆ, ಮೂರನೇ ಸ್ಟೇಜಿನ ಬಿಲ್ಲುಗಳನ್ನು ಇನ್ನೂ ಕ್ಲಿಯರ್ ಮಾಡಿಲ್ಲ. ಕಂಟ್ರಾಕ್ಟ್‌ರ್‌ದಾರರುಗಳು ನನ್ನ ಬಳಿಗೆ ಬಂದು . ನಮ್ಮ ಬಿಲ್ಲುಗಳು ಪೆಂಡಿಂಗ್ ಇವೆ, ನಿಮ್ಮ ಮಾತು ಸರ್ಕಾರದಲ್ಲಿ ನಡೆಯುತ್ತದೆ ಕೊಡಿಸಿಕೊಡಿ ಎಂದು ಹೇಳಿದರು. ಆದರೆ ನನ್ನ ಮಾತು ನಡೆಯುವುದಿಲ್ಲ, ನೀವೇ ನೇರವಾಗಿ ಮಂತ್ರಿಗಳಲ್ಲಿ ಹೋಗಿ ಎಂದು ಹೇಳಿದೆ. ಈಗ ಕಾವೇರಿ ನಾಲ್ಕನೇಯ ಸ್ಟೇಜಿಗೆ ಫೌಂಡೇಷನ್ ಸ್ಟೋನ್ ಹಾಕಿದ್ದಾರೆ. ನಾವು ಏನು ಹೇಳುತ್ತಿದ್ದೇವೆಂದರೆ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ನಿರ್ಧಾರ ತೆಗೆದುಕೊಂಡಿದ್ದರು. ಇದಕ್ಕೆ ಏಕ್ಸಟ್ರಿ ಕಾಸ್ಟ್ ಆಗುವುದಿಲ್ಲ. 4ನೊ ಸ್ಟೇಜ್ ಬೇಕಾಗುವುದಿಲ್ಲ. ಆದರೆ 4ನೇ ಸ್ಟೇಜ್ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಮುಂದಿನ ಡಿಸೆಂಬರ್‌ನಲ್ಲಿ. ಯಾವ ಸರ್ಕಾರ ಬರುತ್ತದೆಯೋ ನೋಡೋಣ. ಮುಂದಿನ ಐದು ವರ್ಷ ಅಡಳಿತ ನಡೆಸತಕ್ಕವರು ಅದನ್ನು ಮಾಡುತ್ತಾರೆ. ನಾನು ಏನು ಒತ್ತಾಯ ಮಾಡುತ್ತಿದ್ದೇನೆಂದರೆ, ಕನಕಪುರದಿಂದ ಬೆಂಗಳೂರಿಗೆ ಬರತಕ್ಕ. ದಾರಿಯಲ್ಲಿ ಬರತಕ್ಕ ಮೂರು, ಪಟ್ಟಣಗಳು ಅಂದರೆ ಕನಕಪುರ, ಹಾರೋಹಳ್ಳಿ ಮತ್ತು ಸಾತನೂರು ಇವುಗಳಿಗೆ ನೀರು ಒದಗಿಸಲು ಕ್ರಮ ಕೈಗೊಳ್ಳಬೇಕು ಆ ಕಡೆ ರಾಮನಗರಂ ಚನ್ನಪಟ್ಟಣಗಳೂ ಬರುತ್ತವೆ. ಇವುಗಳಿಗೆಲ್ಲಾ ನೀರನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮೂರನೇ ಸ್ಕೀಮನಲ್ಲಿಯೇ

ಮಾಡಬಹುದು. ಇದರ ಬಗ್ಗೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೀರಿ. ಇಂಪ್ಲಿಮೆಂಟ್ ಮಾಡುವುದಕ್ಕೆ ಎಕ್ಸಟ್ರಾಕಾಸ್ಟ್ ಒಂದೂವರೆ ಅಥವಾ ಎರಡು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎಲ್.ಐ.ಸಿ ವರು ಸಾಲ ಕೊಡಲು ತಯಾರಾಗಿದ್ದಾರೆ. ಎರಡು ತಿಂಗಳಲ್ಲಿ ಈ ಕಾರ್ಯಕ್ರಮಮಾಡಬಹುದು. ಕನಕಪುರಕ್ಕೆ ನೀರು ಕೊಡಬೇಕು ಎಂಬ ದೃಷ್ಟಿಯಿಂದ ಮಾತ್ರ ಹೇಳುತ್ತಿಲ್ಲ. ಲೈನ್ ಎಸ್ಟಿಮೇಟ್ ಮಾಡಿಸಿ ಎಂದು ಮಾನ್ಯ ಭೈರೇಗೌಡರು ಹೇಳಿದರು.

ಶ್ರೀ ಸಿ.ಬೈರೇಗೌಡ :- ಈಗ ಲೈನ್ ಎಸ್ಟಿಮೇಟ್ ಇದೆ. ವಿವರವಾದ ಎಸ್ಟಿಮೇಟ್, ಸರ್ವೆ,ಫೀಸ್‌ಬಿಲಿಟಿ ಮಾಡಬೇಕಾಗುತ್ತದೆ. ಅದನ್ನು ಇನ್‌ವೆಸ್ಟಿಗೇಷನ್ ಮಾಡಿಸುವುದಕ್ಕೆ ಒಂದು ಸಬ್ ಡಿವಿಜನ್ ತೆರೆಯಿರಿ ಎಂದು ನಾನು ಒತ್ತಾಯ ಮಾಡಿದೆ. ಡೀಟೈಲ್ಡ್ ಎಸ್ಟಿಮೇಟ್ ಮಾಡಬೇಕಾಗುತ್ತದೆ, ಎಲ್ಲವನ್ನೂ ವರ್ಕ್‌ಔಟ್ ಮಾಡಬೇಕಾಗುತ್ತದೆ. ನಾಲ್ಕು ಮುಕ್ಕಾಲು ವರ್ಷದಿಂದ ಇದೂ ಕೂಡ ಆಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : - ಈ ರೀತಿ ಜನಗಳಿಗೆ ಅದು ಮಾಡುತ್ತೇವೆ. ಇದು ಮಾಡುತ್ತೇವೆ ಎಂದು ಹೇಳಿ ಸುಮ್ಮನೆ ಸುಳ್ಳು ಭರವಸೆಗಳನ್ನು ಕೊಡುವುದಕ್ಕೆ ಬದಲಾಗಿ ನಿಮ್ಮ ಕೈಯಲ್ಲಿ ಏನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡಿ. ನಾಲ್ಕನೇಯ ಸ್ಟೇಜಿಗೆ ಫೌಂಡೇಷನ್ ಹಾಕುವ ಫಂಕ್ಷನ್ ಮಾಡಿದಿರಿ. ಅದಕ್ಕೆ ಪ್ರಚಾರ ತೆಗೆದುಕೊಂಡಿರಿ. ಇಂಡಿಯನ್ ಎಕ್ಸಪ್ರೆಸ್‌ನಲ್ಲಿ, ಹಿಂದುನಲ್ಲಿ, ಡೆಕ್ಕಾನ್ ಹೆರಾಲ್ಡ್‌ನಲ್ಲಿ ಟೈಮ್ಸ ಆಫ್ ಇಂಡಿಯಾದಲ್ಲಿ ಫುಲ್‌ಷೇಜ್‌ನಲ್ಲಿ ಪ್ರಜಾರ ತೆಗೆದುಕೊಂಡಿರಿ. ಹೀಗೆ ಎಲ್ಲಾ ಪತ್ರಿಕೆಗಳಲ್ಲಿಯ ಹಾಕಿಸಿಕೊಂಡು ಪ್ರಚಾರ ತೆಗೆದುಕೊಂಡಿದ್ದೀರಿ. ಅದಕ್ಕೆ ಏನಾದರೂ ಅರ್ಥ ಇದೆಯೇ? ಇದನ್ನು ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಸಾಧ್ಯ ಇದೆಯೇ? ಏತಕ್ಕೆ ಈ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ? ಇದನ್ನು ನಾನು ಖಂಡಿಸುತ್ತೇನೆ. ನಾನು ಈ ಸರ್ಕಾರದವರಲ್ಲಿ ಒತ್ತಾಯ ಮಾಡತಕ್ಕದ್ದು ಏನೆಂದರೆ ಡೈರಕ್ಟರ್ ಆಫ್ ಮುನಿಸಿಪಲ್ ಅಡ್ ಮಿನೆಷ್ಟ್ರನ್‌ಗೆ ಸಂಬಂಧಪಟ್ಟ ಹಾಗೆ ಇಂಟಿಗ್ರೇಟೆಡ್ ಡೆವಲೆಪ್‌ಮೆಂಟ್ ಆಫ್ ಮೀಡಿಯಂ ಟೌನ್ಸ್ ಏನು ಇದೆ ಅದರ ಬಗ್ಗೆ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಶ್ರೀ ಮಾನ್ಯ ದೇವರಾಜ್ ಅರಸ್ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹುಡ್ಕೋ ಸಂಸ್ಥೆಯ ಸಹಕಾರದಿಂದ ಎಲ್ಲಾ ಅಭಿವೃದ್ಧಿ ಪ್ರದೇಶಗಳಲ್ಲೂ 30-40 ಏಕರೆ ಜಮೀನುಗಳನ್ನು ತೆಗೆದುಕೊಂಡು ಸೈಟುಗಳನ್ನು ಮಾಡಿ ಹಂಚಿ ಕುಡಿಯುವ ನೀರು, ಡ್ರೈನೇಜ್ ಸಿಸ್ಟಮ್ ಮುಂತಾದವುಗಳನ್ನು ಮಾಡಬೇಕು ಎಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಇದು ಬಹಳ ಮುಖ್ಯವಾಗಿ ನಮ್ಮ ಹಳೆಯ ಕರ್ನಾಟಕ ತಾಲ್ಲುಕು ಪ್ರದೇಶಗಳಿಗೆ ಸ್ವಲ್ಪ ಹೋಗಬಹುದು. ಆದರೆ ಮುಂಬಯಿ- ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕಗಳಲ್ಲಿ ತಾಲ್ಲೂಕು ಕೇಂದ್ರಗಳು ಏನು ಇವೆ, ಅಲ್ಲಿ ನಿಜವಾಗಿ ತೊಂದರೆ ಉಂಟಾಗಿದೆ. ಗುಲಬರ್ಗಾ ಇರಬಹುದು, ಜೇವರ್ಗಿ ಇರಬಹುದು, ಚಿತಾಪುರ ಇರಬಹುದು, ಷಹಪುರ, ಸುರಪುರ ಇರಬಹುದು. ಹಾಗೂ ಬೀದರ್‌ನಲ್ಲಿರುವ ತಾಲ್ಲೂಕು ಕೇಂದ್ರಗಳು ಇರಬಹುದು. ಈ ತಾಲ್ಲೂಕು ಕೇಂದ್ರಗಳಲ್ಲಿ ಡ್ರೆನೇಜ್ ಸಿಸ್ಟಮ್ ಏನೂ ಮಾಡಿಲ್ಲ. ಅರ್ಥ ಗಂಟೆ ಅಥವಾ

ಒಂದು ಗಂಟೆ ಮೇಲೆ ಅಲ್ಲಿ ನೀರು ಕೊಡುವುದಕ್ಕೆ ಆಗಿಲ್ಲ. ಇದಕ್ಕೆ ಕಾರಣ ಏನು ಎಂಬುದನ್ನು ವಿಚಾರ ಮಾಡಬೇಕು. ಇದು ಬಹಳ ನೆಗ್ಲೆಕ್ಟೆಡ್ ಪ್ರೋಗ್ರಾಂ ಆಗಿದೆ ಈಗ ಏನಾಗಿದೆ ಎಂದರೆ ಹಂದಿ ಸಂಖ್ಯೆ ಹೆಚ್ಚು ಮಾಡಿದ್ದಾರೆ. ಆದ್ದರಿಂದ ಅಲ್ಲಿ ಹಂದಿಗಳೇ ಹೆಲ್ತ್ ಇನ್ಸ್‌ಪೆಕ್ಟರ್ ಕೆಲಸ ಮಾಡತಕ್ಕ ಸ್ಥಿತಿಗೆ ಬಂದಿದೆ. ಕೇಂದ್ರ ಸರ್ಕಾರದಿಂದ ಇದಕ್ಕೆ ವಿಶೇಷವಾದ ಹೆಚ್ಚಿನ ಹಣ ಕೊಡತಕ್ಕ ಕಾರ್ಯಕ್ರಮ ಇದೆ. ಸಮಿತಿಯವರು ಇದರ ಬಗ್ಗೆ ಏನು ಹೇಳುತ್ತಾರೆಂದರೆ,"This Government has failed in bringing the money from the Government of India under various schemes." ನೀವು ಸ್ಕೀಮ್ ಮಾಡಿಕೇಂದ್ರಕ್ಕೆ ತೆಗೆದುಕೊಂಡು ಹೋಗಿ, ಅವರ ಜೊತೆಗೆ ಕುಳಿತುಕೊಂಡು ಹಣವನ್ನು ಬಿಡುಗಡೆ ಮಾಡಿಸುವ ಶಕ್ತಿ ನಿಮಗೆ ಇಲ್ಲವೋ ಅಥವಾ ಮನಸ್ಸು ಇಲ್ಲವೋ ಅಥವಾ ಸಾಮರ್ಥ್ಯ ಇಲ್ಲವೋ ಏನು ಎಂಬುದು ನನಗಂತೂ ಅರ್ಥವಾಗುವುದಿಲ್ಲ. ಇದನ್ನು ಸಮಿತಿಯವರೂ ಸಹಿತ ಟೀಕೆ ಮಾಡಿದ್ದಾರೆ. ಇದನ್ನು ಸರ್ಕಾರದವರು ಗಮನಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಈ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಬೆಂಗಳೂರು ಮೆಟ್ರೋಪೌಲಿಟನ್ ರೀಜನ್ ಡೆವಲಪ್‌ಮೆಂಟ್ ಅಥಾರಿಟಿ ಎಂದು ನಾವು ಮಾಡಿಕೊಂಡಿದ್ದೇವೆ. ಇದಕ್ಕೆ ಒಬ್ಬ ನಮ್ಮ ಸರ್ಕಾರದ ಅತ್ಯಂತ ಉನ್ನತ ಅಧಿಕಾರಿಗಳನ್ನು ಮುಖ್ಯಸ್ಥರನ್ನಾಗಿ ಅಂದರೆ ಅಡಿಷನಲ್ ಚೀಫ್ ಸೆಕ್ರೆಟರಿ ಗ್ರೇಡ್ ಅಫೀಸರನ್ನು ಇದಕ್ಕೆ ಛೇರ್ಮೆನ್ನೂ ಅಥವಾ ಎಂ.ಡಿ.ಯಾಗೋ ನಾವು ಅಪಾಯಿಂಟ್ ಮಾಡಿಕೊಂಡಿದ್ದೇವೆ. ಕಮಿಟಿಯವರು ಹೇಳುತ್ತಾರೆ. " The lack of political and administrative will, have been singly responsible for the contempt towards the rules and regulations. The Corportation has shown utter negligence in protecting its valuable properties and has covertly helped the greedy persons with necessary connections to grab/ encroach the prime lands in the Bangalore City."ಮಾನ್ಯ ಸಗೀರ್ ಅಹಮದ್‌ರವರೇ ಇದನ್ನು ನೀವು ಓದಿದ್ದೀರಾ ಇದನ್ನು ಓದಿದರೆ ಇದಕ್ಕೆ ನೀವು ಉತ್ತರ ಕೊಡಬೇಕು.I am demanding in this House. ಇದರ ಬಗ್ಗೆ ಸರ್ಕಾರ ಯಾವ ರೀತಿ ಕೊಲ್ಯೂಡ್ ಆಗಿದೆ, ನೀವು ಇವತ್ತು ಉತ್ತರ ಕೊಡುವುದಕ್ಕೆ ಆಗದಿದ್ದರೂ ಪರವಾಗಿಲ್ಲ, ಇನ್ನು ಮೂರು ದಿನಗಳ ಒಳಗಡೆ ರಾಜ್ಯದ ಜನತೆಗೆ ನೀವು ಉತ್ತರವನ್ನು ಕೊಡಬೇಕಾಗುತ್ತದೆ. ಮೆಟ್ರೋಪಾಲಿಟನ್ ಬೋರ್ಡ್ ಇದಕ್ಕೆ ಏನೂ ಪವರ್ಸ್ ಕೊಟ್ಟಿಲ್ಲ. ಇದರ ಕಡೆ ನಮ್ಮ ಸರ್ಕಾರದವರು ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ. ಇನ್ನು ಆಹಾರ ಮತ್ತು ನಾಗರೀಕ ಪೂರೈಕೆಗೆ ಸಂಬಂಧಪಟ್ಟಹಾಗೆ ನಮ್ಮ ಮಂತ್ರಿಗಳಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯಕ್ಕೆ ಬರುತ್ತಿರುವಂಥ ಸೀಮೆಎಣ್ಣೆ ಪ್ರಮಾಣ ಬಹಳ ಕಡಿಮೆ ಇದೆ. ನಾವೆಲ್ಲ ಶಾಸಕರುಗಳು ಹೋಗಿ ಆಜಿಲ್ಲಾಧಿಕಾರಿಗಳ ಮೇಲೆ ಆಗಾಗ್ಗೆ ಸೀಮೆಎಣ್ಣೆ ಸಾಲುವುದಿಲ್ಲ ಎಂದು ಒತ್ತಾಯವನ್ನು ಮಾಡುತ್ತಿರುತ್ತೇವೆ. ಈ ಸಮಿತಿಯ ವರದಿಯಲ್ಲೂ ಸಹಿತ ಅದನ್ನೇ ಹೇಳಿದ್ದಾರೆ. ಏನಾಗಿದೆ ಎಂದರೆ, ಈ ಸೀಮೆಎಣ್ಣೆ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಪ್ರಾರಂಭದಿಂದಲೂ ಸಹಿತ ನಮ್ಮ ಮೇಲೆ ತಾರತಮ್ಯವನ್ನು ಮಾಡಿಕೊಂಡು ಬಂದೇ ಇದ್ದಾರೆ. ನಮಗೆ ಕೊಡುತ್ತಿರತಕ್ಕಂಥ ಅಲಾಟ್‌ಮೆಂಟ್ ಬಹಳ

ಕಡಿಮೆ ಇದೆ. ನಾನು ಒತ್ತಾಯ ಮಾಡುತ್ತಿದ್ದೇವೆ. ಈ ಸೀಮೆಎಣ್ಣೆಯ ಪ್ರಮಾಣವನ್ನು ಜಾಸ್ತಿ ಮಾಡುವುದಕ್ಕೆ ನೀವು ಕೇಂದ್ರ ಸರ್ಕಾರದಮೇಲೆ ಒತ್ತಾಯವನ್ನು ತರಬೇಕು. ಮತ್ತೆ ಎರಡು ರೀತಿಯ ಸೀಮೆಎಣ್ಣೆಕೊಡುತ್ತಿರುವಂಥದ್ದು ಇದೆ. ಕೇವಲ ಪಡಿತರ ಚೀಟಿ ಏನು ಇದೆ, ಅವರಿಗೆ ಮತ್ತು ಕೆಲವರು ತಹಶೀಲ್ದಾರ್‌ಗಳು ಕೆಲವು ಕಡೆಗಳಲ್ಲಿ ವಿಶೇಷವಾದ ಮಾಡಿದ್ದಾರೆ. ನಾನೇನು ಒತ್ತಾಯ ಮಾಡುತ್ತೇನೆಂದರೆ, ಕೆಲವು ಜಿಲ್ಲೆಗಳಲ್ಲಿ ನಮ್ಮ ರೈತರು ಪಂಪ್‌ಸೆಟ್‌ಗಳಿಗೋಸ್ಕರ ಸೀಮೆಎಣ್ಣೆಯನ್ನು ಕೇಳುತ್ತಾರೆ. ಮತ್ತೆ ಕೆಲವು ಕಡೆಗಳಲ್ಲಿ ವಿಶೇಷವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರರು ಸೀಮೆಎಣ್ಣೆ ಬಳಕೆಗಾಗಿ ಬಹಳ ಕೇಳುತ್ತಾರೆ. ಅದಕ್ಕೆ ಒಂದು ಪರ್ಮಿಟ್ಟನ್ನು ಕೊಡಬೇಕು ಎಂದು ಮೂರು ಸಾರಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸಮಿತಿಯ ವರದಿಯಲ್ಲೂ ಅದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ವರದಿಯನ್ನು ನಾನು ಓದಿದೆ ತಾವು ಇದಕ್ಕೆ ಗಮನವನ್ನು ಕೊಟ್ಟು ಸೀಮೆಎಣ್ಣೆ ಪ್ರಮಾಣವನ್ನು ಹೆಚ್ಚು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಕೊನೆಯದಾಗಿ ಸಾರಿಗೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಈಗ ಖಂಡ್ರೆಯವರ ಪ್ರಾಮಾಣಿಕತೆ ಬಗ್ಗೆ ನಾನು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ಅಥವಾ ಖಂಡ್ರೆಯವರ ದಕ್ಷತೆಯ ಬಗ್ಗೆಯೂ ಸಹಿತ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ದುರ್ದೈವದಿಂದ ಕಳೆದ ನಾಲ್ಕು ವರ್ಷಗಳಲ್ಲಿ ಸಾರಿಗೆ ಇಲಾಖೆಯ ಆಡಳಿತ ಮಂಡಲಿಯಲ್ಲಿ ಆಗಿರತಕ್ಕಂಥ ಬದಲಾವಣೆಗಳಿಂದಾಗಿ ಅದು ಬಹಳ ಕೆಟ್ಟ ಸ್ಥಿತಿಗೆ ಬಂದಿದೆ. ಅರ್ಥಿಕವಾಗಿ ಸಾರಿಗೆ ಸಂಸ್ಥೆ ಇದು ಮೊದಲನೇ ಸಾರಿ ಅಲ್ಲ ತೊಂದರೆಗೆ ಸಿಕ್ಕಿಹಾಕಿಕೊಂಡಿರತಕ್ಕಂಥದ್ದು, ಆದರೆ ಇಂಥಸ್ಥಿತಿ ಸಾರಿಗೆ ಸಂಸ್ಥೆಗೆ ಯಾವತ್ತೂ ಸಹಿತ ಬಂದಿರಲಿಲ್ಲ. ನನಗೆ ಗೊತ್ತಿರುವ ಹಾಗೆ, ಈ ವರ್ಷ ಒಂದರಲ್ಲೇ ಸುಮಾರು 100 ರಿಂದ 120 ಕೋಟಿ ರೂಪಾಯಿ ಲುಕ್ಸಾನು ಆಗುತ್ತಿದೆ ಎಂದು ನಾನು ಕೇಳಿದ್ದೇನೆ. ಒಂದು ವರ್ಷದ ಹಿಂದೆ ತಾನೇ ಸಾರಿಗೆ ದರಗಳನ್ನು ಹೆಚ್ಚು ಮಾಡಿದಾಗ ನನ್ನ ಅಧ್ಯಕ್ಷತೆಯಲ್ಲಿ ಒಂದು ವರದಿಯನ್ನು ಕೊಡಬೇಕು ಎಂದು ತಾವು ಸಮಿತಿಯನ್ನು ರಚನೆ ಮಾಡಿದ್ದೀರಿ. ಆ ಸಮಿತಿಯ ವರದಿಯನ್ನು ಸಹಿತ ನಾನು ಈಗಾಗಲೇ ಕೊಟ್ಟು ಮೂರು ತಿಂಗಳು ಆಗಿದೆ.ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದೂ ಸಹ ನನಗೆ ಗೊತ್ತಿಲ್ಲ.

(ಮಾನ್ಯ ಬಿ.ಎಂ. ಇದಿನಬ್ಬ ಅವರು ಅಧ್ಯಕ್ಷ ಸಾಧನವನ್ನು ಅಲಂಕರಿಸಿದರು)

ಆದರೆ ಒಂದು ವಿಚಾರವನ್ನು ಸರ್ಕಾರದವರು ತಿಳಿಸಬೇಕಾಗುತ್ತದೆ. ಆ ಸಮಿತಿಯ ವರದಿಯನ್ನು ತಾವು ಕಾರ್ಯಗತ ಮಾಡುತ್ತಿದ್ದೀರೋ ಅಥವಾ ಇಲ್ಲವೋ ಎನ್ನುವುದು ಸಾರ್ವಜನಿಕರಿಗೆ ಗೊತ್ತಾಗಬೇಕು. ನಾನು ವರದಿ ಕೊಟ್ಟಿದ್ದೇನೆ ಎನ್ನುವ ದೃಷ್ಟಿಯಿಂದ ಅಲ್ಲ, ಸಾರ್ವಜನಿಕರ ದೃಷ್ಟಿಯಿಂದಾಗಿ ಅದು ಗೊತ್ತಾಗಬೇಕಾಗುತ್ತದೆ, ತಾವು ತಿಳಿಸಬೇಕಾಗುತ್ತದೆ. ಅದನ್ನು ಸದನದಲ್ಲಿ ಮಂಡನೆ ಮಾಡಿದ್ದೇವೆ. ಅದನ್ನು ಒಪ್ಪಿದ್ದೀರೋ ಅಥವಾ ಇಲ್ಲವೋ ಎಂಬ ಒಂದು ವಿಚಾರವನ್ನು ತಾವು ಹೇಳಬೇಕಾಗುತ್ತದೆ. ಮತ್ತೆ ಎರಡನೆಯದಾಗಿ ಸಧ್ಯದಲ್ಲಿ ಕೊನೆಯಪಕ್ಷ ಮಾನ್ಯ ಖಂಡ್ರೆಯವರು ಮಾಡಬಹುದಾದ ಒಂದು ಕೆಲಸ ಏನೆಂದರೆ ಅಲ್ಲಿ

ಬಹಳ ಮುಖ್ಯವಾಗಿ ಆಡಳಿತ ಮಂಡಲಿ ಮತ್ತು ಕಾರ್ಮಿಕರ ಮಧ್ಯೆ ಸೌಹಾದಶಯುತವಾದ ವಾತಾವರಣ ಇಲ್ಲ. ಆ ಸೌಹಾರ್ದಯುತವಾದ ವಾತಾವರಣ ಬರಲಿಕ್ಕೆ ತಕ್ಷಣ ತಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಅವರು 29ನೇ ತಾರೀಖು ಧರಣಿ ಮಾಡುತ್ತೇವೆ. ಸತ್ಯಾಗ್ರಹ ಮಾಡುತ್ತೇವೆ. ಎಂದು ಹೊರಟಿದ್ದಾರೆ. ಅವರ ಬೇಡಿಕೆಗಳು ಏನು ಇವೆ, ಅವರನ್ನು ಕರೆಯಿಸಿ ಪರಿಶೀಲನೆಮಾಡಿ, ಬಗೆಹರಿಸಿ ಒಂದು ಸೌಹಾರ್ದಯುತವಾದ ವಾತಾವರಣವನ್ನು ನಿರ್ಮಾಣ ಮಾಡಿದರೆ ಅಲ್ಲಿ ಇರತಕ್ಕ ಲುಕ್ಸಾನನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವೇನೋ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತೊಂದು ತಪ್ಪು ಈ ಸರ್ಕಾರ ವ್ಯವಸ್ಥಿತವಾಗಿ ಮಾಡುತ್ತಿರತಕ್ಕುದ್ದು. ಸಾರಿಗೆ ಮಂತ್ರಿಗಳು ಮೂರು ಜನ ಆಗಿದ್ದಾರೆ. ಅಜೀಜ್ ಸೇಠ್ ಅವರಿದ್ದರು ಆಮೇಲೆ ಜಾರ್ಜ್ ಅವರು ಇದ್ದರು, ಆಮೇಲೆ ತಾವು ಆಗಿದ್ದೀರಿ. ಅದು ರಾಜಕೀಯ ನಿರ್ಧಾರ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ ಎಷ್ಟು ಜನ ಬೇಕಾದರೂ ಬರಲಿ. ಆದರೆ ನನ್ನ ತಕರಾರು ಏನೆಂದರೆ ಅಲ್ಲಿ ನಿಮಗೆ ಗೊತ್ತಿರುವ ಹಾಗೆ ರೋಡ್ ಟ್ರಾನ್ಸ್‌ಪೋರ್ಟ್ ಆಕ್ಟ್ ಪ್ರಕಾರವಾಗಿ ಅಲ್ಲಿರತಕ್ಕ ವಿಸಿ ಎಂಡಿ. ಏನು ಇದ್ದಾರೆ ಎಲ್ಲಾ ಅಧಿಕಾರವೂ ಅವರ ಕೈಯಲ್ಲೇ ಇರತಕ್ಕಂಥಾದ್ದು ಈ ನಾಲ್ಕು ವರ್ಷಗಳಲ್ಲಿ ನೀವು ಐದು ಜನ ಎಂಡಿಗಳನ್ನು ನೇಮಕ ಮಾಡಿದ್ದೀರಿ. ಈಗ ಐದನೆಯವರು ಬಂದಿದ್ದಾರೆ. ಅದು ಬಹಳ ದೊಡ್ಡ ಸಂಸ್ಥೆ ಒಂದು ದಿವಸಕ್ಕೆ ಒಂದೂವರೆ, ಎರಡು ಕೋಟಿ ರೂಪಾಯಿ ವ್ಯವಹಾರ ಆಗತಕ್ಕ ಇಲಾಖೆ ಅದು. ಅಂತಹ ಒಂದು ದೊಡ್ಡ ಇಲಾಖೆಯ ಆಗುಹೋಗುಗಳನ್ನು ಒಬ್ಬ ಉನ್ನತ ಅಧಿಕಾರಿ ಅರ್ಥ ಮಾಡಿಕೊಳ್ಳಬೇಕಾದರೆ ಕೊನೆಯ ಪಕ್ಷ ಮೂರ್‍ನಾಲ್ಕು ತಿಂಗಳು ಬೇಕಾಗುತ್ತದೆ. ಅದು ತಿಂಗಳಿಗೆ ಒಂದು ಸಾರಿ ನೀವು ಎಂಡಿಗಳನ್ನು ಬದಲಾವಣೆ ಮಾಡಿಕೊಂಡು ಕುಳಿತರೆ ಹೇಗೆ ಸಾರಿಗೆ ಸಂಸ್ಥೆಗೆ ಅನುಕೂಲ ಮಾಡಿಕೊಡುವುದಕ್ಕೆ ಆಗುತ್ತದೆ. ಇವತ್ತು ಸಾರ್ವಜನಿಕರ ಅಭಿಪ್ರಾಯ ಕೇಳಿ, ಸದನದ ಯಾವುದೇ ಸದಸ್ಯರ ಅಭಿಪ್ರಾಯವನ್ನು ಕೇಳಿ, ಇವತ್ತು ಸಾರಿಗೆ ಸಂಸ್ಥೆಯ ಬಸ್‌ಗಳು ಟೈಮಿಗೆ ಸರಿಯಾಗಿ ಓಡುವುದಿಲ್ಲ. ಓವರ್‌ಲೋಡಿಂಗ್ ಆಗುತ್ತಿದೆ ಎಂದು ಹೇಳಿದ್ದಾರೆ. ತಾವು ಮೊನ್ನೆಯ ದಿವಸ ಪ್ರಶ್ನೋತ್ತರ ಸಮಯದಲ್ಲಿ ಬಸ್‌ಗಳನ್ನು ಎಷ್ಟುಬೇಕಾದರೂ ಕೊಡುತ್ತೇನೆಂದು ಹೇಳಿದ್ದೀರಿ, ನಿಜ. ಬಸ್‌ಗಳನ್ನು ಕೊಡುವುದಕ್ಕೆ ತೊಂದರೆ ಇಲ್ಲ, ನಿಮ್ಮ ಹತ್ತಿರ ಈಗ ಬಸ್‌ಗಳು ಇವೆ. ಈಗ ತೊಂದರೆ ಆಗಿರತಕ್ಕದ್ದು, ಬಸ್‌ಗಳಿಗೆ ಅಲ್ಲ. ತೊಂದರೆ ಆಗಿರತಕ್ಕದ್ದು, ಬಸ್‌ಗಳಿಗೆ ಬೇಕಾಗಿರತಕ್ಕ ಕಂಡಕ್ಟರ್, ಡ್ರೈವರ್‌ಗಳ ತೊಂದರೆ. ಅವರು ಸಮಯಕ್ಕೆ ಸರಿಯಾಗಿ ಬರುವ ಹಾಗೆ ಮಾಡುವುದೇ ಅವರನ್ನು ಕೊಡುವುದೇ ನಿಮಗೆ ಆಗಿರತಕ್ಕ ತೊಂದರೆ. ಅದನ್ನು ನೀವು ಸರಿ ಮಾಡ ಬೇಕಾದರೆ ಆಡಳಿತ ಮಂಡಲಿಯ ಮೇಲೆ ನಿಮಗೆ ಹಿಡಿತ ಇರಬೇಕಾಗುತ್ತದೆ. ಆಡಳಿತ ಮಂಡಲಿಯವರು ಕಾರ್ಮಿಕರ ಜೊತೆಯಲ್ಲಿ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ಕಾರಣಗಳಿಗೆ ಸರ್ಕಾರವೇ ಹೊಣೆ. ಇವರು ವರ್ಷಕ್ಕೆ ಎರಡು ಸಾರಿ, ಆರು ತಿಂಗಳಿಗೆ ಒಂದು ಸಾರಿ ವ್ಯಾವಸ್ಥಾಪಕ ನಿರ್ದೇಶಕರನ್ನು ಬದಲಾವಣೆ ಮಾಡಿರತಕ್ಕದ್ದು. ಮತ್ತು ಇನ್ನೊಂದು ಏನಾಗಿದೆ ಎಂದರೆ,ಸುಮಾರು ಮೂರು ವರ್ಷಗಳ ಹಿಂದೆ ಮ್ಯಾಕ್ಸಿ ಕ್ಯಾಬ್‌ಗಳಿಗೆ ಪರ್ಮಿಷನ್ ಕೊಟ್ಟರು ಒಂದಲ್ಲ ಎರಡಲ್ಲ ಎಂಟು ಸಾವಿರ ಮ್ಯಾಕ್ಸಿ ಕ್ಯಾಬ್‌ಗಳಿಗೆ ಪರ್ಮಿಷನ ಕೊಟ್ಟಿದ್ದಾರೆ.ಈಗ ಅದನ್ನು ವಾಪಸ್ ಕಳಿಸುವುದಕ್ಕೆ ಆಗುವುದಿಲ್ಲ. ಈಗ ಆ ಮ್ಯಾಕ್ಸಿ

ಕ್ಯಾಟ್‌ಗಳು ಅನಿವಾರ್ಯವಾಗಿ ಬಂದು ಬಿಟ್ಟಿದ್ದಾವೆ. ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆ ಮ್ಯಾಕ್ಸಿಕ್ಯಾಪ್‌ಗಳನ್ನು ನಾವು ಈಗ ಏನು ಮಾಡಬಹುದು ಎಂದರೆ, ನಾನು ಇಷ್ಟೇ ತಮಗೆ ಸಲಹೆ ಕೊಡತಕ್ಕದ್ದು. ಪ್ರತಿದಿನ ಸುಮಾರು 30-40 ಲಕ್ಷ ರೂಪಾಯಿ ಕಡಿಮೆ ಕಲೆಕ್ಷನ್ಸ್ ಆಗುತ್ತಿದೆ. ಅದನ್ನು ಸರಿ ಮಾಡಬೇಕಾದರೆ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಈಗ ನ್ಯಾಷನೆಲೈಸ್ಡ್ ರೂಟ್ಸ್ ಏನು ಇವೆ, ಆ ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಈ ಮ್ಯಾಕ್ಸಿ ಕ್ಯಾಬ್‌ಗಳು ಬರದೇ ಇರುವ ಹಾಗೆ ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಹಾಗೂ ಪೋಲೀಸ್ ಡಿ ಪಾರ್ಟ್‌ಮೆಂಟಿನ ಸಹಕಾರ ಪಡೆದು ಕೊಡಬೇಕು. ನಾನ್‌ನ್ಯಾಷನಲೈಸ್ಡ್ ಏರಿಯಾಸ್ ಏನು ಇವೆ ಅಥವಾ ಪ್ರೈವೇಟ್ಸ್ ನವರು ಹೋಗತಕ್ಕ ರೋಟ್ಸ್ ಏನು ಇವೆ, ಅಲ್ಲಿ ಸ್ಪೆಸಿಫೈಡ್ ರೂಟ್ಸ್ ಮಾಡಬೇಕು ಈಗ ಮ್ಯಾಂಕ್ಸಿಕ್ಯಾಬ್‌ಗಳು ಅನ್ ಎಂಪ್ಲಾಯ್ಡ್ ಯೂತ್ಸ್. ಅವರ ಬಗ್ಗೆ ಸಹ ನಮ್ಮ ಸಿಂಪತಿ ಇದೆ. ಜೊತೆಗೆ ಅವರು ನಮ್ಮ ಬ್ಯಾಂಕ್‌ನಿಂದಲೇ,ನಮ್ಮ ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳಿಂದಲೇ ಸಾಲವನ್ನು ತೆಗೆದುಕೊಂಡಿದ್ದಾರೆ. ಈಗ ಅವರನ್ನು ಓಡಿಸುವುದಕ್ಕೆ ಆಗುವುದಿಲ್ಲ. ಅದು ಅನಿವಾರ್ಯವಾಗಿ ಬಂದು ಬಿಟ್ಟಿದೆ. ಕೊನೆಯ ಪಕ್ಷ ಇನ್ನು ಮುಂದೆ ನೀವು ಮ್ಯಾಕ್ಸಿಕ್ಯಾಬ್‌ನ್ನು ಕೊಡಲಿಕ್ಕೆ ಹೋಗಬೇಡಿ. ತಾವು ಏನು ಮಾಡಬೇಕು ಎಂದು ಅಂದರೆ, ಇರತಕ್ಕ ಮ್ಯಾಕ್ಸಿ ಕ್ಯಾಬ್‌ಗಳಿಗೆ ಸ್ಪಿಸ್ಕ್ರೈಬ್ಡ್ ರೂಟ್ಸನ್ನು ಕೊಡಬೇಕು. ಈಗ 9 ಜಿಲ್ಲೆಗಳು ಸಂಪೂರ್ಣವಾಗಿ ಏರಿಯಾವೈಸ್‌ನ್ಯಾಷನಲೈಸ್ ಆಗಿವೆ. ಆ ಏರಿಯಾವೈಸ್ ನ್ಯಾಷನಲೈಸ್ ಆಗಿರುವುದಕ್ಕೆ ನೀವು ಏನೂ ಮಾಡುವುದಕ್ಕೆ ಹೋಗಬೇಡಿ. ಬಾಕಿ ನ್ಯಾಷನಲೈಸ್ ಆಗದೇ ಇರುವಂತಹ ಕೆಲವು ಏರಿಯೂಸ್ ಏನು ಇವೆ, ಅಂತಹ ಕಡೆಗಳಲ್ಲಿ ಕೆಲವು ರೂಟ್ಸ್ ನ್ನು ಬಿಟ್ಟು ಅವಕ್ಕೆ ಸ್ಟೆಸಿಫೈಡ್ ರೂಟ್ಸ್ ಮಾಡಬೇಕು. ತಾವು ಹೋಮ್ ಸೆಕ್ರೆಟರಿ, ಟ್ರಾನ್ಸ್‌ಪೋರ್ಟ್ ಸೆಕ್ರೆಟರಿ, ಕೆಎಸ್‌ಆರ್‌ಟಿಸಿ ಎಂ.ಡಿ.ಅವರ ಜೊತೆಯಲ್ಲಿ ಒಂದು ದಿನ ಕುಳಿತುಕೊಂಡು ಅದನ್ನು ಜಿಲ್ಲಾ ವೈಸ್ ಮಾಡಬೇಕು. ಜಿಲ್ಲಾಧಿಕಾರಿಗಳಿಗೆ ಎಸ್‌ಪಿಗಳಿಗೆ ಅಧಿಕಾರ ಕೊಟ್ಟರೆ ಅದು ಸಾಧ್ಯ ಎಂದು ನಾನು ನಂಬಿದ್ದೇನೆ ತಾವು ಅದನ್ನು ಮಾಡುವುದರಿಂದ ಜನರಿಗೂ ಅನುಕೂಲವಾಗುತ್ತದೆ,. ಸಂಚಾರ ಒತ್ತಡವೂ ಕಡಿಮೆಯಾಗುತ್ತದೆ, ಸಾರಿಗೆ ಸಂಸ್ಥೆಯ ಆದಾಯ ಕೂಡ ಜಾಸ್ತಿಯಾಗುತ್ತದೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಕೆ.ಜೆ. ಜಾರ್ಜ್ :- ಮಾನ್ಯ ಸದಸ್ಯರಾದ ಸಿಂಧ್ಯರವರು ಮಾತನಾಡುತ್ತಾ ಸಾರಿಗೆ ವಿಚಾರದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಲ್ಲಾ ಹಾಳಾಗಿದೆಯೆಂದು ಹೇಳಿದರು ಅವರು ಹಿಂದೆ ಸಾರಿಗೆ ಸಚಿವರಾಗಿದ್ದರು. ಅವರಿಗೆ ಗೊತ್ತಿದ್ದಿರಬಹುದು. ಏನೆಂದರೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ರಾಷ್ಟ್ರದಲ್ಲಿರುವ ಎಲ್ಲಾ ರಸ್ತೆ ಸಾರಿಗೆ ನಿಗಮಗಳ ಸಾಧನೆಗಳನ್ನು ಗಮನಿಸಿ. ನಮ್ಮ ರಾಜ್ಯ ರಸ್ತೆ ಸಾರಿಗೆ ನಿಗಮ ಅತ್ಯುತ್ತಮ ಸಾಧನೆಗೈದಿರುವುದಕ್ಕೆ ಪ್ರಶಸ್ತಿ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಎಂದು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :- ಈಗI am going into debate. ನಾಲ್ಕು ವರ್ಷಗಳ ಕಾರಣವೇ? ಅಥವಾ ಹತ್ತು ವರ್ಷಗಳ ಕಾರಣವೇ? ಅಥವಾ ನಾನು ಕಾರಣವೇ? ಅದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಸಾರಿಗೆ ನಿಗಮದಲ್ಲಿ ಯಾವ ರೀತಿ ಕಾರ್ಯಕ್ರಮ

ಹಮ್ಮಿಕೊಳ್ಳಲಾಗಿದೆ? ಎಲ್ಲೆಲ್ಲಿ ತಪ್ಪಾಗಿದೆ? ಎಂಬುದು ನಮಗೆ ಗೊತ್ತಾಗಿದೆ. ಅದನ್ನು ಸರಿಪಡಿಸುವುದಕ್ಕೆ ನಾವು ಕುಳಿತುಕೊಂಡು ಪ್ರಯತ್ನಿಸಬೇಕೇ ಹೊರತು....

ಶ್ರೀ ಕೆ.ಜೆ.ಜಾರ್ಜ್ :- ತಾವು ಹೇಳುವಾಗ ದಯವಿಟ್ಟು ಎಲ್ಲವನ್ನೂ ಹೇಳಬೇಕು.

ಶ್ರೀ ಪಿ.ಜೆ.ಆರ್. ಸಿಂಧ್ಯ :- ಅದಕ್ಕೋಸ್ಕರ ನಾನು ಸಲಹೆಗಳನ್ನು ಕೊಡುತ್ತಿದ್ದೇನೆ. ಚುನಾವಣೆ ಕೇವಲ ಒಂದೂವರೆ ತಿಂಗಳು ಮಾತ್ರ ಇದೆ, ನೀವು ಮಾಡಬಾರದ್ದೆಲ್ಲಾ ಮಾಡಿ ಲೂಟಿ ಹೊಡೆದಿದ್ದೀರಿ, ಖಜಾನೆ ಖಾಲಿಯಾಗಿದೆ, ನಾವು ಬಂದಿದ್ದೇನೆ, ಸರಿ ಮಾಡುತ್ತೇವೆಂಬ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ, ಇರುವ ಒಂದೂವರೆ ತಿಂಗಳಿನಲ್ಲಿ ನೀವು ಏನು ಮಾಡಲು ಸಾಧ್ಯವಿದೆಯೆಂದು ತಿಳಿದು ನಿಮಗೆ ನಾನು ಸಲಹೆಗಳ ರೂಪದಲ್ಲಿ ಕೊಟ್ಟಿದ್ದೇನೆ. ಮತ್ತೊಂದು ವಿಚಾರವೇನೆಂದರೆ, ನಮ್ಮ ಲಕ್ಸುರಿ ಬಸ್ಸುಗಳಷ್ಟು ಚೆನ್ನಾಗಿ ಖಾಸಗಿ ಬಸ್ಸುಗಳಿಲ್ಲ. ಯಾವುದೋ ಒಂದೆರಡು ಹವಾ ನಿಯಂತ್ರಿತ ಖಾಸಗಿ ಬಸ್ಸುಗಳನ್ನು ಹೊರತುಪಡಿಸಿದರೆ ಬಾಕಿ ಎಲ್ಲಾ ಲಕ್ಸುರಿ ಬಸ್ಸುಗಳು ಚೆನ್ನಾಗಿವೆ. ಆದರೆ, ಅರ್ನಿಂಗ್ ರೂಟುಗಳಲ್ಲಿ ನಮ್ಮ ಲಕ್ಸುರಿ ಮತ್ತು ಸೆಮಿ ಲಕ್ಸುರಿ ಬಸ್ಸುಗಳು ಪ್ರಯಾಣಿಸುತ್ತಿವೆ. ಸುಮಾರು 2,000 ಖಾಸಗಿ ಬಸ್ಸುಗಳು ಓಡಾಡುತ್ತಿವೆ. ಸಾಯಂಕಾಲ 8 ಗಂಟೆ ನಂತರ ಸುಭಾಷ್‌ನಗರ ಬಸ್ ನಿಲ್ದಾಣದ ಮೂಲಕ ತಮಗೆ ನಂಬಿಕೆ ಇರತಕ್ಕಂಥ ಒಬ್ಬ ಅಧಿಕಾರಿಯನ್ನು ಈ ಕುರಿತು ತಿಳಿಯಲು ಕಳುಹಿಸಿಕೊಡಿ. ಅವರು ಬಂದು ನಿಮಗೆ ವರದಿ ಕೊಡುತ್ತಾರೆ. ಈಗ ಅಲ್ಲಿ ಪ್ಯಾರಲಲ್ ಬಸ್ ಸ್ಟ್ಯಾಂಡ್ ಆಗಿದ್ದು ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಈಗ ನೀವು ಖಾಸಗಿ ಬಸ್ಸುಗಳ ಮಾಲೀಕರುಗಳ ಮೇಲೆ ಏನೂ ಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲವೆಂಬುದು ಗೊತ್ತಿದೆ. ಇದಕ್ಕೊಂದು ಪರ್ಯಾಯ ವ್ಯವಸ್ಥೆ ಮಾಡಿ. ನಿಮ್ಮಿಂದ ಸರಿಯಾಗಿ ನಡೆಸುವುದಕ್ಕಾಗದಿದ್ದರೆ ಖಾಸಗಿ ಬಸ್ಸುಗಳವರಿಗೆ ಕೆಎಸ್‌ಆರ್‌ಟಿಸಿಯ ಕೆಲವೊಂದು ಮಾರ್ಗಗಳನ್ನು ಬಿಟ್ಟುಕೊಡಿ. ಸುಮ್ಮನೆ ಏಕೆ ಸಂಸ್ಥೆಗೆ ನಷ್ಟಪಡಿಸಿಕೊಳ್ಳುತ್ತೀರಿ? ಲಕ್ಸುರಿ ಬಸ್ಸುಗಳಲ್ಲಿ ಬರೀ ಎಂ.ಎಲ್.ಎ. ಗಳು ಅಥವಾ ಪಾಸ್ ಇರುವವರು ಪ್ರಯಾಣಿಸುವುದರ ಬದಲಾಗಿ ಪ್ರಯಾಣಿಕರಿಗೂ ಸ್ವಲ್ಪ ಅನುಕೂಲವಾಗಲೆಂಬ ದೃಷ್ಟಿಯಿಂದ ಈ ಸಲಹೆಯನ್ನು ತಮ್ಮ ಮುಂದಿಡುತ್ತಿದ್ದೇನೆ. ಇದೆಲ್ಲವನ್ನೂ ನಾನು ಹೇಳತಕ್ಕಂಥಾದ್ದಲ್ಲ. ಸಾರಿಗೆ ಸಂಸ್ಥೆಗೆ ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರ ಒಂದು ಸಮಿತಿಯನ್ನು ನೇಮಿಸಿದ್ದು, ಆ ಸಮಿತಿಯವರು ವರದಿಯಲ್ಲಿ ಇದೆಲ್ಲವನ್ನೂ ಹೇಳಿದ್ದಾರೆ. ಅದರ ಕಡೆ ತಾವು ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ, ವಿತ್ತೀಯ ಕಾರ್ಯ ಕಲಾಪಗಳ ವಿಚಾರದಲ್ಲಿ 4-5 ವಿಚಾರಗಳನ್ನು ಪ್ರಸ್ತಾಪಿಸಲು ಮಾನ್ಯ ಸಭಾಧ್ಯಕ್ಷರು ನನಗೆ ಅನುಮತಿ ಕೊಟ್ಟಿದ್ದಾರೆ. ಸರ್ಕಾರಕ್ಕೆ ನನ್ನ ಸಲಹೆಗಳನ್ನು ಅಭಿಪ್ರಾಯಗಳನ್ನು ರಚನಾತ್ಮಕವಾದ ರೀತಿಯಲ್ಲಿ ನೀಡಿದ್ದು, ಉಳಿದ ಒಂದೂವರೆ ತಿಂಗಳುಗಳಲ್ಲಿ ಏನೇನು ಮಾಡಬಹುದೆಂಬುದನ್ನು ಹೇಳಿದ್ದೇನೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಇದು ಕೊನೆಯ ಅಧಿವೇಶನವಾಗಿದೆ. ದುರ್ದೈವದ ವಿಚಾರವೇನೆಂದರೆ, ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಾವೇನು ಅಪೇಕ್ಷೆಯಿಟ್ಟುಕೊಂಡಿದ್ದೆವು ಎಂದರೆ, ನೀವು (ಕಾಂಗ್ರೆಸ್) 186 ಜನರು ಗೆದ್ದು ಬಂದು ಈ ರಾಜ್ಯದ ಜನತೆಗೆ ಏನು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ, ಒಂದು ಒಳ್ಳೆಯ ಸರ್ಕಾರ ಕೊಡುತ್ತೇವೆಂದು ಏನು ಹೇಳಿದ್ದೀರಿ

ಇದರಲ್ಲಿ ನೀವು ಸಂಪೂರ್ಣ ವಿಫಲವಾಗಿದ್ದೀರಿ. ಇದನ್ನು ನೀವು ಈಗಲೇ ಒಪ್ಪಿಕೊಳ್ಳುವುದು ಒಳ್ಳೆಯದು. ನಾವು ಏನು ಆಸೆ ಇಟ್ಟುಕೊಂಡಿದ್ದೆವು, ಅದು ಸಂಪೂರ್ಣ ನಿರಾಶೆಯಾಗಿರುವುದು ನಿಮಗೂ ಗೊತ್ತಿದೆ. ಆದರೆ ಅದನ್ನು ನೀವು ಹೇಳಿಕೊಳ್ಳುವುದಕ್ಕಾಗುತ್ತಿಲ್ಲ ಅಷ್ಟೆ. ಅದೇನೇ ಇರಲಿ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಯ ಮೇಲೆ ಭಾಗವಹಿಸಿ ನಾನು ನನ್ನ ಎಲ್ಲಾ ಅಭಿಪ್ರಾಯಗಳನ್ನು ಮಂಡಿಸಿದ್ದೇನೆ. ಆದರೆ, ಹಿಂದುಳಿದ ವರ್ಗದವರ ಹರಿಜನರ, ಗಿರಿಜನರ ಬಗ್ಗೆ ನೀವು ಮಾತೆತ್ತಿದರೆ ಏನು ಹೇಳಿತ್ತಿರೆಂದರೆ, 'ನಾವು ಹಿಂದುಳಿದ ವರ್ಗದವರ ಪರವಾಗಿದ್ದೇವೆ, 'ನಾವು ಅಲ್ಪಸಂಖಾಂತರ ಪರವಾಗಿದ್ದೇವೆ.' ಪರಿಶಿಷ್ಟ ಜಾತಿಃ ವರ್ಗದವರ ಪರವಾಗಿದ್ದೇವೆ.' ಎಂದು ಹೇಳುತ್ತಿದ್ದೀರಿ. ಇದಿಷ್ಟೆ ಅಲ್ಲದೆ, ವ್ಯವಸ್ಥಿತವಾಗಿ ನೀವು ಏನು ಮಾಡಿದ್ದೀರೆಂದರೆ, ಈ ಕಡೆ (ವಿರೋಧ ಪಕ್ಷ) ಕುಳಿತುಕೊಳ್ಳುವಂಥ ಜನರೆಲ್ಲರೂ ಸಹ ಈ ವರ್ಗದ ಜನರ ವಿರೋಧಿಗಳಾಗಿದ್ದಾರೆಂಬ ಭಾವನೆಯನ್ನೂ ತಾವು ಸೃಷ್ಟಿಸಿದ್ದೀರಿ. ಇದು ಕಳೆದ ಹತ್ತಾರು ವರ್ಷಗಳಲ್ಲಿ ನಡೆದಿರತಕ್ಕಂಥ ರಾಜಕೀಯ. ಆದರೆ, ಈ ಕುರಿತು ತಾವು ತಮ್ಮ ಅತ್ಮಾವಲೋಕನ ಮಾಡಿಕೊಳ್ಳಬೇಕು. ಕಳೆದ ನಾಲ್ಕುವರೆ ವರ್ಷಗಳ ಕಳೆದ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ಈ ವರ್ಗದ ಜನರಿಗೆ ನೀವು ಯಾವ ವಿಶೇಷ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ. 'ಭಾಗ್ಯಜ್ಯೋತಿ' ಕಾರ್ಯಕ್ರಮದಲ್ಲಿ 250 ಗುರಿ ಇದ್ದುದನು 1,000 ಮಾಡಿದ್ದೀರಿ ಮತ್ತು ಈ ವರ್ಷದಲ್ಲಿ 'ಅಶ್ರಯ' ಯೋಜನೆಯಲ್ಲಿ 500 ಮನೆಗಳನ್ನು ಕಟ್ಟಿಕೊಟ್ಟಿರುವುದನ್ನು ಬಿಟ್ಟರೆ ಬಡವರಿಗಾಗಿ ನೀವು ಮಾಡಿರುವ ಕೆಲಸಗಳಾದರೂ ಏನು? ಹಸಿರು ಕಾರ್ಡುದಾರರಿಗೆ ಒಂದು ಕಿಲೋ ಅಕ್ಕಿಗೆ 2 ರೂಪಾಯಿಗಳಿದ್ದಂಥ ಕಾರ್ಯಕ್ರಮ ನಿಲ್ಲಿಸಿದಿರೀ, ನಮ್ಮ ಪಕ್ಷ ಅಧಿಕಾರದಲ್ಲಿದಾಗ ಬಡವರಿಗೆ ಸೀರೆ, ಪಂಚೆ ಕೊಡತಕ್ಕಂಥ ಕಾರ್ಯಕ್ರಮಗಳನ್ನು ತಂದಿದ್ದೆವು, ನಿಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ಅದು ಬೇಡವೆಂದು ನಿಲ್ಲಿಸಿದಿರಿ. ಶಾಲೆಗೆ ಹೋಗುವ ಮಕ್ಕಳಿಗೆ ಉಚಿತವಾಗಿ ಪುಸ್ತಕ, ಬಟ್ಟೆ ಹಂಚುವ ಕಾರ್ಯಕ್ರಮ ತಂದಿದ್ದೆವು, ಅದನ್ನೂ ನಿಲ್ಲಿಸಿದಿರಿ. ತಾವು ಬಡವರ ಪರವಾಗಿ ಹಮ್ಮಿಕೊಂಡಿರುವ ಎರಡು ಕಾರ್ಯಕ್ರಮಗಳನ್ನು ಬಿಟ್ಟರೆ ಏನು ಮಾಡಿದ್ದೀರಿ? ಎಂಬುದರ ಬಗ್ಗೆ ತಾವು ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಒಳ್ಳೆಯದು.

12.30 ಪಿ.ಎಂ

ಅಲ್ಪಸಂಖ್ಯಾತರ ದೃಷ್ಟಿಯ ಬಗ್ಗೆ ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಾಗ ಅಲ್ಪಸಂಖ್ಯಾತರು ಪರವಾಗಿಲ್ಲ ನಮ್ಮ ಪರವಾಗಿರತಕ್ಕ ಸರ್ಕಾರ ಬಂದಿದೆ ಎಂದು ಹೇಳತಕ್ಕ ಮನೋಭಾವವನ್ನು ಇಟ್ಟುಕೊಂಡಿದ್ದರು ಅದನ್ನು ತಮ್ಮಿಂದ ಉಳಿಸಿಕೊಳ್ಳಲಾಗಲಿಲ್ಲ. ಅವರುಗಳಲ್ಲಿ ಆ ರೀತಿಯಾದ ಮನೋಭಾವನೆಯನ್ನು ತರುವಲ್ಲಿ ತಾವು ವಿಫಲವಾದಿರಿ. ಚನ್ನಪಟ್ಟಣ, ರಾಮನಗರದಿಂದ ಹಿಡಿದು ಭಟ್ಕಳದವರೆಗೂ ಸಹ ತಾವು ವಿಫಲವಾಗಿದ್ದೀರಿ. ಅದಕ್ಕೆ ಯಾರೇ ಕಾರಣಕರ್ತರಿರಬಹುದು. ಆದರೆ ಆ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲ ತಾವು ವಿಫಲವಾಗಿದ್ದೀರಿ. ಬೇರೆ ದೇಶಗಳಲ್ಲಿ ಬೆಳೆದಿರತಕ್ಕಂಥ ರಾಜಕೀಯಕೋಸ್ಕರ, ಓಟ್‌ಗೋಸ್ಕರ ಧರ್ಮವನ್ನು ಬಳಕೆ ಮಾಡಿಕೊಳ್ಳುವ ಕಾರಣವಿದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇಂಥ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ತಮ್ಮ ಸರ್ಕಾರ ವಿಫಲವಾಗಿದೆ ಎನ್ನತಕ್ಕ ವಿಚಾರವನ್ನು ಹೇಳಿ, ನನಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ವಾಟಾಳ್ ನಾಗರಾಜ್ :- ಸನ್ಮಾನ್ಯ ಅಧ್ಯಕ್ಷರೇ, ಇವತ್ತು 49 ಬೇಡಿಕೆಗಳನ್ನು ಇಲ್ಲಿ ಇಟ್ಟಿದ್ದಾರೆ. ಸೋಮವಾರ ಇನ್ನೂ 10-12 ಬೇಡಿಕೆಗಳನ್ನಿಡುತ್ತಾರೆ, ಹೆಚ್ಚು ಕಡಿಮೆ ಮುಗಿಯುತ್ತದೆಂದು ಕಾಣುತ್ತದೆ. ಈ ಪರಿಸ್ಥಿತಿ ಸರಿಯಲ್ಲವೆಂದು ನನಗನ್ನಿಸುತ್ತದೆ. ಎಲ್ಲಾ ಇಲಾಖೆಗಳ ಬೇಡಿಕೆಗಳ ಬಗ್ಗೆ ಸಮಗ್ರವಾಗಿ ಪರಿಪೂರ್ಣವಾಗಿ ಇಲ್ಲಿ ಚರ್ಚೆಯಾಗುವುದಿಲ್ಲವೆಂದು ಲೋಕಸಭೆಯಲ್ಲಿ ಮತ್ತು ಕೇರಳ ರಾಜ್ಯದಲ್ಲಿ, ಪಶ್ಚಿಮ ಬಂಗಾಳದಲ್ಲಿ ಇರತಕ್ಕ ರೀತಿಯಲ್ಲಿ ಕರ್ನಾಟಕ ಸರ್ಕಾರ ಸಹ ಪ್ರಪ್ರಥಮಬಾರಿಗೆ ವಿಷಯ ಸಮಿತಿಗಳನ್ನು ರಚನೆ ಮಾಡಿದೆ. ಈ ವಿಷಯ ಸಮಿತಿಗಳ ರಚನೆ, ಅದರ ಕಾರ್ಯಕಲಾಪಗಳನ್ನು ಯಾವ ರೀತಿ ಮಾಡಬೇಕು, ಅದರ ವ್ಯವಸ್ಥೆ ಏನು ಎಂಬ ಬಗ್ಗೆ ಈಗಾಲೇ ಆ ಸದಸ್ಯರುಗಳಿಗೆ ಕೈಪಿಡಿಯನ್ನು ಕೊಟ್ಟಿದ್ದಾರೆ. ನಾನು ಸಹ ಹನ್ನೆರಡು ಇಲಾಖೆಗಳು ಸೇರಿರತಕ್ಕಂಥ ಒಂದು ವಿಷಯ ಸಮಿತಿಗೆ ಅಧ್ಯಕ್ಷನಾಗಿದ್ದೇನೆ. ಅದರಲ್ಲಿ ಚರ್ಚೆ ಪರಿಣಾಮಕಾರಿಯಾಗಿ, ಚೆನ್ನಾಗಿ ಆಗಿದೆ. ಆ ಚರ್ಚೆ ಗೌಪ್ಯವಾಗಿ, ನಾಲ್ಕು ಗೋಡೆಗಳ ಮಧ್ಯ, ಯಾರಿಗೂ ಗೊತ್ತಾಗದ ರೀತಿಯಲ್ಲಿ ಆಗಿದೆ. ಚರ್ಚೆಯಂತೂ ಪರಿಣಾಮಕಾರಿಯಾಗಿ ಆಗಿದೆ. ಲೋಕಸಭೆಯ ಅಧ್ಯಕ್ಷರು ಈ ವ್ಯವಸ್ಥೆಯು ಸರಿಯಾಗಿದೆ ಎನ್ನತಕ್ಕ ಮಾತನ್ನು ಸಹ ಹೇಳಿದರು. ನನ್ನ ಮನಸ್ಸಿನಲ್ಲಿ ಕಾಡುತ್ತಿರುವುದೇನೆಂದರೆ, ಈ ಸದನದಲ್ಲಿ ಪ್ರತಿಯೊಂದು ಬೇಡಿಕೆಯ ಬಗ್ಗೆ ಸಮಗ್ರವಾಗಿ ಚರ್ಚೆ ನಡೆದಾಗ ಈ ಚರ್ಚೆಯ ಸ್ವರೂಪ ಬಹಿರಂಗವಾಗಿ ಪತ್ರಿಕೆಗಳ ಮೂಲಕ ಹೊರಗೆ ಬರುತ್ತಿತ್ತು. ಆದರೆ ವಿಷಯ ಸಮಿತಿಯಲ್ಲಿ ನಡೆದಂಥ ಚರ್ಚೆಯ ಒಂದು ಅಕ್ಷರವೂ ಸಹಿತ ಹೊರಗಡೆ ಬರತಕ್ಕ ವ್ಯವಸ್ಥೆ ಇಲ್ಲ. ಇದರಿಂದ ಒಂದು ರೀತಿಯ ಲಾಭಕಿಂತ ನಷ್ಟವೇಹೆಚ್ಚು. ವಿಷಯ ಸಮಿತಿಯಲ್ಲಿ ಸಮಗ್ರವಾಗಿ ಎಳೆಎಳೆಯಾಗಿ ಚರ್ಚೆ ಮಾಡಬಹುದು. ಆದರೆ ನಾವೇನು ಚರ್ಚೆ ಮಾಡಿ ಹೇಳುತ್ತೇವೆ ಅದನ್ನು ಪತ್ರಿಕೆಗಳ ಮೂಲಕ ಸಾರ್ವಜನಿಕರಿಗೆ ತಿಳಿಸತಕ್ಕ ವ್ಯವಸ್ಥೆ ಸಮಿತಿಯಲ್ಲಿ ಇಲ್ಲ. ಆ ಬಗ್ಗೆ ನಾವು ಚಿಂತನೆ ಮಾಡಬೇಕು. ಇದು ಕೊನೆಯ ಅಧಿವೇಶನ. ಆದ್ದರಿಂದ ಇನ್ನೆರಡು ದಿನಗಳಲ್ಲಿ ಇದರಬಗ್ಗೆ ಚಿಂತನೆ ಮಾಡಿ ಯಾವುದಾದರೊಂದು ನಿರ್ಣಯಕ್ಕೆ ಅಥವಾ ನಿರ್ಧಾರಕ್ಕೆ ಬರುವುದಕ್ಕಾಗುತ್ತದೆಂದು ನನಗೆ ಅನಿಸುತ್ತಿಲ್ಲ ಮುಂದಿನ ಏಳನೆ ತಾರೀಖಿಗೆ ಈ ಅಧಿವೇಶನ ಮುಗಿಯುತ್ತದೆ ಮುಂದೆ ಹೊಸ ವ್ಯವಸ್ಥೆ ಬರಬೇಕಾಗುತ್ತದೆ ಚುನಾವಣೆ ಬರುತ್ತದೆ. ಆದರೆ ಇವತ್ತು ಒಟ್ಟಿಗೆ 49 ಬೇಡಿಕೆಗಳನ್ನಿಟ್ಟು ಯಾವುದರ ಬಗ್ಗೆ ನಾವು ಚರ್ಚೆ ಮಾಡಬೇಕು, ಯಾವ ವಿಷಯದ ಬಗ್ಗೆ ಬೆಳಕನ್ನು ನಾವು ಚೆಲ್ಲಬೇಕು ಎನ್ನುವುದು ಕಷ್ಟವಾಗಿದೆ. ತಾವು ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ಯಾವ ರೀತಿ ಉತ್ತರವನ್ನು ಕೊಡುತ್ತೀರೋ ನನಗೆ ಅರ್ಥವಾಗುವುದಿಲ್ಲ. ಈ ಸದನದಲ್ಲಿ ಸಾಮಾನ್ಯವಾಗಿ ಒಂದೊಂದು ಬೇಡಿಕೆ ಬಗ್ಗೆ 2-3 ದಿನಗಳ ಕಾಲ ಚರ್ಚೆಯಾಗಿರುವುದು ಉಂಟು. ಮತ್ತು ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಕನಿಷ್ಟ 20-25 ದಿನಗಳ ಕಾಲ ನಡೆದಿರತಕ್ಕದ್ದು ಉಂಟು. ಆದರೆ ಈ ಸಾರಿ ನಮ್ಮಲ್ಲಿ ಆಯವ್ಯಯ ಚರ್ಚೆ ನಡೆದದ್ದು, 2 ದಿನಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಉತ್ತರ ಒಂದು ದಿವಸ - ಒಟ್ಟು ಮೂರು ದಿವಸಗಳು ಆಯಿತು. ಅದಾದನಂತರ ವಿಷಯ ಸಮಿತಿಗಳನ್ನು ರಚನೆ ಮಾಡಿ ನೀವೆಲ್ಲಾ ವಿಧಾನಸೌಧದ ಪ್ರತಿ ಕೊಠಡಿಯಲ್ಲಿ ಹೋಗಿ ಕುಳಿತುಕೊಳ್ಳಿ ಎಂದು ನಮ್ಮನ್ನೆಲ್ಲಾ ಕೊಠಡಿಯಲ್ಲಿ ಕೂರಿಸಿದರು. ಈ ಸಭೆಗೆ ಸಾರ್ವಭೌಮತ್ವ ಇದೆ. ಪ್ರಜಾಪ್ರಭುತ್ವದಲ್ಲಿ ಈ ಶಾಸನಸಭೆಗೆ ಇರತಕ್ಕಂಥ

ಸಾರ್ವಭೌಮತ್ವ ಶಕ್ತಿ ಒಂದು ರೀತಿಯಿಂದ ಕುಂದಿತೇನೋ ಎನ್ನುವಂತಹ ರೀತಿ ಮನಸ್ಸಿಗೆ ಭಾಸವಾಗುತ್ತಿದೆ. ಈ ಸದನದ ಶಕ್ತಿಯನ್ನು ಕುಂದಿಸುವಂತಹ ವ್ಯವಸ್ಥೆಗೆ ನಾವು ಯಾರು ಹೋಗಬಾರದು. ಯಾವುದೇ ಪಕ್ಷವಾಗಲೀ, ಯಾರೇ ಆಗಿರಲಿ ಹೋಗ ಬಾರದು ಇದು ಬಹಳ ಪ್ರಮುಖವಾದಂತಹ ಸದನ. ಈ ಸದನದಲ್ಲಿ ಮಾತನಾಡಿದಂತಹ ಪ್ರತಿ ಮಾತು ಬಹಳ ತೂಕವಾಗಿ, ಅದಕ್ಕೆ ಒಂದು ವ್ಯಕ್ತಿತ್ವ ಶಕ್ತಿ ಬರತಕ್ಕದ್ದು, ಈ ಸದನವನ್ನೇ ನಾವು ಈ ಶಕ್ತಿಯನ್ನು ಪ್ರಜಾಪ್ರಭುತ್ವದಲ್ಲಿ ಲೋಕಸಭೆಯ, ಶಾಸನಸಭೆಯ ಶಕ್ತಿ ಕುಂದಿದ್ದೇ ಆದರೆ ಅದರೆ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಎಂದು ವೈಯುಕ್ತಿವಾದ ಅಭಿಪ್ರಾಯ. ತಮಗೆ ಗೊತ್ತಿದೆ. ಈ ಬೇಡಿಕೆಗಳ ಬಗ್ಗೆ ನಾವು ಇಲ್ಲಿ. ಯಾವ ಇಲಾಖೆಯ ಸಚಿವರಿಂದಾಗಲಿ ಅಧಿಕಾರಿಗಳಿಂದಾಗಲಿ ನೇರವಾಗಿ ಕೇಳಿ ಅವರಿಂದ ಉತ್ತರವನ್ನು ತೆಗೆದುಕೊಂಡು ಒಂದು ರೀತಿ ಮಂಥನ, ಚಿಂತನೆ ಎಲ್ಲಾ ನಡೆಯುತ್ತಿತ್ತು ಮತ್ತು ಟೀಕೆ ಟಿಪ್ಪಣಿಗಳು. ಭಾರಿ ಪ್ರಮಾಣದಲ್ಲಿ ಬರುತ್ತಿತ್ತು. ಅಲ್ಲಿ ನಾವು ಸಭೆ ನಡೆಸುವಾಗ ನಾವು ಅವರು ಒಂದು ರೀತಿಯಾದ ಯುದ್ದಕ್ಕಿಂತ ಹೆಚ್ಚಾಗಿ ಸ್ನೇಹ ಜಾಸ್ತಿಯಾಗಬೇಕಾಗುತ್ತದೆ. ಸಮಿತಿಯಲ್ಲಿ ಅಧಿಕಾರಿಗಳು ಬರುತ್ತಾರೆ. ಇವತ್ತು ಮೊದಲನೇ ಸಭೆ, 2ನೇ ಸಭೆ ತಿಂಡಿ. ಕಾಫಿ ಕುಡಿಯುತ್ತೇವೆ. ಅಧಿಕಾರಿಗಳ ಸ್ನೇಹವಾಯಿತು. ನಾವು ಯಾವ ಅಧಿಕಾರಿಗಳನ್ನು ಬಯ್ಯುವ ಹಾಗಿಲ್ಲ. ಮಂತ್ರಿಗಳು ಬರುವ ಹಾಗಿಲ್ಲ, ನಾವು ಯಾರಿಗೂ ಹೇಳುವ ಹಾಗಿಲ್ಲ. ಈ ವ್ಯಸ್ಥೆಯನ್ನು ಏನು ಒಪ್ಪಿಕೊಂಡಿದ್ಧೇವೆ, ಈ ವ್ಯವಸ್ಥೆ ಈ ಪ್ರಜಾಪ್ರಭುತ್ವದಲ್ಲಿ ನನ್ನ ಮನಸ್ಸಿಗೆ ಅಷ್ಟು ಹಿಡಿಸಲಿಲ್ಲ. ಸಮಗ್ರವಾಗಿ ಚರ್ಚೆಯಾಗಬೇಕು, ಚರ್ಚೆಯಾದನಂತರ ಅದು ಪತ್ರಿಕೆಗಳ ಮೂಲಕ ಮೂಲಕ ಬಹಿರಂಗವಾಗುವುದಕ್ಕೆ ಅವರಿಗೂ ಅವಕಾಶ ಕೊಡಬೇಕು. ನಾವು ಯಾವ ಇಾಲಖೆಯ ಬಗ್ಗೆ ಚರ್ಚೆ ಮಾಡಿದ್ದೇವೆ. ಅದಕ್ಕೆ ಅವಕಾಶ ಕೊಡಬೇಕು. ಕನಿಷ್ಟ ನಾವು ಅಧ್ಯಕ್ಷರಾದವರು ಆ ಸಭೆಯಲ್ಲಿ ಏನೇನು ನಡೆಯಿತು ಎಂದು ಹೇಳತಕ್ಕಂಥ ವ್ಯವಸ್ಥೆಯಾಗಬೇಕು. ಅದು ಯಾವುಗೂ ಇಲ್ಲ. ಒಂದು ರೀತಿಯ ಮಿಲಿಟರಿ ಪ್ರಭುತ್ವದದಾರಿ ಕಂಡಹಾಗೆ ಕಾಣುತ್ತದೆ. ಒಂದುರೀತಿ ಗುಂಡಿನ ಅಳ್ಳಿಕೆ, ಮಿಲಿಟರಿ ಪ್ರಭುತ್ವ ಅಲ್ಲಿ ಯಾರು ಏನು ಹೇಳಬಾರದು, ನೀವು ನೀವೇ ಮಾಡಿಕೊಳ್ಳಬೇಕು ಎನ್ನುವ ರೀತಿ ಇದೆ. ಈಗ ನಿಮಗೆ ಉದಾಹರಣೆಗೆ ಹೇಳುವುದಾದರೆ, ನಾನು ನನ್ನ ಸಮಿತಿಯಲ್ಲಿ ಬಹಳ ಚೆನ್ನಾಗಿ ಅಂದರೆ 20-25 ಸಭೆಗಳನ್ನು ನಡೆಸಿ ಬಹಳ ಪರಿಣಾಮಕಾರಿಯಾದಂತಹ ವರದಿಯನ್ನು ಕೊಟ್ಟಿದ್ದೇವೆ. ಅದು ಪತ್ರಿಕೆಗಳಲ್ಲಿ ಬಂದಿಲ್ಲ. ಅದನ್ನು ಹಾಕುವುದು, ಬಿಡುವುದು ಅವರಿಗೆ ಸೇರಿದ್ದು. ಅದರ ಬಗ್ಗೆ ನಾನು ಏನೂವಾದ ಮಾಡುವುದಿಲ್ಲ. ತಾವು ನೋಡಬೇಕು. ವಾರ್ತಾ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆಯ ಯುವಜನ ಇಲಾಖೆಯ, ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಬಹಳ ಪರಿಣಾಮಕಾರಿಯಾಗಿ ವರದಿ ಮಾಡಿದ್ದೇವೆ. ತಾವು ಅದನ್ನು ತರಿಸಿಕೊಂಡು ನೋಡಬೇಕು. ತಮ್ಮನ್ನು ಸಭೆಗೆ ಕರೆದಿದ್ದೇ ತಾವು ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ. ಪರಿಣಾಮಕಾರಿದಂತಹ ಸಲಹೆಗಳನ್ನು ಕೊಟ್ಟಿದ್ದೇವೆ ನಾವು ವಾರ್ತಾ ಇಲಾಖೆಯ ಆಯಾಯ ಇಲಾಖೆಯ ಅಧಿಕಾರಿಗಳನ್ನು, ಜಂಟಿ ನಿರ್ದೇಶಕ ಶ್ರೀ ರಾಮಚಂದರ್, ದಿನೇಶ್ ಅವರುಗಳನ್ನು ಕರೆಸಿದ್ದೆವು. ಇನ್ನೂ ಅನೇಕ ಪತ್ರಕರ್ತರು. ದೊಡ್ಡ ದೊಡ್ಡ ಸಾಹಿತಿಗಳನ್ನು,ಪ್ರತಿಯೊಬ್ಬರನ್ನೂ ಕರೆದು ಎಷ್ಟರ ಮಟ್ಟಿಗೆ ನಾವು ಇದನ್ನು ತರಬೇಕೆಂದು ಚಿಂತನೆ ಎಲ್ಲ ಮಾಡಿದ್ದೆವು.

ಛೇರ್‌ಮನ್ :- ನಿಮ್ಮ ಸಮಿತಿಯ ಛಾಯಚಿತ್ರಗಳು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : - ಬಂದಿದೆ, ಆದರೆ ವಿಚಾರ, ವಿಷಯ ಬರಲಿಲ್ಲ. ತಮಗೆ ಹೇಳುವುದಾದರೆ, ಏನಾಗಿದೆಯೆಂದರೆ ಮುದಣ್ರವಾದ ಒಂದೊಂದು ಪ್ರತಿಗಳನ್ನು ಪತ್ರಕರ್ತರಿಗೂ ಕೊಟ್ಟಿದ್ದು ಆಯಿತು, ಪತ್ರಿಕೆಗಳಿಗೂ ಕಳಿಸಿದ್ದಾಯಿತು ಸಮಗ್ರವಾಗಿ ಅಲ್ಲ ಏನೇನು ಹೇಳಿದ್ದೇವೆ ಎನ್ನುವುದು ಎಲ್ಲಾ ಬಯಲು ಆಗಿಲ್ಲ. ಯಾವಾಗ ಬಯಲು ಆಗುವುದು. ಇವತ್ತು 49 ಬೇಡಿಕೆಗಳನ್ನು ಇಟ್ಟಿದ್ದೀರಿ. ಸೋಮವಾರ ಬೇಡಿಕೆಗಳನ್ನು ಇಡುತ್ತೀರಿ ಇದರಿಂದ ನಾವು ಯಾವುದರ ಬಗ್ಗೆ ಚರ್ಚೆ ಮಾಡುವುದು ಎಂದು ನಮಗೆ ಮನಸ್ಸಿನಲ್ಲಿ ಜಿಜ್ಞಾಸೆಯಾಗಿದೆ.

ಶ್ರೀ ಭೀಮಣ್ಣ ಖಂಡ್ರೆ :- ಅವರಿಗೆ ಬಯಲು ಮಾಡುವುದಕ್ಕೆ ಅವಕಾಶ ಇದ್ದಿಲ್ಲ, ಅದಕ್ಕಾಗಿ ಪೇಪರ್‌ನಲ್ಲಿ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : - ಅದು ನಿಜ, ವರದಿ ಕೊಟ್ಟ ಮೇಲೆ ವರದಿಯ ಸಾರಾಂಶ ಬರಬೇಕಾದ್ದು ಕರ್ತವ್ಯ. ಈ ವ್ಯವಸ್ಥೆ ಸರಿಯಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ವ್ಯವಸ್ಥೆಯ ಜೊತೆಗೆ ನಾವು ಏನು ಸಮಿತಿಯಲ್ಲಿ ಹೇಳುತ್ತೇವೆ. ಚರ್ಚೆ ಮಾಡುತ್ತೇವೆ, ಅದು ಬಹಿರಂಗವಾಗಬೇಕು. ಅದು ಬಹರಂಗವಾದರೆ ನಮಗೆ ಬಹಳ ಸಂತೋಷ. ಮತ್ತೊಂದು ತಮಗೆ ಹೇಳುತ್ತೇನೆ. ಈ ಸಮಿತಿಯ ಸಭೆಯಲ್ಲಿ ಅಧಿಕಾರಿಗಳು ಬರುತ್ತಾರೆ. ಅದರಿಂದ ನಮಗೂ ಅವರಿಗೂ ಸ್ನೇಹ ಬರುತ್ತದೆ ಎಂದು ನಾನು ಹೇಳಿದೆ. ಈ ಸಭೆಯಲ್ಲಿ ಇದ್ದಾಗ ಆ ಸ್ನೇಹ ಬರುವುದಿಲ್ಲ. ಸ್ವಲ್ಪ ನೇರವಾಗಿ ಬೀಳುತ್ತಿರುತ್ತೇವೆ. ಇಲ್ಲಿ ನಾವು ಯಾರ ಮುಖವನ್ನೂ ನೋಡುವುದಿಲ್ಲ, ಏನೂ ನೋಡುವುದಿಲ್ಲ, ಈ ಇಲಾಖೆಯಲ್ಲಿ ಇಂತಹ ಅನ್ಯಾಯ ನಡೆದಿದೆ. ಇಂತಹ ಅಧಿಕಾರಿ ಇದೆಲ್ಲಾ ಮಾಡಿದ್ದಾರೆ ಎಂದು ನೇರವಾಗಿ ಧಾಳಿ ಮಾಡುತ್ತೇವೆ. ಆ ಧಾಳಿಯನ್ನು ಕಡಿಮೆ ಮಾಡತಕ್ಕಂತಹ ವ್ಯವಸ್ಥೆ ಇದು. 15 ದಿವಸ 20 ಸಭೆಗಳ ಅಧಿಕಾರಿಗಳು ನಮ್ಮ ಜೊತೆಯಲ್ಲಿ ಕುಳಿತಿದ್ದಾರೆ, ಕಾಫಿ ಕುಡಿದಿದ್ದಾರೆ, ತಿಂಡಿ ತಿಂದಿದ್ದಾರೆ, ಪ್ರತಿದಿನ ನಾವೂ ಅವರು ಕೈ ಕೈ ಕುಲುಕಿದ್ದೇವೆ. ಈಗ ಏನು ನಾವು ಅವರನ್ನು ಬಯ್ಯುವುದು, ಹೇಳಿ. ನಮ್ಮ ಶಕ್ತಿಯೂ ಸಹ ಏಕೋ ಹಿಂದಕ್ಕೆ ಹೋಗತಕ್ಕಂತಹ ವ್ಯವಸ್ಥೆಯೂ ಆಗಿಹೋಗಿದೆ. ಅದರಲ್ಲಿ ಏನೂ ಅನುಮಾನ ಇಲ್ಲ. ಅದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಇದು ಕೊನೆಯ ಸಭೆಯಾದ್ದರಿಂದ ಇದರ ಬಗ್ಗೆ ಹೊಸ ತಿದ್ದುಪಡಿ ತಂದು ಮಾಡತಕ್ಕಂಥಾದ್ದು ಅಲ್ಲ. ಮುಂದೆಯಾದರೂ ಇದಕ್ಕೆ ತಿದ್ದುಪಡಿ ಬರಬೇಕು, ತಿದ್ದುಪಡಿಯಲ್ಲಿ ನಾವು ಏನು ವರದಿಯನ್ನು ಕೊಡತಕ್ಕಂತಹ ವ್ಯವಸ್ಥೆ ಇದೆ, ಅದು ಪತ್ರಿಕೆಗಳ ಮೂಲಕ ಪ್ರಚಾರ ಆಗಬೇಕು. ಅದು ಅಲ್ಲದೆ, ಪ್ರತಿ ಇಲಾಖೆಯೂ ನಾವು ಕೊಟ್ಟಂತಹ ವರದಿ ಸಮಗ್ರವಾಗಿ ಇಲ್ಲಿ ಚರ್ಚೆಯಾಗಬೇಕು ಈಗ ತಮಗೆ ಹೇಳುವುದಾದರೆ, ವಾರ್ತಾ ಇಲಾಖೆಯ ಬಗ್ಗೆ ನಮ್ಮ ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥ್‌ರವರಲ್ಲಿ ಧರ್ಮಸಿಂಗ್ ಮತ್ತು ಯಾಹ್ಯಾ ಅವರಿಗೆ ಹೇಳುತ್ತೇನೆ. ಎಷ್ಟು ಸುಂದರವಾಗಿ ವರದಿ ಕೊಟ್ಟಿದ್ದೇವೆ ನೀವು ಏನಾದರೂ ಅದನ್ನು ಒಪ್ಪುತ್ತೀರೋ? ಪುಸ್ತಕದಲ್ಲಿ ಏನು ಕೊಟ್ಟಿದ್ದೇವೆ ಅದನ್ನು ನೀವು ಒಪ್ಪುತ್ತೀರೋ ನಿಜವಾಗಲೂ ವಾರ್ತಾ ಇಲಾಖೆಯನ್ನು ಎಷ್ಟು ಕಡೆಗಣಿಸಿಬಿಟ್ಟಿದ್ದಾರೆ ಎಂದರೆ

ಅದನ್ನು ಹೇಳುವುದಕ್ಕಾಗುವುದಿಲ್ಲ. ಎಲ್ಲರಿಗೂ ಪ್ರಚಾರ ಬೇಕು. ಪ್ರತಿ ಇಲಾಖೆಯವರಿಗೂ ಪ್ರಚಾರ ಬೇಕು. ಮುಖ್ಯಮಂತ್ರಿಗಳಿಗೆ ಬೆಳಗ್ಗೆ ಎದ್ದತಕ್ಷಣ ಪ್ರಚಾರ. ಪ್ರತಿಯೊಂದು ಆಗಬೇಕು. ಪ್ರಚಾರ ಎಲ್ಲರಿಗೂ ಬೇಕು. ಆದರೆ ಆ ಸಂಸ್ಥೆಯ ಪರಿಸ್ಥಿತಿಯನ್ನು ನಾವು ಏನು ಮಾಡಿದ್ದೇವೆ. ಎಂದರೆ ಆ ಸಂಸ್ಥೆಯನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಿದ್ದೇವೆ ಎಂದರೆ ನಾನು ಎಳೆಎಳೆಯಾಗಿ ಪ್ರತಿಯೋಂದನ್ನು ನೋಡಿದ್ದೇನೆ. ತಮ್ಮ ಮುಂದೆ ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಹಳೆಯ ಕಾಲದ ವಾಹನಗಳು ಚಿತ್ರದುರ್ಗಕ್ಕೆ ಮುಖ್ಯಮಂತ್ರಿಗಳು ಹೋಗಿರುತ್ತಾರೆ. ಪತ್ರಕರ್ತರ ವಾಹನದಲ್ಲಿ ಕಳೆದುಕೊಂಡು ಹೋಗಬೇಕು. ವಾಹನ ಹರಿಹರದಲ್ಲಿ ಕೆಟ್ಟು ಹೋಗುತ್ತದೆ. ಮುಖ್ಯಮಂತ್ರಿಗಳ ಸಭೆ ಮುಗಿದು ಹೋಗಿರುತ್ತದೆ. ಇಂತಹ ವಿಚಾರಗಳು ಇವೆ. ಇಂತಹ ಕೆಲಸವನ್ನು ಸುಮ್ಮನೆ ಉದಾಹರಣೆಗೆ ಹೇಳುತ್ತೇನೆ ಉಪನಿರ್ದೇಶಕರು ಅಲ್ಲಿ ಇರುತ್ತಾರೆ. ಆದರೆ ಅವರೇ ಜವಾನ, ಅವರೇ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಬೇಕು ಅವರೇ ರೂಮೂ ತೆಗೆಯುವುದು. ಆದರೆ ಕುಳಿತು ಕೊಳ್ಳುವುದು, ಇನ್ನು ಅವರನ್ನು ಏಕೆ ಇಟ್ಟಿರಬೇಕು. ಅವರಿಂದ ಪ್ರಚಾರ ಏನು ದೊರಕುತ್ತದೆ. ಅದು ಸಾದ್ಯವಿಲ್ಲ. ನಿಮಗೆ ಪ್ರತಿ ಇಲಾಖೆಯ ಪ್ರಚಾರವೂ ಬೇಕು ಆ ಇಲಾಖೆಗೆ ಕೊಡುವುದು 10 ಕೋಟಿ ಅದರಲ್ಲಿ 8 ಕೋಟಿ ಜಾಹಿರಾತಿಗಾಗಿ ತೆಗೆದುಕೊಳ್ಳುತ್ತೀರಿ. ಇನ್ನು 2 ಕೋಟಿ ಅವರಿಗೆ ಇಟ್ಟಿದ್ದೀರಿ. ಅದು ಯಾವ ಮೂಲೆಗೆ ಸ್ವಾಮಿ. ಇದು ಪ್ರಚಾರ ಯುಗ. ಈ ಪ್ರಚಾರ ಯುಗದಲ್ಲಿ ವಾರ್ತಾ ಇಲಾಖೆಯನ್ನು ಎಷ್ಟು ಪರಿಣಾಮಕಾರಿಯಾಗಿ, ಎಷ್ಟು ರೀತಿಯಲ್ಲಿ ಬೆಳೆಸಬೇಕಾದದ್ದು ಇದೆ, ಆ ವ್ಯವಸ್ಥೆ ಇಲ್ಲ. ನಾನು ವಾರ್ತಾ ಇಲಾಖೆಯ ಕಾರ್ಯಾಲಯಕ್ಕೆ ಹೋಗಿದ್ದೆ ಸ್ವಾಮಿ. ಅದು ಹೇಗಿದೆ ಎಂದರೆ ಹೊಸದಾಗಿ ಕೋಡೆಯವರು ಸಾರಾಯಿ ಅಂಗಡಿಗೆ ತೆಗೆದುಕೊಂಡಿದ್ದಾರೆ, ಏನೋ ಎನ್ನುವ ಹಾಗೆ ಇದೆ ಅಲ್ಲಿ ನುಗ್ಗಿದ್ದ ತಕ್ಷಣ ಇಲ್ಲಿ ಎಲ್ಲೋ ಸಾರಾಯಿ ಅಳೆಯಬಹುದೋ ಏನೋ, ಅಳೆದು ಹಂಚಬಹುದು ಎನ್ನುವ ರೀತಿ ಆ ಪರಿಸರ ಇದೆ.

ಶ್ರೀ ಮದನ ಗೋಪಾಲ್‌ನಾಯಕ್ :- ನೀವು ಅದನ್ನು ನೋಡುವುದಕ್ಕೆ ಹೋಗಿದ್ದರ?

ಶ್ರೀ ವಾಟಾಳ್ ನಾಗರಾಜ್ :- ನಾನು ಸಾರಾಯಿ ಅಂಗಡಿಯಲ್ಲಿ ನೋಡಿದ್ದೇನೆ. ತಪ್ಪು ಏನಿದೆ. ನೀವು ನಾನು ಕುಡಿದಿದ್ದೇನೆ ಎಂದು ಹೇಳುತ್ತೀರ? ಹಾಗೆಯೇ ತಿಳಿದುಕೊಳ್ಳಿ, ಏನಂತೆ. ಈಗ ಏನಾಗುತ್ತದೆ ಎಂದರೆ, ಆ ಅಭ್ಯಾಸ ಇರುವವರಿಗೆಲ್ಲ ಇದೇದೃಷ್ಟಿ. ಕಾಮಾಲೆ ಕಣ್ಣಿನವರಿಗೆ ಕಾಣುವುದೆಲ್ಲಾ ಹೀಗೆ ಎಂದು ತಿಳಿದುಕೊಳ್ಳುತ್ತಾರೆ. ಅದು ನಮ್ಮ ಸ್ವಭಾವ, ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಒಂದು ವಾರ್ತಾ ಇಲಾಖೆಯ ಭವನ ಕರ್ನಾಟಕದ ಎಲ್ಲಾ ಇಲಾಖೆಗಳಿಗಿಂತ ಒಂದು ಸುಂದರವಾದಂತಹ ಭವನ ಆಗಬೇಕು. ನಮ್ಮ ಇಡೀ ಮಂತ್ರಿಮಂಡಲದ ಅಂದರೆ ಮುಖ್ಯಮಂತ್ರಿಗಳಿಂದ ಹಿಡಿದು ಮಂತ್ರಿಗಳೆಲ್ಲಾ ಅಲ್ಲಿಯೇ ಪತ್ರಕರ್ತರ ಸಮ್ಮೇಳನವನ್ನು ಕರೆಯಬೇಕು. ಅಲ್ಲಿ ಇವತ್ತು ಮುಖ್ಯಮಂತ್ರಿಗಳಿಂದ ಸಂದರ್ಶನ ಇದೆ. ಇಂತಹ ಮಂತ್ರಿಗಳ ಸಂದರ್ಶನ ಇದೆ ಎಂದು ಹೇಳುವ ರೀತಿ ಆಗಬೇಕು. ಆದರೆ ಆ ವ್ಯವಸ್ಥೆ ಇಲ್ಲ, ಕ್ಯಾಮರಾ ಇಲ್ಲ. ಫ್ಯಾಕ್ಸ್ ಇಲ್ಲ, ಟೆಲಿಪ್ರಿಂಟರ್ ಇಲ್ಲ. ದೆಲ್ಲಿಯಲ್ಲಿ ಕ್ಯಾಮರಾ ಇಲ್ಲ.ಆ ದೆಲ್ಲಿಯ ವಾರ್ತಾ ಭವನವನ್ನು ನೀವು ನೋಡಿಬಿಟ್ಟರೆ, ಅದು ಯಾವುದೋ ಓಬೀರಾಯನ ಕಾಲದ್ದು, ಅದು ಕಾವೇರಿ ಎಂಪೋರಿಯಂ ಎಂದು ಏನೋ ಮಾಡಿದ್ದೀರಲ್ಲ

ಅದಕ್ಕೆ ಹಿಂದುಗಡೆಯಿಂದ ಹತ್ತಬೇಕು, ಮುಂದುಗಡೆ ಬಾಗಿಲು ಇಲ್ಲ. ಅಲ್ಲಿ ಹಳೆಯಕಾಲದ ಒಂದಷ್ಟು ಪುಸ್ತಕಗಳು ಇವೆ. ಅವಕ್ಕೆ ಕಪ್ಪು ಹಿಡಿದಿದೆ. ಮಸಿ ಹಿಡಿದಿದೆ. ಇನ್ನು ಎಷ್ಟರಮಟ್ಟಿಗೆ ನಾವು ದೆಹಲಿಯಲ್ಲಿ ನಮ್ಮ ಪ್ರಭಾವವನ್ನು ಬೀರಬಹುದು, ಕರ್ನಾಟಕದಲ್ಲಿ ಲಾಭಿಯನ್ನು ಮಾಡಬಹುದು. ಆ ವಾರ್ತಾ ಇಲಾಖೆಗೆ ಕೈಯಿಲ್ಲ, ಕಾಲಿಲ್ಲ, ಕಣ್ಣಿಲ್ಲ, ಹೆಳವರಾಗಿ ಬಿದ್ದುಹೋಗಿರತಕ್ಕಂತಹ ಇಲಾಖೆಯಿಂದ ನಾವು ಎಷ್ಟರಮಟ್ಟಿಗೆ ಶಕ್ತಿಯನ್ನು ಪಡೆಯಬಹುದು? ಆ ಇಲಾಖೆಗೆ ಎಷ್ಟು ಜವಾಬ್ದಾರಿ ವಹಿಸಿದ್ದೀರಿ ಎಂದರೆ, ಇಡೀ ರಾಜ್ಯದಲ್ಲೇ ಜವಾಬ್ದಾರಿಯುತವಾದಂತಹ ಇಲಾಖೆ ಅದು. ನಾನು ಹೇಳುತ್ತೇನೆ ನಮ್ಮ ಕರ್ನಾಟಕದ ಎಲ್ಲಾ ಇಲಾಖೆಗಳಿಗೂ ಒಬ್ಬ ಜಂಟಿ ನಿರ್ದೇಶಕರ ಮಟ್ಟದಲ್ಲಿ ವಾರ್ತಾಇಲಾಖೆಯನ್ನು ತೆರೆಯಬೇಕು. ಅವರವರ ಇಲಾಖೆಯ ಪ್ರಚಾರಕ್ಕೋಸ್ಕರ ವಾಗಿ ಅವರ ಮೂಲಕವೇನಡೆಯಬೇಕು. ಅವರಿಗೆ ಎಲ್ಲಾ ವ್ಯವಸ್ಥೆಯನ್ನು ಕೊಡಬೇಕು. ಆಧುನಿಕವಾದಂತಹ ಹೊಸಹೊಸ ವಾಹನಗಳನ್ನೂ ಕೊಡಬೇಕು. ಪ್ರತಿಯೊಂದನ್ನು ಕೊಡಬೇಕು. ಇದೆನ್ನೆಲ್ಲಾ ಕೊಟ್ಟು ವಾರ್ತಾಇಲಾಖೆಯ ಭವನವನ್ನು ಕಟ್ಟಬೇಕು. ಅದು 10 ಕೋಟಿ ಯಾಗಲೀ, 15 ಕೋಟಿಯಾಗಲೀ, ಬೆಂಗಳೂರಿನಲ್ಲಿ ಇರತಕ್ಕಂತಹ ವಾರ್ತಾಭವನವನ್ನು ಸುಂದರವಾಗಿ ಕಟ್ಟಬೇಕು. ತಮಗೆ ಹೇಳುವುದಾದರೆ, ಪಂಜಾಬಿನಲ್ಲಿ ಪ್ರಸ್ ಕ್ಲಬ್ ಇದೆ. ಅದು ಎಷ್ಟು ಸುಂದರವಾಗಿದೆ ಎಂದರೆ ಆ ವಾರ್ತಾಇಲಾಖೆಗಿಂತಲೂ ಒಂದು ಪಟ್ಟು ಜೋರಾಗಿದೆ. ನಮ್ಮಲ್ಲಿ ಈ ವಾರ್ತಾಇಲಾಖೆ ಆ ಮಟ್ಟದಲ್ಲಿ ಬೆಳದಿಲ್ಲ. ಆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿದ್ದಾರೆ, ವ್ಯವಸ್ಥೆ ಇದೆ. ಈಗ ತಮಗೆ ಹೇಳುವುದಾದರೆ, ಯಾವುದಾದರೂ ರಾಜಕೀಯ ಪಕ್ಷದವರು ಸಮಾರಂಭಮಾಡಿದರೆ, ಪತ್ರಕರ್ತರನ್ನು ಕರೆದುಕೊಂಡು ಹೋಗತಕ್ಕ ವ್ಯವಸ್ಥೆ ಇದೆಯಲ್ಲ ಆ ವ್ಯವಸ್ಥೆಯನ್ನು ಹೋಲಿಸಿದಾಗ ನಮ್ಮ ವಾರ್ತಾಇಲಾಖೆಯಲ್ಲಿ ಯಾವುದೋ ಕಾಲದ ಕಾರುಗಳು ಆ ಕಾರುಗಳಿಗೇ ಹಳೆಯ ಟೈರುಗಳು, ಟೂಬುಗಳು, ಯಾವುದೂ ಸರಿಯಾಗಿರುವುದಿಲ್ಲ. ಆ ವಾಹನದಲ್ಲಿ ಕರೆದು ಕೊಂಡು ಹೋಗಿ ಎಂದರೆ ಇದು ವ್ಯವಸ್ಥೆಯಲ್ಲ ಆದ್ದರಿಂದ ವಾರ್ತಾಇಲಾಖೆಗೆ ಸಮಗ್ರವಾಗಿ ಸಂಪೂರ್ಣ ಹೊಸರೂಪವನ್ನು ಕೊಡಬೇಕಾದರೆ ನಾನು ಬಹಳ ಜಾಸ್ತಿ ಏನೂ ಹೇಳಿಲ್ಲ. ಈಗ ನಾವು ಕೊಟ್ಟ ಹಣದಲ್ಲೇ ಸಮಿತಿಯವರು ಕೊಡಬೇಕು. ಅಷ್ಟರಲ್ಲೇ ಒಪ್ಪಬೇಕು. ಎಂದು ವಿಷಯ ಸಮಿತಿಯಲ್ಲಿ ನೀತಿ ನಿಯಮ ಇದೆ, ಇದು ಸಾಧ್ಯವಿಲ್ಲ. ನನ್ನ ಪ್ರಕಾರ ಅವರೇನು 1000 ಕೋಟಿ ಕೇಳಿಲ್ಲ, 100 ಕೋಟಿ ಕೇಳಿಲ್ಲ, 10 ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿ. ನಿಮ್ಮ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ನಿಮ್ಮ ಕರ್ನಾಟಕದ ವಾರ್ತಾಭವನ, ವಾರ್ತಾಇಲಾಖೆ ಎಷ್ಟು ಸುಂದರವಾಗಿ ಆಗುತ್ತದೆ ಎಂಬುದನ್ನು ನಾನು ತಮಗೆ ಹೇಳುತ್ತೇನೆ. ಅಧ್ಯಕ್ಷರೆ, ನಮ್ಮ ಶಾಸಕಾಂಗದಲ್ಲೂ ವಾರ್ತಾಇಲಾಖೆಯ ಒಬ್ಬ ಅಧಿಕಾರಿ ಇದ್ದರೆ ಇಲ್ಲಿ ನಾವು ಏನು ತೀರ್ಮಾನ ಮಾಡುತ್ತೇವೆ ಅದನ್ನು ತಕ್ಷಣ ವಾರ್ತಾಇಲಾಖೆಯ ಮುಖಾಂತರ ಕಳುಹಿಸಿದರೆ ಪ್ರಚಾರಕ್ಕೆ ಬರುತ್ತದೆ. ಆಗ ತಕ್ಷಣ ವಾರ್ತಾಇಲಾಖೆಯ ಮೂಲಕ ಇಲ್ಲೇನು ನಡೆಯಿತು ಎಂಬುದನ್ನು ನಾವು ತಿಳಿಯಬಹುದು. ಈ ವ್ಯವಸ್ಥೆ ಏನೂ ಇಲ್ಲ. ಆ ವ್ಯವಸ್ಥೆ ಪ್ರತಿಇಲಾಖೆಗೂ ಬರಬೇಕು ಎಂದು ನಾನು ಹೇಳುತ್ತೇನೆ. ಮತ್ತು ನಮ್ಮ ಈ ಕಾರ್ಪೋರೇಷನ್ ಎದುರುಗಡೆ ಬಾದಾಮಿ ಕಟ್ಟಡ ಇದೆ. ಅದು ಬಹಳ ಇತಿಹಾಸ ಪ್ರಸಿದ್ಧವಾದಂಥ ಕಟ್ಟಡ ಈಗ ಆ ಕಟ್ಟಡದಲ್ಲಿ ವಾರ್ತಾಇಲಾಖೆ ಇದೆ ಮತ್ತು ಪ್ರವಾಸೋಧ್ಯಮ ಇಲಾಖೆ ಇದೆ. ಈಗ

ಅದನ್ನೂ ಬಿಡಿಸಿ ಆ ಕಟ್ಟಡವನ್ನು ಬೇರೆಯವರು, ಖಾಸಗಿಯವರು ಕೊಂಡುಕೊಳ್ಳಬೇಕು. ಎನ್ನುವ ಸನ್ನಾಹ ನಡೆಯುತ್ತಾಇದೆ. ನಾನು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಆ ಬಾದಾಮಿ ಕಟ್ಟಡ ನಮ್ಮ ಕರ್ನಾಟಕಕ್ಕೆ ಬಹಳ ಒಳ್ಳೆಯ ದೊಡ್ಡ ಒಂದು ಇತಿಹಾಸ ಪ್ರಸಿದ್ಧವಾದ ಕಟ್ಟಡ. ಅದನ್ನು ಸರ್ಕಾರವೇ ಕೊಂಡುಕೊಳ್ಳಿ. ಆದರೆ ಯಾವ ಕಾರಣಕ್ಕೂ ಖಾಸಗಿಯವರಿಗೆ ಕೊಡತಕ್ಕಂತ ವ್ಯವಸ್ಥೆ ಖಂಡಿತ ಆಗಬಾರದು ಎಂಬ ಮಾತನ್ನು ತಮ್ಮಲ್ಲಿ ನಾನು ಕಳಕಳಿಯಿಂದ ಹೇಳುತ್ತಿದೇನೆ. ನಾನು ಏನು ಹೇಳುತ್ತೇನೇಂದರೆ, ಬಾದಾಮಿ ಕಟ್ಟಡ ಖಾಸಗಿಯವರದೆ ಸರ್ಕಾರ ಅಲ್ಲಿನವರ ಜೊತೆ ಮಾತು ಕಥೆ ಆಡಿ ತಾವೇ ಆ ಒಂದು ಬಾದಾಮಿ ಕಟ್ಟಡವನ್ನು ಕೊಂಡುಕೊಳ್ಳಿ ಎಂದು ನಾನು ಹೇಳುವುದು. ಏಕೆಂದರೆ, ಅಂತಹ ಕಟ್ಟಡ ನಮಗೆ ಇನ್ನು ಸಿಗುವುದಿಲ್ಲ ಅಲ್ಲಿ ಈಗಾಗಲೇ 2-3 ಇಲಾಖೆಗಳು ಇರತಕ್ಕಂಥ ವ್ಯವಸ್ಥೆ ಇದೆ. ಮಹಾರಾಷ್ಟ್ರದಲ್ಲಿ .ವಾರ್ತಾಇಲಾಖೆಗೆ ಡ್ಯರಕ್ಟ್‌ರ್ ಜನರಲ್ ಎಂದು ಇದ್ದಾರೆ. ಮತ್ತು ದಹಲಿಯಲ್ಲಿ ನಿರ್ದೇಶಕ ಮಟ್ಟದವರೊಬ್ಬರು ಅಲ್ಲಿದ್ದಾರೆ. ಆದರೆ ದೆಹಲಿಯ ನಮ್ಮ ವಾರ್ತಾಭವನದಲ್ಲಿ ಪ್ರಥಮ ದರ್ಜೆ ಇರಬಹುದು, ಗುಮಾಸ್ತರ ಗ್ರೇಡ್‌ನವರು ಇರಬಹುದು. ಮತ್ತು ಇನ್ನೂ 3ಜನ ಜವಾನರು ಇದ್ದಾರೆ ಅದು ಬಿಟ್ಟರೆ ಏನೂ ಇಲ್ಲ ಸ್ವಾಮಿ ಆದುದರಿಂದ ದಹಲಿಯ ವಾರ್ತಾಭವನವನ್ನು ಒಂದು ದೊಡ್ಡ ಪ್ರಮಾಣದಲ್ಲಿ ಮಾಡಬೇಕು. ಮತ್ತು ಪ್ರವಾಸೋದ್ಯಮ ಇಲಾಖೆ ದೆಹಲಿಯಲ್ಲಿ ಪರಿಣಾಮಕಾರಿಯಾಗಿ ಇರಬೇಕು. ದೆಹಲಿಯಿಂದ ಕರ್ನಾಟಕಕ್ಕೆ ಬರತಕ್ಕಂಥ ಎಲ್ಲಾ ಜನರಿಗೆ ದಾರಿದೀಪವಾದಂಥ ಒಂದು ವಾರ್ತಾಭವನ ಮತ್ತು ಪ್ರವಾಸ್ಯೋದ್ಯಮ ಎಲ್ಲಾ ಒಟ್ಟಿಗೆ ಇರಬೇಕು. ಇದನ್ನೆ ನಾನು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಇದೆಲ್ಲವನ್ನೂ ಸೇರಿಸಿ ಒಂದು ಕನ್ನಡ ಭವನವನ್ನು ನಾವು ದಹಲಿಯಲ್ಲಿ ಕಟ್ಟಬೇಕು ಎಂದು ನಮ್ಮ ಸಮಿತಿ ಹೋದಾಗ ಅದನ್ನು ಶಿಫಾರಸ್ಸು ಮಾಡಿದ್ದೇವೆ.ಆ ಶಿಫಾರಸ್ಸನ್ನು ಕಾರ್ಯಗತಗೊಳಿಸಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಸರ್ಕಾರವನ್ನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದು ಪ್ರಚಾರ ಯುಗ. ನಾವು ಶಕ್ತಿ ಪೂರ್ಣವಾಗಿ ಈ ವಾರ್ತಾಇಲಾಖೆಯನ್ನು ಬೆಳಸಬೇಕು. ಮನುಷ್ಯನಿಗೆ ಕಣ್ಣುಕಿವಿ ಎಷ್ಟು ಮುಖ್ಯವೋ ಅದೇ ರೀತಿ ವಾರ್ತಾ ಇಲಾಖೆ ಈ ಸರ್ಕಾರಕ್ಕೆ ಅಷ್ಟೇಪ್ರಮುಖವಾದ ಇಲಾಖೆ. ಈ ಇಲಾಖೆಯನ್ನು ಬೆಳೆಸುವುದರಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿಕೆಲಸ ಮಾಡಬೇಕು, ಇದರ ಜೊತೆಗೆ ಕನ್ನಡ ಸಂಸ್ಕೃತಿ ಇಲಾಖೆ ನನಗೆ ಬಂದಿದೆ. ತಾವು ಕೂಡ ನೋಡಿದ್ದೀರಿ. ಈ ಇಲಾಖೆಗೆ ತಾವು ಕೊಟ್ಟಿರುವುದಾದರೂ ಏನು? ಏನೋ ಮೂರು ಕಾಸಿನ ಮಜ್ಜಿಗೆಯನ್ನು ಕೊಟ್ಟಂತೆ ಇದಕ್ಕೆ ಒಂದು ಇಲಾಖೆ, ಒಬ್ಬ ಕಾರ್ಯದರ್ಶಿ, ನಿರ್ದೇಶಕರು ಇದೆಲ್ಲಾ ನಮ್ಮ ಯಾವುದೋ ಒಂದು ನೃಪತುಂಗರಸ್ತೆಯಲ್ಲಿ ಯಾವುದೋ ಒಂದು ಸಂದಿಯಲ್ಲಿ ಮೇಲೆ ಹತ್ತಿಹೋಗಿ ಆ ಇಲಾಖೆಯನ್ನು ನೋಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕರ್ನಾಟಕದ ಬೆಳವಣಿಗೆ ಕನ್ನಡಬಾಷೆಯ ಬೆಳವಣಿಗೆ ಕನ್ನಡಸಂಸ್ಕೃತಿ, ಕನ್ನಡ ಇತಿಹಾಸ ಇದೆಲ್ಲಾ ಏನಾಗಿದೆ! ಈ ಇಲಾಖೆಯ ಗತಿ ಇವತ್ತು ಏನಾಗಿದೆ? ಈ ಇಲಾಖೆಗೆ ತಾವು ಕೊಟ್ಟಿರತಕ್ಕದ್ದು ಕೇವಲ 9 ಅಥವಾ 9.5 ಕೋಟಿ ರೂಪಾಯಿಗಳು ಇದರಲ್ಲಿ ಸಿಬ್ಬಂದಿ ವರ್ಗದ ಸಂಬಳ ಸಾರಿಗೆಗೆ ಸುಮಾರು 5.5 ಕೋಟಿ ರೂಪಾಯಿ ಖರ್ಚಾಗುತ್ತದೆ. ಅಲ್ಲಿ ವೃಧ್ಧಾಪ್ಯ ವೇತನಕ್ಕೆ ಹಣವಿಲ್ಲ. ಸಾಹಿತ್ಯಗಳ ಗೌರವಧನಕ್ಕೆ ಹಣವಿಲ್ಲ. ಕಲಾವಿದರ ಗೌರವ ಧನಕ್ಕೆ ಹಣವಿಲ್ಲ. ಅಲ್ಲಿ ಯಾವುದೇ ವ್ಯವಸ್ಥೆ ಇಲ್ಲ. ಅಲ್ಲಿರತಕ್ಕ ಕಾರ್ಯದರ್ಶಿಯಾಗಲಿ, ನಿರ್ದೇಶಕರಾಗಲಿ,

ಯಾವರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ? ಖಂಡಿತವಾಗಿ ಸಾಧ್ಯವಿಲ್ಲ. ಯಾವ ಭಾಷೆಯಬಗ್ಗೆ ಸರ್ಕಾರ ಹೆಮ್ಮೆಪಟ್ಟುಕೊಂಡು ತನ್ನ ಭುಜವನ್ನು ತಟ್ಟಿಕೊಂಡು ನಾವು ಕನ್ನಡವನ್ನು ಮೆರೆಸಿದ್ದೇವೆ, ಕನ್ನಡವನ್ನು ಆಕಾಶಕ್ಕೆ ತೆಗೆದುಕೊಂಡು ಹೋಗಿದ್ದೇವೆಂದು ಹೇಳುತ್ತಿದೆಯೋ ಈ ಸರ್ಕಾರ ಕನ್ನಡಸಂಸ್ಕೃತಿ ಇಲಾಖೆಗೆ ಕೊಟ್ಟಿರತಕ್ಕ ಕೊಡುಗೆ ಏನು? ನಾವು ಈ ಇಲಾಖೆಗೆ ನೂರಾರುಕೋಟಿ ರೂಪಾಯಿಗಳೇನೂ ಕೇಳಿಲ್ಲ. 10 ಕೋಟಿ ರೂಪಾಯಿ ಹೆಚ್ಚಿಗೆ ಕೊಡಿ. ತಮಗೆ ಹೇಳುವುದಾದರೆ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆಗಳಲ್ಲಿ ನೂರಾರುಕೋಟಿ ರೂಪಾಯಿಗಳನ್ನು ಏನು ಲೆಕ್ಕ ಹಾಕುತ್ತೀರಿ ಅದರಲ್ಲಿ ಸುಮಾರು 10 ಕೋಟಿ ರೂಪಾಯಿ ಏನು ಲೆಕ್ಕ ದಲ್ಲಿ ಬಿಟ್ಟುಹೋಗುತ್ತದೆ, ಅಥವಾ ಲೆಕ್ಕಕ್ಕೆ ಸಿಗುವುದಿಲ್ಲ ಆ 10 ಕೋಟಿ ರೂಪಾಯಿಗಳನ್ನು ಆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೊಟ್ಟರೆ ಸಾಕು. ಇಷ್ಟು ಕೊಟ್ಟರೆ ಈ ಇಲಾಖೆ ಪರಿಣಾಮಕಾರಿಯಾಗಿ, ಚೆನ್ನಾಗಿ ಬೆಳೆಯುತ್ತದೆ. ಕನ್ನಡ ಸಂಸ್ಕೃತಿ ಇಲಾಖೆ ಪ್ರತಿಯೊಂದು ಜಿಲ್ಲೆಯಲ್ಲೂ ಶಕ್ತಿಪೂರ್ಣವಾಗಿ ಬೆಳೆದು ತನ್ನ ಕಾರ್ಯಲಾಯವನ್ನು ಹೊಂದಬೇಕು. ಗಡಿನಾಡಿನಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯನ್ನು ತೆರೆಯಬೇಕು ಹೊರನಾಡಿನಲ್ಲಿ ಅಲ್ಲಿನ ಕನ್ನಡಿಗರ ಬೆಳವಣಿಗೆಗೆ ಸಾಹಿತ್ಯ, ಸಂಸ್ಕೃತಿ, ಕಲೆಗಳ ಬೆಳವಣಿಗೆಗಾಗಿ 5 ಕೋಟಿ ರೂಪಾಯಿಗಳನ್ನು ಕೊಡಬೇಕು. ಗಡಿನಾಡ ಕನ್ನಡಿಗರಿಗಾಗಿ 5 ಕೋಟಿ ರೂಪಾಯಿಗಳನ್ನು ಕೊಡಬೇಕು ಗಡಿನಾಡುಗಳಲ್ಲಿ ಕೇವಲ ರಸ್ತೆ ಅಥವಾ ಮತ್ತಿತ್ತರ ಕೆಲಸವನ್ನು ಮಾಡುವುದು ಮುಖ್ಯವಲ್ಲ. ಗಡಿನಾಡಿನಲ್ಲಿ ಕನ್ನಡದ ಸಮಗ್ರ ಬೆಳವಣಿಗೆಗಾಗಿ ಈ ಹೊಸಚಿಂತನೆಯನ್ನು ಸರ್ಕಾರ ಮಾಡಬೇಕಾದುದ್ದು ಅಗತ್ಯ. ಆದರೆ ಇವತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸಂಪೂರ್ಣವಾಗಿ ಈ ಸರ್ಕಾರ ಕಡೆಗಣಿಸಿದೆ. ವಾರ್ತಾಇಲಾಖೆಯನ್ನು ಕಾಲಿನ ಕಸದಂತೆ ನೋಡುತ್ತಿದ್ದಾರೆ. ರಾಜ್ಯಸರ್ಕಾರ ಎಲ್ಲಾ ಇಲಾಖೆಗಳಿಗೂ ಗೌರವ ತರತಕ್ಕ ಇಲಾಖೆ ಎಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.ತಮಗೆ ಗೊತ್ತಿರುವಂತೆ ಈ ಸರ್ಕಾರಕ್ಕೆ ನೇರವಾಗಿ ಗೌರವವನ್ನು ತರತಕ್ಕ ಇಲಾಖೆ ಎಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಆದರೆ ಈ ಇಲಾಖೆಗೆ ಸರ್ಕಾರ ಮಾಡಿರತಕ್ಕ ವ್ಯವಸ್ಥೆಯ ಬಗ್ಗೆ ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ಈ ಇಲಾಖೆಯನ್ನು ಸರ್ಕಾರ ಪರಿಣಾಮಕಾರಿಯಾಗಿ ಬೆಳಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಛೇರ್ಮನ್ :- ಆದುದರಿಂದಲೇ ಈ ಸಮಿತಿಯ ಅಧ್ಯಕ್ಷರನ್ನಾಗಿ ನಿಮ್ಮನ್ನು ನೇಮಕಮಾಡಿ ನಿಮ್ಮಿಂದ ಒಳ್ಳೆಯ ವಿಷಯವನ್ನು ತಿಳಿಯಬಯಸುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ತಮಗೆ ಅಭಿನಂದನೆಗಳು.

ಶ್ರೀ ಕೆ.ಜೆ.ಜಾರ್ಜ್ :- ನಿಮ್ಮನ್ನು ಈ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಹೊರತು, ಅದನ್ನು ಅನುಷ್ಠಾನ ಮಾಡುವುದಕ್ಕಾಗಿ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ನನ್ನನ್ನು ವಿಷಯ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ, ನಾನು ಹೇಳುವುದನ್ನೆಲ್ಲಾ ಸರ್ಕಾರ ಒಪ್ಪಿಕೊಂಡರೆ ಅಥವಾ ನಾನು ಹೇಳಿದ್ದರ ಪೈಕಿ 50 ಭಾಗವನ್ನು ಪರಿಣಾಮಕಾರಿಯಾಗಿ ಸರ್ಕಾರ ಈ ವರ್ಷ ಒಪ್ಪಿದರೆ ಬಹಳ ಸಂತೋಷ. ನಾನು ಹೆಚ್ಚಿಗೆ ಕೇಳುವುದಿಲ್ಲ. ನಮ್ಮ ಸಮಿತಿಯ ವತಿಯಿಂದ ನಾವು ಏನು ವರದಿಯನ್ನು ಸಲ್ಲಿಸಿದ್ದೇವೆ ಅದರಲ್ಲಿ 50 ಪರ್ಸೆಂಟ್ ತಾವು ಒಪ್ಪಿಕೊಂಡರೆ ಈ ನಮ್ಮ ಸಮಿತಿಗೂ ಗೌರವ ಬರುತ್ತದೆ. ಆದರೆ ನಾವು ಪ್ರತಿಯೊಂದು ವಿಚಾರವನ್ನೂ ಆಳವಾಗಿ ವಿಚಾರ ಪೂರ್ಣವಾಗಿ ಪರಿಶೀಲಿಸಿ ವರದಿಯನ್ನು ಕೊಟ್ಟರೂ ನೀವು ಈ ಇಲಾಖೆಗೆ ಹೆಚ್ಚಿನ ಹಣವನ್ನು ಕೊಡುತ್ತಿಲ್ಲ. ನಾವು ಇಷ್ಟೇ ಹಣವನ್ನು ಕೊಡುವಂಥಾದ್ದು, ಇದಕ್ಕಿಂತ ಹೆಚ್ಚಿಗೆ ಕೊಡುವುದ್ದಿಲ್ಲವೆಂದು ತಾವು ಹೇಳುವುದಾದರೆ ನಿಮ್ಮ ಆ ಸಮಿತಿಗೂ ಕೂಡ ಯಾವುದೇ ಬೆಲೆ ಬರುವುದಿಲ್ಲ ಎನ್ನುವ ಮಾತನ್ನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ಪ್ರವಾಸೋದ್ಯಮ ಇಲಾಖೆಯನ್ನು ಬಹಳ ಪರಿಣಾಮಕಾರಿಯಾಗಿ, ಹೆಚ್ಚು ದಷ್ಟಪುಷ್ಟವಾಗಿ ಬೆಳೆಯುವುದಕ್ಕೆ ನೀವು ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಮ್ಮ ಸಮಿತಿಯ ವ್ಯಾಪ್ತಿಯಲ್ಲಿ ಸುಮಾರು 12 ಇಲಾಖೆಗಳು ಏನು ಬಂದಿವೆ, ಇವುಗಳನ್ನು ಪರಿಣಾಮಕಾರಿಯಾಗಿ ಪರಿಶೀಲಿಸಿ ನಾವು ಒಂದು ವರದಿಯನ್ನು ಕೊಟ್ಟಿದ್ದೇವೆ. ತಮಗೆ ಒಂದು ಮಾತನ್ನು ಇವತ್ತು ಹೇಳುವುದಾದರೆ, ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನವರು ಕಣ್ಣೀರು ಇಡುವಂಥ ಪರಿಸ್ಥಿತಿ ಇದೆ. ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಬಿ.ಎಂ.ಶ್ರೀಯವರ ಅಚ್ಚುಕೂಟ ಇದೆ. ಇದನ್ನು ತಾವು ನೋಡಿರಬಹುದು. ಆ ಅಚ್ಚುಕೂಟದ ಮುಂದೆ ಸುಮಾರು 50 ಲಾರಿಗಳಷ್ಟು ಮಣ್ಣು ಬಿದ್ದಿದೆ. ಇವರು ಇನ್ನೇನೂ ಮಾಡಿಸಬೇಕಾಗಿಲ್ಲ, ಅಲ್ಲಿ ಬಿದ್ದಿರತಕ್ಕ ಮಣ್ಣನ್ನು ಎತ್ತಿ ಹಾಕಿಸಿದರೆ ಸಾಕು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅಲ್ಲಿಗೆ ಬಂದಂಥ ಎಲ್ಲಾ ಮಹನೀಯರಿಗೂ ಈ ಮಣ್ಣನ್ನು ತೆಗೆಸಿಹಾಕುವಂತೆ ಮನವಿ ಮಾಡಿಕೊಂಡರು. ಈ ಮಣ್ಣು ಯಾವುದೋ ಕಾಲದಿಂದ ಬಿದ್ದಿದೆ. ಆ ವಾತಾವರಣ ಚೆನ್ನಾಗಿರಬೇಕೆಂಬ ದೃಷ್ಟಿಯಿಂದ ಅಲ್ಲಿ ಬಿದ್ದಿರತಕ್ಕ ಮಣ್ಣನ್ನು ತೆಗೆಸಬೇಕೆಂದು ಸರ್ಕಾರಕ್ಕಾಗಲಿ, ನಗರ ಸಭೆಗಾಗಲಿ ಇವತ್ತಿನವರೆಗೂ ಮನಸ್ಸು ಬಂದಿಲ್ಲ. ಕನ್ನಡ ಸಾಹಿತ್ಯದ ಪರಿಷತ್ತಿನ ಒಳಗಡೆ ತುಂಬಾ ಹಳೆಯಕಾಲದ ಬಿ.ಎಂ.ಶ್ರೀಯವರ ಅಚ್ಚುಕೂಟವನ್ನು ತಾವು ನೋಡಿರಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅಲ್ಲಿಗೆ ಅವಶ್ಯಕವಾಗಿ ಬೇಕಾದಂಥ ಅನುಕೂಲಗಳನ್ನು ಪ್ರಾಮಾಣಿಕವಾಗಿ ಕೇಳಿದ್ದಾರೆ. ಆ ಕೆಲಸವನ್ನು ನಾವು ಮಾಡಲಿಲ್ಲ ಎಂದರೆ ಇನ್ನು ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾದರೂ ಏತಕ್ಕೆ ಬೇಕು? ಗಡಿನಾಡಿನವರಿಗೆ ನಾವು ಬೇಕಾಗಿಲ್ಲ, ಹೊರನಾಡಿನಿಂದ ಬರತಕ್ಕ ಕಲ್ಯಾಣ ಶೆಟ್ಟಿಯವರ ಬಗ್ಗೆ ನಮ್ಮ ಗಮನವಿಲ್ಲ, ಕಯ್ಯಾರ ಕಿಯುಣ್ಣರೈರವರ ಬಗ್ಗೆ ಗಮನವಿಲ್ಲ, ಗಡಿನಾಡಿನ ಬಗ್ಗೆ ನಮ್ಮ ತಲೆಯಲ್ಲಿ ಯೋಚನೆಯೇ ಇಲ್ಲ. ಅಂದಮೇಲೆ ನಾವು ಏನು ಮಾಡಬೇಕು? ಇದನ್ನು ಕೇಳುವವರು ಯಾರು? ದಿನನಿತ್ಯ ನಾವು ಇದ್ದನ್ನೇ ಕೇಳಿ, ಕೇಳಿ, ನಿಮಗೆ ಹೇಳುತ್ತೇವೆ. ಸರ್ಕಾರದವರು ಇದುವರೆಗೂ ಯಾವುದೇ ರೀತಿಯ ಪರಿಣಾಮಕಾರಿಯಾದ ಕ್ರಮವನ್ನೂ ಕೈಗೊಂಡಿಲ್ಲವೆಂದು ಬಹಳ ವ್ಯಸನದಿಂದ ತಮ್ಮಲ್ಲಿ ನಾನು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ನಾನು ಇನ್ನೂ ಕೆಲವು ವಿಚಾರಗಳನ್ನು ಇಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದೆ ಈ ಸದನದಲ್ಲಿ ಮಾನ್ಯ ಎಂ.ಎಸ್.ಕೃಷ್ಣನ್‌ರವರು, ಅದೇ ರೀತಿ ಮಾನ್ಯ ಸೂರ್ಯನಾರಾಯಣರವರೂ ಕೂಡ ನಮ್ಮ ಜೊತೆ ಇರುತ್ತಿದ್ದರು. ಅವರು ಕಾರ್ಮಿಕ ಮುಖಂಡರು ಕಾರ್ಮಿಕರ ಒಳಿತಿಗಾಗಿ ಬಹಳಷ್ಟು ಕೆಲಸವನ್ನು ಮಾಡಿದವರು ಇವರು. ಅವರ ನಂತರ ಕಾರ್ಮಿಕರ ಬಗ್ಗೆ ಇದುವರೆಗೂ ಯಾರೂ ಕೂಡ ಒಂದೇ ಒಂದು ಶಬ್ದವನ್ನೂ ಮಾತನಾಡಿದವರಲ್ಲ, ಅವರ ಬಗ್ಗೆ ಯಾರೂ ಕೂಡ ಗಮನವನ್ನೂ ಹರಿಸಲಿಲ್ಲ. ತಮಗೆ ತಿಳಿದಿರುವಂತೆ, ಇವತ್ತು ಬಹಳಷ್ಟು ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಎಷ್ಟು ಕಾರ್ಖಾನೆಗಳು,ಮಿಲ್ಲುಗಳು ಮುಚ್ಚಿವೆ, ಇದರ ಬಗ್ಗೆ ಸರ್ಕಾರ ಪರಿಣಾಮಕಾರಿಯಾಗಿ ಒಂದು ಶ್ವೇತಪತ್ರವನ್ನು ಹೊರಡಿಸಬೇಕು. ಕರ್ನಾಟಕದಲ್ಲಿರತಕ್ಕ ಎಷ್ಟು ಕಾರ್ಖಾನೆಗಳು ಮುಚ್ಚಿವೆ ಅವುಗಳಲ್ಲಿ ಕೆಲಸ ಮಾಡುತ್ತಿದ್ದ ಎಷ್ಟು ಜನ ಕಾರ್ಮಿಕರು ಇವತ್ತು ಬೀದಿಪಾಲಾಗಿದ್ದಾರೆ, ಎಷ್ಟು ಕಾರ್ಮಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಿಲ್ಲ, ಎಷ್ಟು ಮೊಕದ್ದಮೆಗಳು ಕಾರ್ಮಿಕರಿಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳಲ್ಲಿ ಉಳಿದಿವೆ, ಇನ್ನೂ ಮುಂತಾದ ಸಮಗ್ರ ವಿವರಗಳನ್ನೊಳಗೊಂಡಂತೆ ರಾಜ್ಯಸರ್ಕಾರ ಒಂದು ಶ್ವೇತಪತ್ರವನ್ನು ಹೊರಡಿಸಬೇಕು. ಈ ಸಭೆ ಮುಗಿದಮೇಲಾದರೂ ಹೊರಡಿಸಲಿ. ಮೈಸೂರಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ ಎಂಬುದು ಇತಿಹಾಸಪ್ರಸಿದ್ಧವಾದುದು. ಅಧಿಕಾರಕ್ಕೆ ಬಂದಂಥ ಎಲ್ಲಾ ಸರ್ಕಾರಗಳೂ ಕೂಡ ಈ ಮಿಲ್‌ನ್ನು ನಾಳೆ ತೆಗೆಸುತ್ತೇವೆ, ಇವತ್ತು ತೆಗೆಸುತ್ತೇವೆಂದು. ಕಾರ್ಮಿಕ ವೃಂದಕ್ಕೆ ಭರವಸೆಗಳ ಮೇಲೆ ಭರವಸೆಗಳನ್ನು ಕೊಟ್ಟು ಒಂದು ರೀತಿಯ ಅಗೌರವವನ್ನು ಮಾಡಿದ್ದಾರೆ. ಇತ್ತೀಚೆಗೆ ಅಧಿಕಾರವನ್ನು ವಹಿಸಿಕೊಂಡಂಥ ಮಾನ್ಯಜವಳಿ ಖಾತೆ ಮಂತ್ರಿಗಳೂ ಕೂಡ ಈ ಕೂಡಲೇ ಈ ಮಿಲ್ ಕಾರ್ಯಾರಂಭ ಮಾಡುವಂತೆ ಮಾಡುತ್ತೇವೆಂದು ಹೇಳಿದರು.ಇದು ಕೇವಲ ಭರವಸೆಗಳಾಗಿ ಉಳಿದಿವೆಯೇ ಹೊರತು ಪರಿಣಾಮಕಾರಿಯಾದ ಯಾವುದೇ ಕಾರ್ಯಕ್ರಮವವೂ ಜಾರಿಗೆ ಬರಲಿಲ್ಲ. ಶ್ರೀ ಕೃಷ್ಣರಾಜೇಂದ್ರ ಮಿಲನ್ನು ಮುಚ್ಚಿದರು, ಈಗ ರಾಜಾ ಮಿಲನ್ನು ಮುಚ್ಚುತ್ತಿದ್ದಾರೆ, ಜಾವಾ ಕಾರ್ಖಾನೆಯನ್ನು ಮುಚ್ಚಿದರು, ಅನೇಕ ಖಾಸಗೀ ಕಾರ್ಖಾನೆಗಳನ್ನು ಮುಚ್ಚಿದ್ದಾರೆ,ಇವತ್ತು ಈ ಕಾರ್ಮಿಕ ವರ್ಗದವರ ಬಗ್ಗೆ ನಮ್ಮ ಸರ್ಕಾರದಲ್ಲಿ ಯಾವುದೇ ಒಂದು ನಿರ್ದಿಷ್ಟವಾದ ನೀತಿ ಇಲ್ಲ. ರಾಜ್ಯದಲ್ಲಿರತಕ್ಕ ಎಲ್ಲಾ ಕಾರ್ಖಾನೆಗಳನ್ನೂ ಕೂಡ ಇವರು ಖಾಸಗಿಯವರಿಗೆ ಮಾರುತ್ತಿದ್ದಾರೆ. ಅವರು ನಮ್ಮ ಕಾರ್ಮಿಕರನ್ನೆಲ್ಲಾ ಹೊರಗೆ ಹಾಕುತ್ತಿದ್ದಾರೆ, ಇಂಥ ಪರಿಸ್ಥಿತಿ ಇರುವಾಗ ನಾವು ಎಲ್ಲಿ ಹೋಗಬೇಕು? ತಮಗೆ ಗೊತ್ತಿರುವಂತೆ, ಯು.ಬಿ.ಎ.ಫ್ಯಾಕ್ಟರಿಯಲ್ಲಿ ಕೇವಲ ಕನ್ನಡಿಗರೇ ಇರತಕ್ಕದ್ದು. ಆ ಕಾರ್ಖಾನೆಯನ್ನು ಮಲ್ಯ ಎನ್ನುವವರು ನಡೆಸಿ, ಹೆಚ್ಚಿನ ಲಾಭಗಳಿಸಿ, ಈಗ ಅದನ್ನು ಮುಚ್ಚಿ ಬೊಂಬಾಯಿಯಲ್ಲಿರುವ ಇನ್ನೊಂದು ಕಾರ್ಖನೆಗೆ ಈ ಹಣವನ್ನೆಲ್ಲಾ ತೆಗೆದುಕೊಂಡುಹೋಗಿ ಹಾಗಿ ಅಲ್ಲಿ ಲಾಭ ಪಡೆದುಕೊಳ್ಳುತ್ತಿದ್ದಾರೆ. ಅಲ್ಲಿದ್ದ ಕಾರ್ಮಿಕರೆಲ್ಲಾ ಬೀದಿಪಾಲಾಗುತ್ತಿದ್ದಾರೆ. ಇವತ್ತು ರಾಜ್ಯದಲ್ಲಿದ್ದ ಈ ರೀತಿಯ ನೂರಾರು ಕಾರ್ಖಾನೆಗಳಲ್ಲಿ, ಮಿಲ್ಲುಗಳಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರ ಬಗ್ಗೆ ಯಾವುದೇ ಒಂದು ವ್ಯವಸ್ಥಿತ ಕಾರ್ಯಕ್ರಮ ರೂಪಿತವಾಗಿಲ್ಲ. ಇಲ್ಲಿ ಕಾರ್ಮಿಕ ಮಂತ್ರಿಗಳಿದ್ದಾರೆ, ಕಾರ್ಮಿಕ ಇಲಾಖೆಯ ಆಯುಕ್ತರಿದ್ದಾರೆ, ಕಾರ್ಮಿಕ ಇಲಾಖೆ ಇದೆ, ಆದರೆ ಕಾರ್ಮಿಕರ ಹಿತದ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂಬ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ತಮಗೆ

ಗೊತ್ತಿರುವಂತೆ ಕೃಷ್ಣರಾಜೇಂದ್ರ ಮಿಲ್ಲಿನಿಂದ ಹೊರಗೆ ಬಂದಂಥ ಕಾರ್ಮಿಕರು ತಮ್ಮ ಪತ್ನಿಯರ ಮಾಂಗಲ್ಯಗಳನ್ನು ಮಾರಿಕೊಂಡಿದ್ದಾರೆ. ಬೀದಿ ಬೀದಿಯಲ್ಲಿ ಭಿಕ್ಷೆ ಎತ್ತುತ್ತಿದ್ದಾರೆ. ಇವರ ಹಿತದ ಬಗ್ಗೆ ಇದುವರೆಗೂ ಬಂದಂಥ ಯಾವುದೇ ಸರ್ಕಾರವೂ ಯಾವುದೇ ಪರಿಣಾಮಕಾರಿ ಕಾರ್ಯಕ್ರಮವನ್ನೂ ರೂಪಿಸದೇ ಹೋಗಿರುವುದು ಅತ್ಯಂತ ಶೋಚನೀಯ. ತಾವು ಕಾರ್ಮಿಕ ವೃಂದದ ಬಗ್ಗೆ, ಅವರ ಹಿತದ ಬಗ್ಗೆ ಚಿಂತನೆ ಮಾಡದೇ ಹೋದರೆ ಅವರ ಪರಿಸ್ಥಿತಿ ಏನು?

ಆದ್ದರಿಂದ ಸರ್ಕಾರಕ್ಕೆ ಕಾರ್ಮಿಕಚಿಂತನೆ, ಕಾರ್ಮಿಕರ ಬಗ್ಗೆ ಚಿಂತನೆ, ಹೊಸ ಬೆಳಕನ್ನು ಚೆಲ್ಲತಕ್ಕ ನೀತಿ ಇರಬೇಕು. ಈ ಬಗ್ಗೆ ಒಂದು ಶ್ವೇತಪತ್ರವನ್ನು ಸರ್ಕಾರ ಹೊರಡಿಸಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರ ಪರಿಣಾಮಕಾರಿಯಾಗಿ 15 ವರ್ಷಗಳಿಂದ ಇವತ್ತಿನವರೆಗೆ ಎಷ್ಟು ವೇಗದಲ್ಲಿ ಬೆಳೆಯುತ್ತಿದೆ ಎಂದರೆ ಸ್ವಲ್ಪ ಹೆಚ್ಚುಕಡಿಮೆ 50 ಲಕ್ಷ ಬೆಂಗಳೂರು ನಗರದ ಜನಸಂಖ್ಯೆ. ಬೆಂಗಳೂರಿಗೆ ಬರತಕ್ಕ ವಲಸೆ ಪ್ರತಿ ದಿನ ಉಂಟು. ಅದೇನೂ ಇವತ್ತು ನಾಳೆಯದಲ್ಲ. ಪ್ರತಿದಿನ ಉಂಟು. ಯಾರು ಬರುತ್ತಿದ್ದಾರೆ ಎಷ್ಟು ಜನ ಬರುತ್ತಿದ್ದಾರೆ? ಬಂದವರು ಎಲ್ಲಿರುತ್ತಾರೆ ಅವರ ಪರಿಸ್ಥಿತಿ ಏನು ಬೆಂಗಳೂರಿನ ಶಾಂತಿ , ಕಾನೂನು ಶಿಸ್ತು ಈ ಬಗ್ಗೆ ಏನು ?

ಛೇರ್ಮನ್ ಃ ಎಲ್ಲಾ ಕರ್ನಾಟಕದಿಂದ ಬರುತ್ತಿದ್ದಾರೊ?

ಶ್ರೀ ವಾಟಾಳ್ ನಾಗರಾಜ್ ಃ- ಕರ್ನಾಟಕದಿಂದ ಬರುತ್ತಿಲ್ಲ . ಕರ್ನಾಟಕದಿಂದ ಅಂತೂ ಖಂಡಿತಬರುತ್ತಿಲ್ಲ. ಅಂಕಿಗಳನ್ನು ಹೇಳುವುದಕ್ಕೆ ಹೋದರೆ ನೋವಾಗುತ್ತದೆ. ಕರ್ನಾಟಕದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇನ್ನು 5 ವರ್ಷ ಹೋದರೆ ನಾವು ಅಲ್ಪಸಂಖ್ಯಾತರಾಗುತ್ತೇವೆ. ತಮಗೆ ಅರ್ಥವಾಗುತ್ತದೆ, ನಾನು ಅನೇಕ ಸಾರಿ ಹೇಳಿದ್ದೇನೆ. 1956 ಕರ್ನಾಟಕ ಏಕೀಕರಣ ಆದಾಗಿನಿಂದ ಇಲ್ಲಿಯವರೆಗೆ ಕರ್ನಾಟಕಕ್ಕೆ ಬಂದಿರತಕ್ಕ ಜನಸಂಖ್ಯೆ ಒಂದು ಕೋಟಿ. ಅದರಲ್ಲಿ 60 ಲಕ್ಷ ಜನ ಮತದಾರರಿದ್ದಾರೆ. ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ನಾವು ಬಹಳ ನೋವನ್ನು ಪಟ್ಟಿದ್ದೇವೆ, ಪಡುತ್ತಿದ್ದೇವೆ. ಈ ವಲಸೆಯನ್ನು ತಡೆಯಲಿಲ್ಲ ಅಂದರೆ ಕರ್ನಾಟಕಕ್ಕೆ ಕ್ಯಾನ್ಸರ್ ತರಹ ರೋಗ ತಗಲುತ್ತದೆ. ಆ ರೋಗವನ್ನು ಹೋಗಲಾಡಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಎಂದು ತಮ್ಮ ಮೂಲಕ ಹೇಳುತ್ತೇನೆ. ಕನ್ನಡದ ಬಗ್ಗೆ ಅಪಾರವಾದ ಗೌರವ, ನಿಷ್ಠೆ ಇಟ್ಟುಕೊಂಡು ಪ್ರಾಮಾಣಿಕವಾಗಿ ಸೇವೆ ಮಾಡಿರುವವರಿಗೆ ಅರ್ಥವಾಗುತ್ತದೆ. ಇಲ್ಲಿ ಇನ್ನು ಯಾರಿಗೂ ಅರ್ಥವಾಗುವುದಿಲ್ಲ. ಆ ಪರಿಸ್ಥಿತಿ ಇಲ್ಲಿ ಉದ್ಭವವಾಗಿದೆ. ಗಡಿಯಲ್ಲಿ ಏನಾಗಿದೆ ? ಮಂಗಳೂರಿನ ಪರಿಸ್ಥಿತಿ ಏನಾಗಿದೆ? ಬೆಳಗಾವಿ ಏನಾಗಿದೆ? ರಾಯಚೂರು ಏನಾಗಿದೆ? ಮಡಿಕೇರಿ ಏನಾಗಿದೆ? ಬಳ್ಳಾರಿ ಏನಾಗಿದೆ? ಎಲ್ಲಾ ನೋಡಿದಾಗ ಹೋರಗಿನಿಂದ ಬರತಕ್ಕ ಸಂಖ್ಯೆ ನೋಡಿದಾಗ ಸಂಪೂರ್ಣವಾಗಿ ಇನ್ನು ಹತ್ತು ವರ್ಷ ಹೋದರೆ ಈ ಜಿಲ್ಲೆಗಳು ನಮ್ಮವೋ ಬೇರೆಯವರದೋ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆ ದೃಷ್ಟಿಯಿಂದ ಈ ವಲಸೆಯನ್ನು ತಡೆಯುವುದಕ್ಕೆ ಒಂದು ಸ್ಪಷ್ಟವಾದ ಕಾನೂನನ್ನು ಮಾಡಬೇಕು. ಮಾಡಲಿಲ್ಲ ಅಂದರೆ ಕರ್ನಾಟಕ ನಿಜವಾಗಿಯೂ ಅತ್ಯಂತ ಕಣ್ಣೀರಿನ ಕಥೆಯಾಗುತ್ತದೆ. ನಾನು ಇನ್ನೂ ಸ್ವಲ್ಪ ಮುಂದೆ ಹೋಗಿ ಹೇಳುವುದಾದರೆ ಅಸ್ಸಾಂ

ಪರಿಸ್ಥಿತಿ ನಮ್ಮಲ್ಲೂ ಉಂಟಾಗಬಹುದು. ಎಷ್ಟು ಜನ ನಾವು ತುಳಿತಕ್ಕೆ ಸಿಗುತ್ತಿದ್ದೇವೆ? ಯಾವ ರೀತಿ ತುಳಿತಕ್ಕೆ ಸಿಗಬಹುದು? ದಿನವೂ ಒಂದು ಸಾರಿ, ಎರಡು ಸಾರಿ ತುಳಿಸಿಕೊಳ್ಳಬಹುದು. ಮೂರು ಸಾರಿ ತುಳಿಸಿಕೊಳ್ಳಬಹುದು. ಅಂಗಾಂಗ ಎಲ್ಲಾ ಚೂರಾಗುವ ಹಾಗೆ ತುಳಿಸಿಕೊಳ್ಳುವುದಕ್ಕೆ ಹೋದಾಗ ಮೇಲೇಳಬೇಕಾಗುತ್ತದೆ. ಆ ಪರಿಸ್ಥಿತಿ ಬಂದೀತು ಎಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಬಗ್ಗೆ ಒಂದು ಚಿಂತನೆಯಾಗಬೇಕು. ಬೆಂಗಳೂರು ಬಹಳ ಬೆಳೆಯುತ್ತಿದೆ. ಆನೇಕಲ್ ಸೇರಿತು. ಹೊಸಕೋಟೆ ಕನಕಪುರ ಸೇರುತ್ತಿದೆ. ನೆಲಮಂಗಲ ಸೇರುತ್ತಿದೆ. ಇದೆಲ್ಲಾ ಸೇರಿದರೆ ಇನ್ನು ಐದು ಹತ್ತು ವರ್ಷಗಳಲ್ಲಿ ಒಂದು ಕೋಟಿ ಮೇಲೆ ಬೆಂಗಳೂರಿನ ಬೆಳವಣಿಗೆಯಾಗುತ್ತದೆ. ಬೆಂಗಳೂರಿನ ಬೆಳವಣಿಗೆ ಒಂದು ಕೋಟಿಯಾದರೆ ಕುಡಿಯುವ ನೀರಿನ ವ್ಯವಸ್ಥೆ ಏನು ಮಾಡುತ್ತೀರಿ? ವಿದ್ಯುಚ್ಛಕ್ತಿ ವ್ಯವಸ್ಥೆ ಏನು ಮಾಡುತ್ತೀರಿ? ರಸ್ತೆಗಳ ವ್ಯವಸ್ಥೆ ಏನು ಮಾಡುತ್ತೀರಿ? ಪರಿಸರದ ವ್ಯವಸ್ಥೆ ಏನು ಮಾಡುತ್ತೀರಿ? ಎಲ್ಲಾ ನೋಡಿ ಒಂದು ಯೋಜನೆ ಪರಿಣಾಮಕಾರಿಯಾಗಿ ಆಗಬೇಕು. ಇವತ್ತು ನಿಮಗೆ ಬೆಂಗಳೂರು ಅಭಿವೃದ್ಧಿಪ್ರಾಧಿಕಾರದಲ್ಲಿ ನಿವೇಶನ ಕೊಡುವುದಕ್ಕೆ ಒಂದು ಅಂಗುಲ ನಿವೇಶನ ಇಲ್ಲ. ಅಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಹಣ ಕೊಟ್ಟು ಉಳಿದಿರತಕ್ಕ ಅರ್ಜಿಗಳ ಸಂಖ್ಯೆ ಎಷ್ಟು? ಕನಿಷ್ಠ ಒಂದೂವರೆ ಎರಡು ಲಕ್ಷ ಜನ ಇದ್ದಾರೆ. ಒಬ್ಬರಿಬ್ಬರಲ್ಲ, ಒಂದೂವರೆ-ಎರಡು ಲಕ್ಷ ಜನರಿಗೆ ಅವರ ಹಣವನ್ನೂ ಹಿಂದಿರುಗಿಸಿಲ್ಲ, ಬಡ್ಡಿಯನ್ನೂ ಕೊಟ್ಟಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಜನರಿಗೆ ಒಂದು ರೀತಿ ಮೋಸ, ಒಂದು ರೀತಿ ಅನ್ಯಾಯವನ್ನು ಮಾಡಿದೆ. ಇದನ್ನು ಯಾರಾದರೂ ಸಾರ್ವಜನಿಕವಾಗಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬೇಕು. ನಮ್ಮ ಹಣಕ್ಕೆ ಬಡ್ಡಿ ಇಲ್ಲ, ನಿವೇಶನ ಇಲ್ಲ. ಹಣವನ್ನು ಇಟ್ಟುಕೊಂಡಿದ್ದಾರೆ, ಪರಿಸ್ಥಿತಿ ಏನು ಎಂಬುದನ್ನು ಹೇಳಬೇಕು. ನಾವು ನಿವೇಶನ ಕೊಡುವುದಕ್ಕಾಗುವುದಿಲ್ಲ, ನಿಮ್ಮ ಹಣ ಹಿಂದಿರುಗಿಸುತ್ತೇವೆ ಎಂದು ಹೇಳಬೇಕು. ನೀವು ಅದನ್ನು ಹೇಳುತ್ತಿಲ್ಲ,ಹೊಸ ಬಡಾವಣೆಗಳು ಬರುತ್ತಿಲ್ಲ. ಏಕೆಂದರೆ ಜಾಗ ಇಲ್ಲ ಜಾಗ ಯಾರ ಪಾಲಾಯಿತ್ತು? ಖಾಸಗಿ ಗೃಹ ನಿರ್ಮಾಣ ಮಂಡಲಿಯವರ ಪಾಲಾಯಿತು. ಬಂದ ಸರ್ಕಾಗಳೆಲ್ಲವೂ 10 ಏಕರೆ 100ಎಕರೆ 50 ಏಕರೆ ಪ್ರದೇಶಗಳನ್ನು ಅವರಿಗೆ ಕೊಟ್ಟರು. ಅವರಿಗೆ ಇಚ್ಛೆಬಂದಾಹಾಗೆ ನಿವೇಶಗಳನ್ನು ಹಂಚಿದರು. ಇವತ್ತು ಅವರು ದೊಡ್ಡದೊಡ್ಡ ಪಾಳೇಗಾರರಾಗಿದ್ದಾರೆ. ಖಾಸಗಿ ಗೃಹನಿರ್ಮಾಣ ಸಂಘಗಳಿಗೆ ಕೊಟ್ಟಿರುವ ನಿವೇಶನಗಳು ಎಷ್ಟು ಎನ್ನುವುದನ್ನು ಹೊರಗೆಡವಬೇಕು. ತಮ್ಮ ಮೂಲಕ ಹೇಳುತ್ತೇನೆ, ಜೆ.ವಿ.ಕೆ ರಾವ್ ಅವರು ಒಳ್ಳೆಯ ಪರಿಣಾಮಕಾರಿಯಾದ ವರದಿ ಕೊಟ್ಟಿದ್ದಾರೆ. ಆ ವರದಿ ಹೊರಗೆ ಬಂದಿದೆ. ಆ ವರದಿ ಪ್ರಕಾರ ಕ್ರಮ ಕೈಗೊಳ್ಳಬೇಕು ಅದನ್ನು ಅನುಷ್ಠಾನಕ್ಕೆ ತರಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಬೆಲೆಯನ್ನು ಏರಿಸಿದ್ದಾರೆ. ಇದನ್ನು ಯಾರೂ ಹೇಳುವವರು ಇಲ್ಲ. ಹಿಂದೆ ಅನಂತಕೃಷ್ಣ, ಟಿಆರ್ ಶಾಮಣ್ಣ, ರಾಂದೇವ್ ಅವರುಗಳು ಅದಕ್ಕೋಸ್ಕರ ಪೌರಸಮಿತಿ ಮಾಡಿ ಕುಡಿಯುವ ನೀರಿನ ಬೆಲೆಯನ್ನು ಏರಿಸಬೇಡಿಯೆಂದು ಟಿ. ಸುಬ್ರಹ್ಮಣ್ಯಂ ಅವರ ಅಧ್ಯಕ್ಷತೆಯಲ್ಲಿ ದೊಡ್ಡ ಹೋರಾಟ ನಡೆಯಿತು. ಈಗ ಯಾರೂ ಕೇಳುವವರು ಇಲ್ಲ. ಅವರ ಇಚ್ಛೆಬಂದಹಾಗೆ ಕುಡಿಯುವ ನೀರಿನ ಬೆಲೆ ಏರಿಸಿದ್ದಾರೆ. ವಿದ್ಯುತ್ ಯಾವಾಗ ಬರಬೇಕು, ಯಾವಾಗ ಹೋಗಬೇಕು ಯಾವಾಗ ಬೆಳಕು ಆಗಬೇಕು ಯಾವಾಗ ಕತ್ತಲಾಗಬೇಕು ಎಲ್ಲಾ ಯದ್ವಾತದ್ವ ನಡೆಯುತ್ತಿದೆ,

ಹೇಳುವವರು ಕೇಳುವವರು ಇಲ್ಲ. ಜಲಮಂಡಳಿಯವರನ್ನು ಕೇಳುವವರು ಇಲ್ಲ. ಬೆಂಗಳೂರು ನಗರದ ರಸ್ತೆಗಳಲ್ಲಿ 7 ಲಕ್ಷ ವಾಹನಗಳು ಓಡಾಡುತ್ತದೆ. ಅವುಗಳಿಂದ ಬರತಕ್ಕ ಹೊಗೆ ಕುಡಿದು ಒಂದು ರೀತಿಯ ಕೆಟ್ಟ ರೋಗ ಬೆಂಗಳೂರು ನಗರದ ಜನರಿಗೆ ಬರುತ್ತಿದೆ. ಒಂದು ರೀತಿಯ ದಮ್ಮು ಕೆಟ್ಟ ರೋಗ ಬೆಂಗಳೂರು ನಗರದಲ್ಲಿ ಜಾಸ್ತಿ ಬರುತ್ತಾ ಇದೆ. ಅಸ್ತಮಾ ರೋಗ ಜಾಸ್ತಿ ಜನಗಳಿಗೆ ಬರುತ್ತಾ ಇದೆ. ಅದರ ಬಗ್ಗೆ ಪರಿಣಾಮಕಾರಿಯಾಗಿ ತಜ್ಞರು ಯಾರೂ ನೋಡುತ್ತಿಲ್ಲ. ಅದನ್ನು ಸರ್ಕಾರ ಗಮನಿಸಿಲ್ಲ. ಹೊಸ ಹೊಸ ಬಡಾವಣೆಗಳು ಒಂದೂ ಬರುತ್ತಿಲ್ಲ. ರಸ್ತೆಗಳ ವ್ಯವಸ್ಥೆ ಸರಿಯಿಲ್ಲ. ಬೆಂಗಳೂರು ನಗರವನ್ನು ಇಡೀದೇಶದ ಎಲ್ಲಾ ಮುಖಂಡರು ದೊಡ್ಡವರು ಶ್ರೀಮಂತರು ಆಯ್ಕೆ ಮಾಡಿಕೊಂಡಿದ್ದಾರೆ. ರಾಜಮಹಲ್ ವಿಲಾಸ್‌ನಲ್ಲಿ 2-3-4ನೇ ಹಂತದಲ್ಲಿ ಯಾರಿಗೆ ನಿವೇಶನಗಳನ್ನು ಕೊಟ್ಟಿದ್ದೀರಿ? ಇಲ್ಲಿಯವರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ? ಎಲ್ಲಾ ಹೊರಗಡೆಯವರು ಹಳೆಯ ರಾಜ್ಯಪಾಲರು ಹಳೆಯ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು, ದೊಡ್ಡ ದೊಡ್ಡ ಮಾಜಿ ಮಂತ್ರಿಗಳು ಎಲ್ಲರೂ ಆರಾಮವಾಗಿರತಕ್ಕ ಒಂದು ಅತಿಥಿಗೃಹವಾಗಿದೆ ಬೆಂಗಳೂರು. ಇಲ್ಲಿ ಅರಾಮವಾಗಿರತಕ್ಕ ವ್ಯವಸ್ಥೆ ಇದೆ. ಇಲ್ಲಿ ಯಾರೂ ಬೇಕಾದರೂ ಇರಬಹುದು. 2 ಲಕ್ಷ ಜನ ನಿವೇಶನಕ್ಕೆ ಅರ್ಜಿ ಹಾಕಿರುವವರ ಪರಿಸ್ಥಿತಿಯೇನು? ಅದರ ಬಗ್ಗೆ ಪರಿಣಾಮಕಾರಿಯಾದ ಕ್ರಮವೇನು? ಬೆಂಗಳೂರುನಗರದ ಬೆಳವಣಿಗೆ ಬಗ್ಗೆ ಕಾರ್ಪೊರೇಷನ್‌ದವರು ಸಹ ತೀವ್ರವಾಗಿ ಈ ಬಗ್ಗೆ ಗಮನಹರಿಸಬೇಕು. ಚಿಕ್ಕಪೇಟೆ ಪ್ರದೇಶದಲ್ಲಿ ತಾವು ನೋಡಬೇಕು. ಅಲ್ಲಿ ನಡೆಯುವುದಕ್ಕೂ ನಿಂತುಕೊಳ್ಳುವುದಕ್ಕೂ ಒಂದು ಸಣ್ಣ ಜಾಗವಿಲ್ಲ. ಅಷ್ಟು ವ್ಯವಸ್ಥೆ ಕುಲಗೆಟ್ಟಿದೆ. ಇತ್ತೀಚೆಗೆ ಸಂಚಾರ ಬದಲಾವಣೆ ನಡೆದಿದೆ. ಸ್ವಲ್ಪ ನನಗೇನೋ ಚೆನ್ನಾಗಿ ಕಾಣುತ್ತಿದೆ. ಏಕಮುಖ ಸಂಚಾರ ರಸ್ತೆಗಳನ್ನು ಮಾಡಿದ್ದಾರೆ. ಅದು ಸರಿಯಾಗಿದೆ ಎಂದು ಅನಿಸುತ್ತದೆ. ಕೆಲವು ಕಡೆ ನೋಡಿದಾಗ ಅದನ್ನು ತಳ್ಳಿ ಹಾಕದೆ ಇದ್ದರೂ ಸರಿಯಾದ ವ್ಯವಸ್ಥೆಯೆಂದು ಅನಿಸುತ್ತದೆ. ಈ ಪರಿಸ್ಥಿತಿ ಉದ್ಭವವಾಗಿರುವುದರಿಂದ ನನಗನಿಸುತ್ತದೆ, ಬೆಂಗಳೂರು ನಗರ ಬೆಳವಣಿಗೆ ಬಗ್ಗೆ ಬಹಳ ಕಾಳಜಿಯನ್ನು ವಹಿಸಬೇಕು. ಬೆಂಗಳೂರು ನಗರದ ಬೆಳವಣಿಗೆ ಬಗ್ಗೆ ಅನೇಕ ಹಿರಿಯರು ಕಾಳಜಿಯನ್ನು ವಹಿಸಿದ್ದರು. ನಮ್ಮ ಕೆಂಗಲ್ ಹನುಮಂತಯ್ಯನವರು, ಸರ್ ಎಂ.ವಿಶ್ವೇಶ್ವರಯ್ಯನವರು ಇನ್ನು ಅನೇಕರು ದಿವಾನರುಗಳಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಬೆಂಗಳೂರು ನಗರ ಹೇಗೆ ಬೆಳೆಯಬೇಕೆಂದು ಕುದುರೆಯ ಮೇಲೆ ಹೋಗಿ ನೋಡುತ್ತಿದ್ದರು. ಅವರ ಕಲ್ಪನೆ, ಕನಸು ಏನಿತ್ತು ಅದೆಲ್ಲ ಕಣ್ಣೀರ ಕಡೆಯಾಗಿದೆ. ಇಡೀ ಪ್ರಪಂಚದಲ್ಲಿ ಬೆಂಗಳೂರುನಗರ ಒಂದು ಸುಂದರವಾದ ನಗರ, ಅದನ್ನು ಉಳಿಸತಕ್ಕವ್ಯವಸ್ಥೆ ಖಂಡಿತ ಆಗಿಲ್ಲ, ಆ ವ್ಯವಸ್ಥೆಯ ಬಗ್ಗೆ ಸರ್ಕಾರ ಅನೇಕ ಯೋಜನೆಗಳನ್ನು ಮಾಡುತ್ತಾ ಇದೆ. ನಮಗೆ ತಾಪತ್ರಯ ಏನಾಗಿದೆಯೆಂದರೆ, ಕನ್ನಡ ಭವನಕ್ಕೆ ಒಂದು ಜಾಗಬೇಕೆಂದು ಅಧಿಕಾರಿಗಳ ಜೊತೆಯಲ್ಲಿ ಊರೆಲ್ಲ ಸುತ್ತಲಾಯಿತು. ಎಲ್ಲೂ ಒಂದು ಅಂಗುಲ ಜಾಗ ಸಿಗಲಿಲ್ಲ. ಕನ್ನಡ ಭವನವನ್ನು ಎಲ್ಲಿ ಕಟ್ಟಬೇಕೆಂದು ಜಾಗ ನೋಡಿದಾಗ ಜಾಗ ಸಿಗಲಿಲ್ಲ. ಅಂದಮೇಲೆ ಮುಂದಿನ ಪರಿಸ್ಥಿತಿಯೇನು? ಇದನ್ನು ಸರ್ಕಾರ ತೀವ್ರವಾಗಿ ಚಿಂತನೆ ಮಾಡಬೇಕು. ಖಾಸಗಿ ಗೃಹನಿರ್ಮಾಣ ಸಂಘಗಳು ನಡೆಸತಕ್ಕ ದಂಧೆ, ಭ್ರಷ್ಟಾಚಾರ ಎಷ್ಟು? ಖಾಸಗಿ ಗೃಹನಿರ್ಮಾಣ ಸಂಘಗಳು ಇದ್ದರೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯನ್ನು ರದ್ದು ಮಾಡುವುದು ಒಳ್ಳೆಯದು. ಅದು ಏಕೆ ಬೇಕು? ಅಲ್ಲಿ ಒಬ್ಬರು ಅಧ್ಯಕ್ಷರು, ಕಾರ್ಯದರ್ಶಿಗಳು, ಸಿಬ್ಬಂದಿ

ಈ ವ್ಯವಸ್ಥೆ ಏನಿದೆ ಅದನ್ನೆಲ್ಲ ರದ್ದುಮಾಡಿ ಸಂಪೂರ್ಣವಾಗಿ ನೀವೇ ನಿವೇಶನ ಹಂಚಿಕೊಳ್ಳಿಯೆಂದು ಹೇಳಬೇಕಾಗಿತ್ತು. ಬಿಡಿಎ ಏತಕ್ಕೆ ಬೇಕು? ಈ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ನಾಲ್ಕು ನಾಲ್ಕು ಜನರಿಗೆ ಒಂದು ನಿವೇಶನ ಕೊಟ್ಟಿರುವುದು ಉಂಟು. ಐದು ಐದು ಜನಗಳಿಗೆ ಕೊಟ್ಟಿರುವುದು ಉಂಟು. ನಿವೇಶನಗಳಿಗಾಗಿ ಹತ್ತಾರು ವರ್ಷಗಳಿಂದ ಅರ್ಜಿ ಹಾಕಿಕೊಂಡು ಕಾಯ್ದು ಕುಳಿತುಕೊಂಡಿರುವುದು ಉಂಟು. ಇಂತಹ ವ್ಯವಸ್ಥೆಯಿಂದೆ ಇದನ್ನು ತಪ್ಪಿಸಬೇಕಾದರೆ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಳ್ಳಬೇಕು. ಹಿಂದೆ ಇದೇ ಸಭೆಯಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮುಂದಿನ ತಿಂಗಳಿನಲ್ಲಿ 80 ಸಾವಿರ ನಿವೇಶನಗಳನ್ನು ಹಂಚತಕ್ಕ ವ್ಯವಸ್ಥೆ ಮಾಡುತ್ತೇವೆಂದರು ಇದುವರೆಗೂ ಅದು ಕಾಣಲಿಲ್ಲ. ಶ್ರೀಮಾನ್ ಪೆರಿಕಲ್ ಮಲ್ಲಪ್ಪನವರು ಬೆಂಗಳೂರು ನಗರಕ್ಕೇ ಒಬ್ಬರು ಮಂತ್ರಿ. ಕಾರ್ಪೋರೇಷನ್‌ಗೆ ಒಬ್ಬರು ಮಂತ್ರಿ. ಬೆಂಗಳೂರು ನಗರದಲ್ಲಿ ಹಳೆಯ ಕಾಲದ ಚರಂಡಿಗಳು, ಹಳೆಯ ಕಾಲದ ರಸ್ತೆಗಳು ಇವೆ. ಇಲ್ಲಿ ಭಾರಿ ಮಳೆ ಬಂದರೆ ಇಲ್ಲೇನು ನದಿಗಳಿಲ್ಲ, ಬೀದಿ ಬೀದಿಗಳೇ ಕೊಚ್ಚಿಕೊಂಡು ಹೋಗುತ್ತದೆ. ಇಲ್ಲಿ ಪರಿಣಾಮಕಾರಿಯಾದ ಬೆಳವಣಿಗೆಯಾಗಿಲ್ಲ. ಗಮನ ಕೊಡದಿರುವುದಕ್ಕೆ ಕಾರಣವೇನು? ನವದೆಹಲಿಗೆ ತಿಂಗಳಿಗೆ ನಾಲ್ಕು ಸಾರಿ ಹೋಗುತ್ತೀರಿ. ಅಲ್ಲಿನ ರಸ್ತೆ ಎಲ್ಲಾ ನೋಡುತ್ತೀರಿ, ನಮ್ಮ ಊರನ್ನು ಆ ರೀತಿ ಬೆಳಸಬೇಕೆಂದು ಚಿಂತನೆ ಮಾಡಿದ್ದೀರಾ? ನಿಮ್ಮ ಮನೆ ಇರುವುದೇ ಇಲ್ಲಿ, ಸರ್ಕಾರ ಇಲ್ಲಿದೆ, ನಮ್ಮ ರಾಜಧಾನಿ ಇಲ್ಲಿದೆ ಇದನ್ನು ಬೆಳಸತಕ್ಕ ವ್ಯವಸ್ಥೆ ನಿಮಗೆ ಏಕೆ ಇಲ್ಲ? ಪರಿಸ್ಥಿತಿಯೇನು? ಇದು ಬಹಳ ಅತ್ಯಂತ ನೋವಿನಿಂದ ಹೇಳತಕ್ಕ ಮಾತು. ಬೆಂಗಳೂರಿನಲ್ಲಿ ಭೂಗತವಾಗಿ ಏನೇನು ನಡೆಯುತ್ತಿದೆ, ಯಾರ್‍ಯಾರು ಇದ್ದಾರೆ, ಏನು ವ್ಯವಸ್ಥೆ ಇದೆ ಎನ್ನುವುದು ಗೊತ್ತಿಲ್ಲ. ಆದ್ದರಿಂದ ನನಗನಿಸುತ್ತದೆ, ನಾವು ಬೆಂಗಳೂರು ನಗರವನ್ನು ಪರಿಣಾಮಕಾರಿ ಯಾವ ರೀತಿಯಲ್ಲಿ ಉಳಿಸತಕ್ಕ ಯೋಜನೆಯನ್ನು ಹಾಕಿಲ್ಲವೆಂದರೆ ಕಷ್ಟವಾಗುತ್ತದೆ. ಮೂಲೆ ನಿವೇಶನಗಳನ್ನು ಏಕೆ ಹರಾಜು ಹಾಕುತ್ತೀರಿ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದುವರೆಗೆ ಸಾವಿರಾರು ಮೂಲೆ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ. ಅವುಗಳು ನಿಮಗೆ ಬೇಕಾಗಿರಲಿಲ್ಲವೆ? ಮೂಲೆ ನಿವೇಶನಗಳನ್ನು ಇಟ್ಟುಕೊಂಡಿದ್ದರೆ ಸರ್ಕಾರದ ಇಲಾಖೆಗಳಿಗೆ ಮೂಲೆ ನಿವೇಶನಗಳಿಂದ ಅನುಕೂಲವಾಗುತ್ತಿತ್ತು ಅವುಗಳನ್ನು ಕೊಂಡುಕೊಂಡಿರತಕ್ಕವರು ಯಾರು ಎಂದರೆ ಗುಜರಾತಿಗಳು, ಮಾರ್ವಾಡಿಗಳು ಮತ್ತು ಸಿಂಧಿಗಳು. ತಾವು ಒಮ್ಮೆ ಬಂದು ನೋಡಬೇಕು. ನಗರದ ಎಲ್ಲಾ ಕಡೆ ಗಗನಚುಂಬಿ ಕಟ್ಟಡಗಳು ಏಳುತ್ತಿವೆ. ಮಹಾನುಭಾವ ಕೆಂಪೇಗೌಡರ ಕಲ್ಪನೆಗೂ ಮೀರಿ ಕೆಂಪೇಗೌಡರ ಹೆಸರಿಗೆ ಕಳಂಕ ತರುವ ರೀತಿಯಲ್ಲಿ ನಾವು ಹೊರಟಿದ್ದೇವೆ. ಕೆಂಪೇಗೌಡರ ಬಗ್ಗೆ ತಮಗೆ ಈಗಲೂ ಹೇಳುತ್ತೇನೆ. ಅವರು ಎಷ್ಟು ಉದಾತ್ತಾಮನಸ್ಸಿದ್ದವರು ಅಂದರೆ, ಶಿವಗಂಗೆ ಬೆಟ್ಟ ಅದು ಶಿಥಿಲವಾದರೆ ಯಾರೂ ಹಣ ಕಟ್ಟಲಿಲ್ಲವೆಂದರೆ ಅಲ್ಲಿ ಖಜಾನೆಯಿದೆ ಎಂದು ಶಾಸನ ಬರೆದಿದ್ದಾರೆ. ಇಲ್ಲಿ ಅಂತಹ ಭಾವನೆಗಳು ಇಲ್ಲ. ಅದರ ಬಗ್ಗೆ ಚಿಂತನೆ ಮಾಡತಕ್ಕವರು ಇಲ್ಲ. ನಾನು ಸಾರಿ ಸಾರಿ ಸ್ಮರಣೆ ಮಾಡುತ್ತೇನೆ ಕೆಂಗಲ್ ಹನುಮಂತಯ್ಯನವರನ್ನು...

ಡಾ ಃ ವೈ.ನಾಗಪ್ಪ ಃ ಕೆಂಪೇಗೌಡರ ಭಾವನೆಯಿಂದಲೇ ಸರ್ಕಾರ ಗುಜರಾತಿಗಳು, ಮಾರ್ವಾಡಿಗಳು ಮತ್ತು ಸಿಂಧಿಗಳಿಗೆ ಮೂಲೇನಿವೇಶನಗಳನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ನಾವೆಲ್ಲರೂ ಭಾರತೀಯರೆಂದು ತಿಳಿದುಕೊಳ್ಳಬೇಕು. ಆಗಬಹುದು ನೀವು ನಾವೆಲ್ಲ ಭಾರತೀಯರೇ. ನಾನೇನು ನೀವು ಪಾಕಿಸ್ತಾನದವರು ಎಂದು ಹೇಳಲಿಲ್ಲ. ನೀವು ಬೇರೆ ದೇಶದವರು ಎಂದು ನಾನು ಹೇಳಲಿಲ್ಲ. ನೀವು ಭಾರತೀಯರು ಅದರಲ್ಲೂ ನಾಗಪ್ಪನವರು ಭಾರತೀಯರು ಅವರೇನು ಪರದೇಶದವರು ಉಗಾಂದದವರು ಎಂದು ನಾನು ಹೇಳಲಿಲ್ಲ.

ಛೇರ್ಮನ್ : ಕೆಂಪೇಗೌಡರು ಬೆಂಗಳೂರು ನಗರದಲ್ಲಿ ಮೂಲೆ ನಿವೇಶನಗಳನ್ನು ಕನ್ನಡಿಗರಿಗೆ ಕೊಡಬೇಡಿಯೆಂದು ಹೇಳಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ನಾನು ನಾಗಪ್ಪನವರನ್ನು ಇದಿ ಅಮೀನ್ ದೇಶವರು ಎಂದು ಹೇಳಲಿಲ್ಲ ಅವರು ಭಾರತೀಯರು.

ಛೇರ್ಮನ್ : ವಿಶ್ವಮಾನವರು ಎಂದು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಕವಿ ಕುವೆಂಪುರವರು ಒಂದು ಮಾತು ಹೇಳಿದ್ದಾರೆ. ಭಾರತ ಜನನಿಯ ತನುಜಾತೆ ಜಯಯೇ ಕರ್ನಾಟಕ ಮಾತೆ ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಏನು ಭಾರತವನ್ನು ಬಿಟ್ಟು ಬೇರೆ ಕಡೆ ಹೋಗಬೇಕೆಂದು ಮಾಡಿದ್ದೇವೆಯೇ? ಇಲ್ಲ ಆದ್ದರಿಂದ ಕರ್ನಾಟಕವನ್ನು ಎಷ್ಟರಮಟ್ಟಿಗೆ ಬೆಳಸಬೇಕು, ಅದರಲ್ಲಿನಾವು ನೀವು ಎಲ್ಲ ವಿಫಲರಾಗಿದ್ದೇವೆ.ಕರ್ನಾಟಕ ಹೃದಯದಲ್ಲಿರತಕ್ಕ ರಾಜಧಾನಿಯನ್ನೂ ಬೆಳೆಸುವುದರಲ್ಲಿ ನಾವು ಎಷ್ಟು ವಿಫಲರಾಗಿದ್ದೇವೆಂಬುದನ್ನು ಒಪ್ಪಬೇಕು.

ಈ ಊರಿನಲ್ಲಿ ಎಷ್ಟು ರೀತಿಯಲ್ಲಿ ... ವರೂ ಪರಿಣಾಮಕಾರಿಯಾಗಿ, ಪ್ರಾಮಾಣಿಕಾವಾಗಿ ಇರತಕ್ಕಂಥ ಒಂದು ಸಮಿತಿಯನ್ನು ವ್ಯವಸ್ಥೆ ಮಾಡಿ ಆ ಸಮಿತಿಯವರು ಬೆಂಗಳೂರಿನ ಬೆಳವಣಿಗೆ ಬಗ್ಗೆ, ಬೆಂಗಳೂರಿನ ಅಭಿವೃದ್ಧಿ ಬಗ್ಗೆ, ಬೆಂಗಳೂರಿನ ಒಂದು ಹೊಸ ಯೋಜನೆಯನ್ನು ತಂದು ಈ ಒಂದು ಕಳಂಕವನ್ನು ತೆಗೆಯತಕ್ಕಂಥ ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ನಾವು ಮುಖ್ಯಮಂತ್ರಿಗಳಿಗೆ ಮಾಡಿ ಎಂದು ಹೇಳುತ್ತೇವೆ, ಅವರು ಮಾಡುತ್ತೇವೆ ಎಂದು ಹೇಳಿಬಿಡುತ್ತಾರೆ. ಅವರದ್ದೇನೂ ನಮಗೆ ತಕರಾರು ಇಲ್ಲ. ಭರವಸೆಗಳನ್ನು ಕೊಡುವುದರಲ್ಲಿ ನಮ್ಮ ಮುಖ್ಯಮಂತ್ರಿಗಳಂಥವರು ಈ ಜಗತ್ತಿನಲ್ಲಿ ಬೇರೆ ಯಾರೂ ಸಿಗಲಿಕ್ಕಿಲ್ಲ. ಹೋದ ಕಡೆಗಳಲ್ಲಿ ಭರವಸೆ,ಯಾವ ಸಮಾರಂಭಕ್ಕೆ ಹೋಗಲಿ, ಭರವಸೆ, ಯಾವ ಸಮ್ಮೇಳನಕ್ಕೆ ಹೋಗಲಿ ಭರವಸೆ. ಇಲ್ಲಿ ನಿಂತರೂ ಭರವಸೆ. ಹಿಂದಿನ ಮುಖ್ಯಮಂತ್ರಿಗಳು ನಾನು ನಿಜ ಹೇಳಬೇಕು ಎಂದರೆ ನಾನು ನಿಜ ಹೇಳಬೇಕು ಎಂದರೆ ಎಂದು ಹೇಳುತ್ತಿದ್ದರು. ಇವರು ನಾನು ಸುಳ್ಳು ಹೇಳಬೇಕು ಅಂದರೆ ಅನ್ನಬೇಕಾಗುತ್ತದೆ. ಹೀಗೆ ಆಗಿಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗಬೇಕು? ಭರವಸೆ ಕೊಡಬೇಕಾದರೆ, ಏನು ಕೇಳಿದರೂ ಭರವಸೆ ಕೊಟ್ಟುಬಿಡುತ್ತಾರೆ. ಅವರು ಕೆಲಸ ಮಾಡುತ್ತಾರೋ, ಬಿಡುತ್ತಾರೋ ಆ ಪ್ರಶ್ನೆ ಬೇರೆ. ಒಂದು ಗುಣವನ್ನು ಮೆಚ್ಚಬೇಕು. ಪ್ರೀತಿ ವಿಶ್ವಾಸ ಸ್ನೇಹದಲ್ಲಿ ಮಾತ್ರ ಯಾರೇ ಸಿಗಲಿ, ಎಲ್ಲೇ ಸಿಗಲಿ, ಮಾತನಾಡತಕ್ಕಂಥ ಸ್ನೇಹಕ್ಕೆ ಈಗಿನ ಮುಖ್ಯಮಂತ್ರಿಗಳಿಗೆ ನಾನು

ಗೌರವವನ್ನು ಕೊಡುತ್ತೇನೆ. ಅವರಿಗೆ ಏನು ಹೇಳುತ್ತೇನೆ ಎಂದರೆ, ಭರವಸೆ ಕೊಡಬೇಡಿ, ಭರವಸೆ ಕೊಡುವುದಕ್ಕೆ ಮುಂಚೆ ಯೋಚನೆ ಮಾಡಿ ಎಂದು. ಅವರು ಕೊಟ್ಟಿರುವ ಭರವಸೆಗಳು ಏನಿವೆ ಅವುಗಳನ್ನು ತೀರಿಸಬೇಕಾದರೆ ಸ್ವಲ್ಪ ಹೆಚ್ಚುಕಡಿಮೆ ಇನ್ನು ಮೂರು ಸಾರಿ ಮುಖ್ಯಮಂತ್ರಿಯಾಗಬೇಕು. ಹೋದ ಕಡೆಯಲ್ಲೆಲ್ಲಾ ಭರವಸೆ ಕೊಡುತ್ತಾರೆ. ಐದು ಲಕ್ಷ-ಹೂ ತಗೊಳ್ಳಿ...

ಶ್ರೀ ಡಿ.ಬಿ. ಚಂದ್ರೇಗೌಡ :- ಮೂರು ಟರ್ಮು, ಅವಧಿ ಅನ್ನಬೇಡಿ. ಮೂರು ಅನ್ನಬೇಡಿ, ಒಂದೇ ವರ್ಷದಲ್ಲಿ ಮೂವರು ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಸ್ವಲ್ಪ ಹೆಚ್ಚುಕಡಿಮೆ ಐದುವರ್ಷಗಳಿಗೆ ಒಬ್ಬರಂತೆ ಕನಿಷ್ಟ ಮೂರು ಅವಧಿ ಬೇಕು. ಈ ಭರವಸೆಗಳು ಈಡೇರಬೇಕಾದರೆ ಅಷ್ಟು ಅವಧಿಬೇಕು ಈ ಭರವಸೆಗಳನ್ನೆಲ್ಲಾ ಸರ್ಕಾರ ಮುದ್ರಣ ಮಾಡಿಸಬೇಕು. ಮುದ್ರಣ ಮಾಡಿಸಿ ಯಾವುದಾದರೂ ವಿಶ್ವವಿದ್ಯಾನಿಲಯಕ್ಕೆ ಈ ಡಾಕ್ಟರೇಟ್ ಪಡೆಯುವವರಿಗೆ ಕಳಿಸಿಕೊಡಬೇಕು. ಏಕೆಂದರೆ ಇದು ಭರವಸೆಗಳ ಯುಗ. ಅವರು ಯಾವುದಕ್ಕೂ ಇಲ್ಲವೆನ್ನುವುದಿಲ್ಲ.

ಶ್ರೀ ಆರ್. ಎನ್ ನಾಯಕ್ :- ಹಾಗಾದರೆ ಆ ಪುಸ್ತಕದಲ್ಲಿ ನಿಮಗೆ ಕೊಟ್ಟಿರುವ ಭರವಸೆಗಳು ಎಷ್ಟು ಸಲ ಬರಬಹುದು? ನಿಮಗೆ ಭರವಸೆ ಕೊಟ್ಟಿದ್ದಾರೆ ಎಂದು ಹೇಳಿದಿರಿ ನಿಮಗೆ ಕೊಟ್ಟಿರುವ ಭರವಸೆಗಳು ಎಷ್ಟು ಪೇಜ್ ಆಗಬಹುದು?

ಶ್ರೀ ವಾಟಾಳ್ ನಾಗರಾಜ್ :- ನೀವು ಕನ್ನಡ, ಸಂಸ್ಕೃತಿ ಇಲಾಖೆಯ ಸಚಿವರು. ಸ್ವಲ್ಪ ಗುರ್ತು ಹಾಕಿ, ನಮ್ಮ ಭರವಸೆಯನ್ನೂ ಇಡಿ. ನಾವು ನಿಮ್ಮ ಭರವಸೆಯನ್ನೂ ಇಡೋಣ. ಯಾರದ್ದು ಜಾಸ್ತಿಯಾಗಿದೆ ಎಂದು ದೇಶದ ಜನ ನೋಡಿಕೊಳ್ಳಲಿ. ಈಗ ತಮಗೂ ಗೊತ್ತಿದೆ, ನಿಮಗೂ ನಿಮ್ಮ ಮುಖ್ಯಮಂತ್ರಿಗಳು ಭರವಸೆಗಳನ್ನು ಕೊಟ್ಟಿಲ್ಲವೆ? ಅದರಲೆನೂ ಅನುಮಾನ ಇಲ್ಲ. ಏನು ಜಯಣ್ಣ, ಏನು ಹೇಳುತ್ತೀರಿ? ಅನುಮಾನ ಇದೆಯೋ? ಭರವಸೆ ಏನೋ ಕೊಟ್ಟಿದ್ದಾರೆ. ಅದೇನೂ ಇಲ್ಲ ಅಧ್ಯಕ್ಷರೇ,.........

ಶ್ರೀ ಸಿ.ಭೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಹೋದ ಅಧಿವೇಶನದಲ್ಲಿ ನಮ್ಮ ಮುಖ್ಯಮಂತ್ರಿಗಳು ಭರವಸೆಗಳನ್ನು ಕೊಟ್ಟಿದ್ದರ ಬಗ್ಗೆ ನಾನು ಮತ್ತು ಶ್ರೀ ವೈ.ಕೆ.ರಾಮಯ್ಯನವರು ಪುಸ್ತಕವನ್ನು ಹೊರತರುತ್ತೇವೆ ಎಂದು ಹೇಳಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರು ಹೇಳಿರತಕ್ಕಂಥ ಸುಳ್ಳುಗಳು. ಎನ್ನತಕ್ಕಂಥ ಪುಸ್ತಕವನ್ನು ಹೊರತರುತ್ತೇವೆ ಎನ್ನುವ ಮಾತನ್ನು ನಾವು ಹೇಳಿದ್ದೆವು. ಅದನ್ನು ಅಂದರೆ ಪುಸ್ತಕವನ್ನು ಎಡಿಟ್ ಮಾಡಬೇಕು ಎಂದು ಪ್ರಾರಂಭ ಮಾಡಿದೆವು, ಅದನ್ನು ಮಾಡುತ್ತಾ ಮಾಡುತ್ತಾ, ಇನ್‌ಫ಼ರ್ಮೇಶನ್ಸ್ ಎಲ್ಲಾ ಕಲೆಕ್ಟ್ ಮಾಡುತ್ತಾ ಹೋದರೆ, ಹಿಮಾಲಯ ಪರ್ವತವನ್ನು ಮೀರತಕ್ಕಂಥ ಪುಸ್ತಕ ಆಗುವಂಥ ಪರಿಸ್ಥಿತಿಗೆ ಹೊರಟುಬಿಟ್ಟಿದೆ. ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಕ್ಷಮೆ ಬೇಡುತ್ತೇನೆ. ಆ ಕೆಲಸ ನಮ್ಮ ಕೈಯಲ್ಲಿ ಆಗಲಿಲ್ಲ. ನಮ್ಮ ಕೈಯಲ್ಲಿ

ಅದು ಆಗದೇಇರುವ ಕೆಲಸ. ನಾವು ಏನು ಹೇಳಿದ್ದೆವು, ಅದು ನಮ್ಮ ಕೈಯಿಂದ ಆಗಲಿಲಲ್ಲ ಎನ್ನುವಂಥ ಕ್ಷಮೆಯನ್ನು ಇವತ್ತಿನದಿವಸ ನಾನು ಕೇಳಬೇಕಾಗಿದೆ.ಏಕೆಂದರೆ ಇಲ್ಲಿ ಪುಸ್ತಕ ಬರೆಯುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿಬಿಟ್ಟಿದ್ದೆ. ನಮ್ಮ ಕೈಯಲ್ಲಿ ಆಗದೇ ಇರುವ ಕೆಲಸವನ್ನು ಮಾಡುತ್ತೇವೆ ಎಂದು ಕೈಹಾಕುವುದಕ್ಕೆ ಹೋಗಿದ್ದೆವಲ್ಲ, ಆ ಕೆಲಸವನ್ನು ಕೈಬಿಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ಆರ್.ಎನ್. ನಾಯಕ್ :- ಅಷ್ಟೆಲ್ಲ ಭರವಸೆಗಳನ್ನು ಜಾಸ್ತಿ ಕೊಟ್ಟುಬಿಟ್ಟಿದ್ದಾರೆ, ಅದು ಹಿಮಾಲಯದಷ್ಟು ಎತ್ತರಕ್ಕೆ ಆಗಿದೆಯೆಂದು ನೀವು ಹೇಳಿದಿರಿ. ಹಾಗೆ ಗೊತ್ತಿದ್ದರೂ ಮತ್ತೆ ನೀವು ಏಕೆ ಭರವಸೆಯನ್ನು ಕೇಳುವುದಕ್ಕೆ ಹೋಗುತ್ತೀರಿ? ಹಾಗೆ ನೀವೆ ಭರವಸೆಗಳನ್ನು ಕೇಳುವುದು. ಇದಕ್ಕೆ ಭರವಸೆ ಕೊಡಿ ಎಂದು ಕೇಳುವವರೂ ನೀವೇ ಭರವಸೆ ಕೊಡಿ ಎಂದು ಏಕೆ ಕೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ನಾವು ಕೇಳಿದ ತಕ್ಷಣ ನೀವು ಕೊಟ್ಟುಬಿಡುವುದೇ ಹೀಗೆ ಆಗಿಬಿಟ್ಟರೆ ಹೇಗೆ? ನಾವು ಕೇಳುತ್ತಾ ಇರುತ್ತೇವೆ. ನೀವು ಕೊಡ್ತಾ ಇರುತ್ತೀರಾ? ಪಾಪ, ಜಯಣ್ಣನರು ನನಗೆ ಸ್ನೇಹಿತರು. ನಿಮ್ಮ ಅಳಿಯನನ್ನು ಕೊಂದವರು ಯಾರು ಎಂದು ಪೋಲೀಸಿನವರು ಹೇಳಿದರಾ ಹಿಡಿದರಾ ಸ್ವಾಮಿ? ನೀವು ಸ್ವಲ್ಪ ಹೇಳಿ. ನಿಮ್ಮ ಸರ್ಕಾರದ ಹಣೆಬರಹವನ್ನು ಸ್ವಲ್ಪ ಹೇಳಿ. ಈ ಸದನದ ಮುಖ್ಯಸಚೇತಕರು ನೀವು. ನಿಮ್ಮ ಅಳಿಯ ತೀರಿಕೊಂಡು ಎಷ್ಟು ವರ್ಷ ಆಯಿತು? ಅದರ ಬಗ್ಗೆ ನೀವು ಎರಡು ನಿಮಿಷ ನಮಗೆ ಹೇಳಿ ಬಿಟ್ಟರೆ, ನಿಮ್ಮ ಸರ್ಕಾರದ ಬಗ್ಗೆ ನೀವು ಹೇಳಬಹುದು. ಅದನ್ನು ಹೇಳಿಬಿಡಿ.

ಶ್ರೀ ಎಸ್ . ಜಯಣ್ಣ : ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಇಲ್ಲಿ ಹೇಳಬೇಕು. ಅಧ್ಯಕ್ಷರೇ, ಸಂದರ್ಭ ಬಂತು ಹೇಳುತ್ತಾ ಇದ್ದೇನೆ. ನನಗೆ ಮಾನ್ಯ ಜಯಣ್ಣ ಅವರ ಬಗ್ಗೆ ಅತ್ಯಂತ ಪ್ರೀತಿ ಇದೆ. ಅಳಿಯ ತೀರಿಕೊಂಡರು. ಕೊಂದವರು ಯಾರು ಎಂದು ಇದುವರೆಗೂ ತಿಳಿಯುವ ವ್ಯವಸ್ಥೆ, ಆಗಲಿಲ್ಲ. ಅದನ್ನು ಮಾಡಬೇಕಾದದ್ದು ಸರ್ಕಾರ. ಯಾರು ಮಾಡಿದ್ದಾರೆ ಎಂದು ಅದನ್ನು ಕಂಡುಹಿಡಿದು ಹೇಳಬೇಕಾದವರು ನೀವು, ನಿಮ್ಮ ಸರ್ಕಾರ. ಮಾನ್ಯ ಅಧ್ಯಕ್ಷರೇ, ಭರವಸೆಯನ್ನು ಕೊಟ್ಟಮೇಲೆ, ಪರಿಣಾಮಕಾರಿ ಯಾಗಿ ಆ ಕೆಲಸವನ್ನು ಮಾಡಬೇಕಾದದ್ದು ಮುಖ್ಯಮಂತ್ರಿಗಳ ಆದ್ಯಕರ್ತವ್ಯ. ಮುಖ್ಯಮಂತ್ರಿಗಳಾದವರು ಭರವಸೆಯನ್ನು ಕೊಡುವುದಕ್ಕೆ ಮುಂಚೆ. ಒಂದು ಚಿಂತನೆ ಮಾಡಿ, ಯೋಚನೆ ಮಾಡಿ ಅವರು ಭರವಸೆಯನ್ನು ಕೊಡಬೇಕು ಎನ್ನುವ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ಅದರ ಬಗ್ಗೆ ಆಕ್ಷೇಪಣೆ, ಆರೋಪ ಮಾಡತಕ್ಕಂಥ ಪ್ರಶ್ನೆ ಅಲ್ಲ. ಮುಖ್ಯಮಂತ್ರಿಗಳು ಹೋದಕಡೆಗಳಲ್ಲಿ ಭರವಸೆ ಕೊಟ್ಟರೆ ಅದನ್ನು ಈಡೇರಿಸ ಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯ. ಈ ಡೇರಲಿಲ್ಲ ಎಂದರೆ ಏನಾಗುತ್ತದೆ ಎಂದರೆ, ಎಲ್ಲಾ ಕಡೆ ಬಂದರು. ಭರವಸೆ ಕೊಟ್ಟರು, ಏನೂ ಕ್ರಮ ಆಗಲಿಲ್ಲ ಎನ್ನುವಂಥ ಪ್ರಶ್ನೆ ಬರುತ್ತದೆ. ಆದ್ದರಿಂದ ಒಂದು ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಗಳು

ಪ್ರಾಮಾಣಿಕವಾಗಿ ಮಾಡಬೇಕು ಎಂದು ನಾನು ಅತ್ಯಂತ ಕಳಕಳಿಯಿಂದ ಅವರಲ್ಲಿ ಮನವಿ ಮಾಡುತ್ತೇನೆ.

ಛೇರ್ಮನ್ : ಮಾನ್ಯ ನಾಗರಾಜ್‌ರವರೇ, ಸಾಕಷ್ಟು ಸಮಯ ಆಯಿತು. ಬೇಗ ಮುಗಿಸಿ. ಇನ್ನೂ ಕೆಲವರು ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ನಾವೇ ಇಲ್ಲಿ ಮಾತನಾಡುವುದಕ್ಕೆ ಇದುವವರು. ಇರುವವರು ನಾವೇ. ಅಧ್ಯಕ್ಷರು ಹೇಳಿಬಿಟ್ಟರು, ಇರುವವರೇ ನೀವು ಮೂರು ಜನ, ಅದು ಎಷ್ಟು ಬೇಕಾದರೂ ಮಾತನಾಡಿ ಎಂದು ಹೇಳಿಬಿಟ್ಟಿದ್ದಾರೆ. ಇವೆರೆಲ್ಲ ನನ್ನ ಸ್ನೇಹಿತರು ಹತ್ತುಹತ್ತು ನಿಮಿಷ ತೆಗೆದುಕೊಳ್ಳುತ್ತಾರೆ ಎಂದು ಕಾಣುತ್ತದೆ. ನಾನೇ ಒಂದಷ್ಟು ಮಾತನಾಡಿ ಮುಗಿಸಿಬಿಡುತ್ತೇನೆ.

ಶ್ರೀ ಆರ್. ಎನ್. ನಾಯಕ್ :- ನಿಮಗೆ ಮಾತನಾಡಿ ಯಾವತ್ತಾದರೂ ಬೇಸರ ಬಂದಿತ್ತೇ? ಅಗಾದರೂ ಒಂದು ರಿಪೋರ್ಟ್ ಆಗಲಿ, ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಛೆ ಛೆ.. ತಾವು ಕನ್ನಡ ಮತ್ತು ಸಂಸ್ಕೃತಿ ಸಚಿವರಾದರೂ ನನಗೆ ಬೇಸರ ಬರಲಿಲ್ಲ. ಇನ್ನು ಯಾವುದಕ್ಕೆ ನನಗೆ ಬೇಸರ ಬರುತ್ತದೆ? ಆ ಪ್ರಶ್ನೆಯೇ ಇಲ್ಲ ನನಗೆ. ಆಮೇಲೆ ಒಂದು, ನಮ್ಮ ಮುಖ್ಯಮಂತ್ರಿಗಳು ಯಾವುದೇ ಸಮಾರಂಭಕ್ಕೆ ಹೋಗಲಿ, ಸಾಹಿತಿಗಳ ಸಮಾರಂಭಕ್ಕೆ ಹೋದರೆ ನಾನು ಸಾಹಿತಿ ಎಂದು ಹೇಳುತ್ತಾರೆ. ಒಕ್ಕಲಿಗರ ಸಮಾರಂಭಕ್ಕೆ ಹೋದರೆ ನಾನು ಒಕ್ಕಲಿಗ ಅನ್ನುತ್ತಾರೆ. ಗಾಣಿಗರ ಸಮ್ಮೇಳನಕ್ಕೆ ಹೋದರೆ ನಾನು ಗಾಣಿಗ ಎಂದು ಹೇಳುತ್ತಾರೆ. ಹೋದಕಡೆಗಳಲ್ಲಿ ಸುಮ್ಮನೆ ಹೇಳಿಬಿಡುತ್ತಾರೆ. ಯಾವುದಾದರೂ ಒಂದನ್ನು ಅವರು ಹೇಳಬೇಕು. ಅನೇಕ ಕಡೆ ನಾನು ನೋಡಿದ್ದೇನೆ. ಕೆಲವು ಭರವಸೆಗಳನ್ನು ಅವರು ಈ ಡೇರಿಸಿಯೇ ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಭರವಸೆಗಳನ್ನು ಏನೋ ಬಹಳ ಕೊಟ್ಟಿದ್ದಾರೆ. ಈಗ ನನ್ನದೇ ಒಂದೆರಡು ಭರವಸೆಗಳನ್ನು ಈ ಡೇರಿಸಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿ ಬಂದ ನಂತರ ನನ್ನ ಕ್ಷೇತ್ರದ ಎರಡು -ಮೂರು ಭರವಸೆಗಳನ್ನು ಅವರು ಪ್ರಾಮಾಣಿಕವಾಗಿ ಈಡೇರಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಲೆನಾಡು ಅಭಿವೃದ್ಧಿ ಮಂಡಲಿಗೆ ಸೇರಿಸುವಾಗ ಮುಖ್ಯಮಂತ್ರಿಯಾಗಿ ಬಂದನಂತರ ಪ್ರಥಮವಾಗಿ ಅದನ್ನು ಇಲ್ಲಿ ತಂದು, ಆ ಕಾರ್ಯವನ್ನು ಮಾಡಿದ್ದಾರೆ. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಮುಖ್ಯಮಂತ್ರಿಗಳು ಮೈಲಿಗಟ್ಟಲೆ ಭರವಸೆಗಳನ್ನು ಕೊಡುವುದು ಬೇಡ ಎಂಬ ಮಾತನ್ನು ಇಲ್ಲಿ ತಮಗೆ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಮತ್ತು ಕರ್ನಾಟಕ ಲೋಕಸೇವಾ ಆಯೋಗ. ಲೋಕಸೇವಾ ಆಯೋಗದ ಬಗ್ಗೆ ಮಾತನಾಡಬಾರದು ಎಂದು ನಿನ್ನೆ ಮುಖ್ಯಮಂತ್ರಿಗಳು ಹೇಳಿಬಿಟ್ಟರು. ಅದರಬಗ್ಗೆ ಮಾತನಾಡಬಾರದು, ಉಸಿರೇ ಎತ್ತಬಾರದು, ಗಮನವನ್ನೂ ಕೊಡಬಾರದು, ಆಕಡೆ ನೋಡಲೂ ಬೇಡಿ, ಅದು ಬಹಳ ಪರಮಪವಿತ್ರವಾದಂಥ ಸಂಸ್ಥೆ, ಇಲ್ಲಿರುವವರೆಲ್ಲ ದೇವತೆಗಳು, ಆ ದೇವತೆಗಳಿಗೆ ನಾವು ಊದುಬತ್ತಿ ಹಚ್ಚಬೇಕು.

ಅದನ್ನು ಬಿಟ್ಟರೆ ನಾವು ಅವರನ್ನು ನೋಡಲೇಬಾರದು ಎಂದು ನಿನ್ನೆ ಹೇಳಿದರು. ಹಾಗಾದರೆ ಈ ಸಭೆ ಏಕೆ ಇರಬೇಕು? ಈ ಸಭೆಯ ಘನತೆ, ಈ ಸಭೆಯ ಶಕ್ತಿ ಏನು? ಈ ಸಭೆಗೆ ಇರತಕ್ಕಂಥ ಸಾರ್ವಭೌಮತ್ವ ಬೇರೆ ಯಾವುದಕ್ಕೂ ಇಲ್ಲ ಎನ್ನುವಂಥಾದ್ದು ನನ್ನ ಕಳಕಳಿಯ ವಾದ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಆದ್ದರಿಂದ ಅವರು ವೆಟಿಕಾನ್ ಸಿಟಿಯ ಪೋಪ್ ಇದ್ದಹಾಗೆ, ಅವರ ಬಗ್ಗೆ ನೀವು ಯಾರೂ ಮಾತನಾಡಬೇಡಿ, ಅಲ್ಲಿ ಹೋಗತಕ್ಕಂಥ ಸದಸ್ಯರೆಲ್ಲ ದೈವಲೋಕದಿಂದ ಇಳಿದಿರತಕ್ಕಂಥವರು, ಅವರ ಬಗ್ಗೆ ನೀವೇನು ಮಾತನಾಡಬೇಡಿ ಎಂದು ಹೇಳಿದರೆ, ಅದು ಅಷ್ಟು ಸಮಂಜಸ ಆಗುವುದಿಲ್ಲ.

ಛೇರಮನ್ : ನಾಗರಾಜ್‌ರವರೇ ದನಕಾಯುವುದು ಎನ್ನತಕ್ಕಂಥ ಶಬ್ದ ಬೇಡ.

ಶ್ರೀ ವಾಟಾಳ್ ನಾಗರಾಜ್ : ಅದು ಬೇಡವೆಂದರೆ ನಾನು ಅದನ್ನು ವಾಪಾಸ್ಸು ತೆಗೆದುಕೊಳ್ಳುತ್ತೇನೆ. ನಾನು ಬಹಳ ಪ್ರೀತಿಯಿಂದ ಅದನ್ನು ಹಿಂತೆಗೆದುಕೊಳ್ಳುತ್ತೇನೆ.

1.30 ಪಿ ಎಂ

ನಾವು ಏನು ಕಾಯೋಣ ಎಂದು ಹೇಳಬೇಕು. ನಾನುಹಿಂದಕ್ಕೆ ತೆಗೆದುಕೊಂಡೆ, ನಾವು ಮುಂದೆ ಏನು ಕಾಯೋಣ ಹೇಳಿ. ಈ ಸಭೆಗೆ ಏನೂ ಶಕ್ತಿ ಇಲ್ಲ ಅಂದುಬಿಟ್ಟರೆ. ಅವರ ಬಗ್ಗೆ ಮಾತನಾಡಬಾರದು. ಇವರ ಬಗ್ಗೆ ಮಾತನಾಡಬಾರದು ಇನ್ನೊಬ್ಬರ ಬಗ್ಗೆ ಮಾತನಾಡಬಾರದು, ರಾಜಭವನದ ಬಗ್ಗೆ ಮಾತನಾಡಬಾರದು, ಇನ್ನೊಬ್ಬರ ಬಗ್ಗೆ ಮಾತನಾಡಬಾರದು. ಆಮೇಲೆ ಶಾಸಕಾಂಗದ ಬಗ್ಗೆ ಮಾತನಾಡಬಾರದು ಮತ್ತೆ ನಾವು ಯಾವುದರ ಬಗ್ಗೆ ಮಾತನಾಡೋಣ ಎಂದು ಅದನ್ನಾದರೂ ಒಂದು ಹೇಳಿ.

ಶ್ರೀ ಕೆ.ಎಚ್.ರಂಗನಾಥ್ : ಎಲ್ಲರ ಬಗ್ಗೆಯೂ ಮಾತನಾಡಬಹುದು ಎಂದು ಇದೆ. ಆದರೆ ಇತಿಮಿತಿಯಲ್ಲಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಅದನ್ನು ನಾನು ಒಪ್ಪುತ್ತೇನೆ. ನಿಮ್ಮ ವಾದ ಒಪ್ಪುತ್ತೇನೆ. ಆದರೆ ನಿನ್ನೆ ಮುಖ್ಯಮಂತ್ರಿಗಳು ಹೇಳಿದ್ದುದು.

ಶ್ರೀ ಕೆ.ಎಚ್.ರಂಗನಾಥ್ :- ಅಲ್ಲ, ಅವರು ಹೇಳುವ ಅರ್ಥವೇ ಹಾಗೆ? ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಯಾರ ಬಗ್ಗೆ ಮಾತನಾಡಬೇಕು, ಯಾರ ಬಗ್ಗೆ ಮಾತನಾಡಬಾರದು ಹೀಗೆ ಮಾತನಾಡಬೇಕೆಂದು ಇದೆ. ಅದರ ಪ್ರಕಾರ ಮಾತನಾಡಬೇಕೇ ಹೊರತು ಅದನ್ನು ಬಿಟ್ಟು ಮಾತನಾಡಬೇಡಿ ಎಂದು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ : ಏನು ಸ್ವಾಮಿ, ಮಾತನಾಡುವ ಧಾಟಿಯಲ್ಲಿ ಪದಗಳು, ಅರ್ಥಗಳು ಬದಲಾವಣೆಯಾಗುತ್ತವೆಂದು ತಮಗೂ ಗೊತ್ತಿದೆ. ಒಂದೊಂದು ಪದವು ಯಾವ ಯಾವ ರೀತಿಯಲ್ಲಿ ಸ್ವಲ್ಪ ಬದಲಾವಣೆ ಆಗುತ್ತದೆ. ಅದನ್ನೇ ನೀವು

ಹಿಡಿದುಕೊಂಡು ನೀವು ಈ ಪದವನ್ನು ಉಪಯೋಗಿಸಿದ್ದೀರಿ ಎಂದು ಹಿಡಿದುಕೊಂಡುಬಿಟ್ಟರೆ ನಮ್ಮ ಪರಿಸ್ಥಿತಿ ಹೇಗೆ? ಈ ಸಭೆಯಲ್ಲಿ ನಾವು ನೀವು ಅನಾದಿ ಕಾಲದಿಂದ ಇದ್ದಂತಹವರು, ನಿಮ್ಮ ಜೊತೆಯಲ್ಲಿ ನಾನೂ ಇದ್ದೆ. 1967 ರಲ್ಲಿ ಇದ್ದೆ, ತಾವೆಲ್ಲ ನೋಡಿದ್ದೀರಿ, ತಾವು ಇಲ್ಲಿ ಕುಳಿತುಕೊಂಡು ಏನೇನು ವ್ಯಾಖ್ಯಾನಗಳನ್ನು ಮಾಡಿದ್ದೀರಿ, ತಾವು ಈ ಸಭೆಗೆ ಸಲ್ಲದ ಮಾತುಗಳನ್ನು ಆಡಿದ್ದೀರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎಷ್ಟು ತೀಕ್ಷ್ಣವಾಗಿ ಎಷ್ಟು ಪರಿಣಾಮಕಾರಿಯಾಗಿ ಇಲ್ಲಿ ಸಮಾಜವಾದಿ ಪಾರ್ಟಿಯಲ್ಲಿ ಕುಳಿತುಕೊಂಡು ತಾವು ಮತ್ತು ನಮ್ಮ ಉಪ ಮುಖ್ಯಮಂತ್ರಿಗಳು, ಕಲ್ಮಣಕರ್‌ರವರು ಇಲ್ಲಿ ನಡೆದಿರತಕ್ಕಂಥಾದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅದರ ಬಗ್ಗೆ ಬೇರೆ ಮಾತು ಇಲ್ಲ. ಆದರೆ ಒಂದು ಮಾತು ತಮಗೆ ಹೇಳುವುದೇನೆಂದರೆ, ಅವರ ಬಗ್ಗೆ ಏನೂ ಮಾತನಾಡಬಾರದು ಎನ್ನುವ ವಾದ ಇದೆಯಲ್ಲ ಅದನ್ನು ಅಷ್ಟಾಗಿ ನಾನು ಒಪ್ಪತಕ್ಕಂಥವನಲ್ಲ. ಅವರ ಬಗ್ಗೆ ನಾವು ಹೇಳತಕ್ಕಂಥ ಮಾತನ್ನು ಹೇಳಲೇಬೇಕು. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಮಾನ್ಯ ಲೋಕೋಪಯೋಗಿ ಸಚಿವರ ಇಲಾಖೆ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಏನು ಸ್ಪಷ್ಟ ಚಿತ್ರ ಇದೆ ಅದನ್ನು ಇಡುತ್ತಾರೆ. ನಮ್ಮಲ್ಲಿ ಇಷ್ಟುದುಡ್ಡು ಇದೆ, ಇಷ್ಟು ಕೆಲಸ ಮಾಡುತ್ತೇವೆಂದು ನೇರವಾಗಿ ಹೇಳಿಬಿಡುತ್ತಾರೆ. ಇದನ್ನು ಮಾಡುತ್ತೇವೆ ಅದನ್ನು ಮಾಡುತ್ತೇವೆಂದು ಭರವಸೆಗಳನ್ನು ಕೊಟ್ಟು ಕೊಂಡು ತೀರಾ ತಳ್ಳಿ ಹಾಕಿಬಿಡುತ್ತೀರಿ ಎಂದು ಕೂಡ ನಾನು ಹೇಳುವುದಿಲ್ಲ. ನಾನು ಹಿಂದಿನ ಸಾರಿ ಹೇಳಿದಾಗ, ಸ್ವಾಮಿ ಈ ಹೆರಿಗೆ ಆ ಆಸ್ಪತ್ರೆಗಳು ಆಗಿವೆ ಈ ಲೋಕೋಪಯೋಗಿ ರಸ್ತೆಗಳು ಎಷ್ಟು ಇವೆ ಎಂದು ಕೇಳಿದಾಗ ಅವರು ಹೇಳಿದುದ್ದು ನಿಜ. ಆಗ ಅವರು ಒಪ್ಪಿಕೊಂಡರು. ಪರಿಸ್ಥಿತಿ ಈ ರೀತಿ ಇದೆ, ನಮ್ಮಲ್ಲಿ ಹಣ ಇಷ್ಟು ಇದೆ ಎನ್ನುವುದರ ಚಿತ್ರವನ್ನು ಬಿಚ್ಚಿ ಇಟ್ಟರು. ನಾನು ಅವರ ಮಾತನ್ನು ಪ್ರಾಮಾಣಿಕವಾಗಿ ಮೆಚ್ಚುತ್ತೇನೆ. ಒಂದು ಮಾತನ್ನು ಅವರಿಗೆ ಹೇಳುತ್ತಿದ್ದೇನೆ. ರಾಜ್ಯದ ಸಮಸ್ಯೆಗಳಿಗಿಂತ ಹೆಚ್ಚಾಗಿ ರಾಷ್ಟ್ರೀಯ ಹೆದ್ದಾರಿಗಳು, ಎಷ್ಟು ರಾಷ್ಟ್ರಿಯ ಹೆದ್ದಾರಿಗಳನ್ನು ಕೇಂದ್ರಸರ್ಕಾರದವರು ಮಾಡಿದ್ದಾರೆ. 1972 ರಿಂದಲೂ ಇಲ್ಲಿಯವರೆಗೂ ಒಂದು ಅಂಗುಲ ರಾಷ್ಟ್ರೀಯ ಹೆದ್ದಾರಿಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿಲ್ಲ. ಈಗ ನಾವು ಕೇಂದ್ರ ಸರ್ಕಾರಕ್ಕೆ ಏನು ಹೇಳಬೇಕು ಅಧ್ಯಕ್ಷರೇ? ಕೇರಳಕ್ಕೆ ಮಾಡಿದ್ದಾರೆ; ಅಂದ್ರಕ್ಕೆ ಮಾಡಿದ್ದಾರೆ ತಮಿಳುನಾಡಿಗೆ ಮಾಡಿದ್ದಾರೆ. ಬೇರೆ ರಾಜ್ಯಕ್ಕೆಲ್ಲಾ ಮಾಡಿದ್ದಾರೆ, ಮಹಾರಾಷ್ಟ್ರಕ್ಕೆ ಮಾಡಿದ್ದಾರೆ. ಕರ್ನಾಟಕ ರಾಜ್ಯಕ್ಕೆ 1972ರಿಂದ ಇಲ್ಲಿಯವರೆಗೂ ಒಂದು ಅಂಗುಲ ರಾಷ್ಟ್ರೀಯ ಹೆದ್ದಾರಿ ಆಗಿಲ್ಲ. ಸ್ವಾಮಿ ಕಲ್ಕತ್ತದವರಿಗೆ ಮೆಟ್ರೋ ರೈಲು ಮಾಡಲು 1500 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರೇ ಕೊಟ್ಟು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯವನ್ನು ಕೇಳುವವರೇ ಗತಿಇಲ್ಲ. ಕೇಂದ್ರದಲ್ಲೂ ನಮ್ಮ ಕರ್ನಾಟಕ ರಾಜ್ಯವನ್ನು ಕಡೆಗಾಣಿಸಿದ್ದಾರೆ. ಕರ್ನಾಟಕವನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದ್ದಾರೆ. ಕರ್ನಾಟಕ ರಾಜ್ಯವನ್ನು ಈ ದೇಶದ ಎರಡನೇ ಪ್ರಜೆಗಳೇನೋ ಎನ್ನುವ ರೀತಿಯಲ್ಲಿ ಕೇಂದ್ರ ಸರ್ಕಾರ ನೋಡುತ್ತಿದೆ. ಎಷ್ಟು ನಮ್ಮ ವಿದ್ಯುಚ್ಛಕ್ತಿ ಯೋಜನೆಗಳಿಗೆ ಇವತ್ತಿನವರೆಗೆ ಅಲ್ಲಿಂದ ಅನುಮತಿ ದೊರೆತಿದೆ, ದೊರೆತಿಲ್ಲ. ರಾಷ್ಟ್ರೀಯ ಹೆದ್ದಾರಿ ಇಲ್ಲ. ನಿಮ್ಮ ಮಳೆ ಹಾನಿಗೆ ನಮ್ಮ ಕಂದಾಯ ಸಚಿವರು ಹೇಳಿದಂತೆ ಪ್ರತಿ ವರ್ಷ ಎಷ್ಟು ಕೊಡುತ್ತಾರೋ ಅಷ್ಟೇ, ಹೆಚ್ಚಿಗೆ ಕೊಡುವುದಿಲ್ಲ ಎಂದರು ಆದರೆ ನಮ್ಮ ಕಂದಾಯ ಸಚಿವರೇನೋ ಬಹಳ ಆ ಆಸೆಯಿಂದ ಹಣ ಬರುತ್ತದೆಂದು ಹೇಳಿದ್ದಾರೆ

ಆದ್ದರಿಂದ ಅವರಿಗೆ ಹಣ ಬರಲಿಲ್ಲ ಎಂದು ಹೇಳುವುದಕ್ಕೆ ಮುಂದಕ್ಕೆ ಸಭೆ ಇಲ್ಲ. ನಾನು ಅವರನ್ನು ಆಗಾಗ ಭೇಟಿ ಮಾಡುತ್ತಿರುತ್ತೇನೆ. ಅವರು ಒಳ್ಳೆಯ ಸಜ್ಜನಿಕೆ ಉಳ್ಳವರು. ಅವರ ಬಗ್ಗೆ ನನಗೆ ಅತ್ಯಂತ ಪ್ರೀತಿ ವಿಶ್ವಾಸ ಇದೆ. ಇದುವರೆಗೂ ಅನೇಕಸಾರಿ ನಾನು ಕೇಳಿದ್ದೇನೆ ಅವರು ಯಾವುದೇ ಗೊಂದಲಕ್ಕೆ ಹೋಗದೆ ಪರಿಣಾಮಕಾರಿಯಾಗಿ ಕೆಲಸ. ಮಾಡಬೇಕು ಎನ್ನುವಂತಹ ಚಿಂತನೆ ಇರತಕ್ಕಂಥ ಸಚಿವರಲ್ಲಿ ಒಬ್ಬರು ಮತ್ತು ಖರ್ಗೆಯವರು ಪಾಪ ಬಹಳ ಒಳ್ಳೆಯ ಕೆಲಸ ಮಾಡಿರತಕ್ಕಂಥವರು. ನಾನು ಅವರನ್ನೇ ಕೇಳುತ್ತೇನೆ ತಮಗೆ ಗೊತ್ತಿದೆ. ಮಳೆಯಿಂದ 157 ಕೋಟಿ ರೂಪಾಯಿ ಹಾನಿ ಆಗಿರತಕ್ಕಂಥಾದ್ದು. ನೀವು ತರಾತುರಿಯಲ್ಲಿ ನಮ್ಮನ್ನೆಲ್ಲಾ ಕರೆದಿರಿ. ನೀವು ಕೇಂದ್ರಕ್ಕೆ ಮನವಿಯನ್ನು ಕಳುಹಿಸಿದ್ದೇವೆಂದು ಹೇಳಿದಿರಿ. 1990 ರಿಂದ ಇಲ್ಲಿಯವರೆಗೆ ನಡೆದಿರತಕ್ಕಂಥಾದ್ದು ನೀವು ಕೇಂದ್ರಕ್ಕೆ ಕೊಟ್ಟಿರತಕ್ಕಂಥ ಮನವಿಗಳು ಎಲ್ಲ ಹೋಗಿದೆ. ಆ ಮನವಿಗಳಿಗೆ ಎಷ್ಟು ಬೆಲೆ ಕೊಟ್ಟಿದ್ದಾರೆ. ನಿಮಗೆ ಅವರು ಒಂದು ಕಿಲುಬು ಕಾಸು ಸಹ ಕೊಟ್ಟಿಲ್ಲ. ಈ ಬಗ್ಗೆ ನಾನು ನಿಮ್ಮನ್ನು ನೇರವಾಗಿ ದೂಷಣೆ ಮಾಡುವುದಿಲ್ಲ. ನಮ್ಮ ಪಾರ್ಲಿಮೆಂಟ್ ಸದಸ್ಯರು ಅಲ್ಲಿ ಏನು ಮಾಡಿದ್ದಾರೆ? ನಾನು ಯಾರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಹೇಳಿದರೆ ನೀವು ಪಾರ್ಲಿಮೆಂಟ್ ಸದಸ್ಯರ ಹೆಸರುಗಳನ್ನು ಇಲ್ಲಿ ತರಬೇಡಿ ಎಂದು ಮತ್ತೇ ನೀವು ನನ್ನ ಮೇಲೆ ಬೀಳಬಹುದು. ನಮ್ಮ ಕರ್ನಾಟಕ ರಾಜ್ಯದ ಮಂತ್ರಿಗಳು ಏನು ಮಾಡಿದ್ದಾರೆ. ಕೇಂದ್ರ ಸಂಪುಟದಲ್ಲಿರತಕ್ಕಂಥ ಕರ್ನಾಟಕದ ಮಂತ್ರಿಗಳು ಲೋಕಸಭಾ ಸದಸ್ಯರು ಪಾರ್ಲಿಮೆಂಟ್‌ನಲ್ಲಿ ಕರ್ನಾಟಕ ರಾಜ್ಯದ ಸಮಸ್ಯೆಗಳ ಬಗ್ಗೆ ಸಭಾತ್ಯಾಗ ಮಾಡಿದ್ದುದು ಆಗಲಿ, ಧರಣಿ ಮಾಡಿದುದ್ದು ಆಗಲಿ ಪರಿಣಾಮಕಾರಿಯಾಗಿ ಅನ್ಯಾಯ ನಡೆದಿದೆ ಎಂದು ಹೇಳಿ ಪ್ರತಿಭಟನೆ ಮಾಡಿದ್ದಾಗಲಿ ಇವತ್ತಿನವರೆಗೂನಾನಂತೂ ಕಾಣಲಿಲ್ಲ. ಈ ತರಹ ಆದರೆ ಹೇಗೆ? ದೆಲ್ಲಿಯಲ್ಲಿ ಕೇರಳ ಒಂದನೇ ಸ್ಥಾನದಲ್ಲಿದೆ. ತಮಿಳುನಾಡಿಗೆ ಪ್ರಧಾನ ಮಂತ್ರಿಗಳನ್ನು ಕರೆಯಿಸಿಕೊಳ್ಳುತ್ತಾರೆ. ತಮಿಳುನಾಡು ಮುಖ್ಯಮಂತ್ರಿ ಅಲ್ಲಿಗೆ ಹೋಗಬೇಕಾಗಿಲ್ಲ. ಉತ್ತರ ಪ್ರದೇಶ ನೋಡಿ, ಯಾವ ರಾಜ್ಯ ನೋಡಿ ಕೇಂದ್ರದವರು ಅವರಿಗೆ ಹೆದರುತ್ತಾರೆ, ಮಾತನಾಡುತ್ತಾರೆ. ನಮ್ಮ ರಾಜ್ಯದಲ್ಲಿ ಆ ಪರಿಸ್ಥಿತಿ ಇಲ್ಲ. ಕೇಂದ್ರದ ಧೋರಣೆ ವಿರುದ್ಧ ಈ ಸದನದಲ್ಲಿ ಕೊನೆಯ ದಿವಸವಾದರೂ ಚಿಂತೆ ಇಲ್ಲ. ಕೇಂದ್ರದಿಂದ ನಮಗೆ ಏನೇನೂ ಆಗಿಲ್ಲ ಎನ್ನುವ ಬಗ್ಗೆ ಪರಿಣಾಮಕಾರಿಯಾದಂತಹ ಒಂದು ಖಂಡನಾ ನಿರ್ಣಯವನ್ನು ಈ ಸಭೆಯಲ್ಲಿ ಮಾಡಬೇಕು. ಆ ನಿರ್ಣಯದಿಂದ ನಮಗೆ ಅನುಕೂಲವಾಗುತ್ತದೆಂದು ನಾನು ಅಂದುಕೊಂಡಿಲ್ಲ. ನಾವು ಧ್ವನಿಯನ್ನು ಎತ್ತಿದ್ದೇವೆ ಎನ್ನತಕ್ಕಂಥಾದ್ದಾಗಲಿ. ನಮ್ಮ ಲೋಕಸಭಾ ಸದಸ್ಯರು ಏನು ಮಾಡಿಲ್ಲ ಎಂದು 5ನೇ ತಾರೀಖು ಒಂದು ಪ್ರದರ್ಶನ ಮಾಡುತ್ತಿದ್ದೇವೆ, ಆ ಆ ಪ್ರದರ್ಶನ ಏನು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲಿಯವರೆಗೂ ಬಹಳ ಚೆನ್ನಾಗಿ ಮಾತನಾಡುತ್ತಿದ್ದಿರಿ, ಬಹಳ ಸೊಗಸಾಗಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಿರಿ. ಈಗ ಕೊನೆಗೆ ಕೇಂದ್ರ ಸರ್ಕಾರದ ಮೇಲೆ ಖಂಡನಾ ನಿರ್ಣಯ ಮಾಡಬೇಕೆಂದು ಬಂದಿದ್ದೀರಿ ತಮಗೆ ಗೊತ್ತಿದ್ದಂತೆ ಇಲ್ಲಿಯವರೆಗೂ ನ್ಯಾಚುರಲ್ ಕಲಾಮೆಟಿಯಲ್ಲಿ ಫಂಡ್ ಫಿಕ್ಸ್ ಮಾಡಿದಷ್ಟೇ ಬರುವುದು. ಅದಕ್ಕಿಂತ ಜಾಸ್ತಿ ಯಾರಿಗೂ ಕೊಟ್ಟಿಲ್ಲ. ಯಾರೂ ತಂದಿಲ್ಲ.

ಯಾವ ರಾಜ್ಯದವರಿಗೂ ಸಿಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್ : - ನೀವು ಅದನ್ನು ಮೊದಲೇ ಹೇಳಿಬಿಟ್ಟಿದ್ದರೆ ಬಿಟ್ಟು ಬಿಡಬಹುದಿತ್ತು ನಾವು ಕೇಂದ್ರಕ್ಕೆ ಮನವಿ ಕೊಡುವುದಿಲ್ಲ ಅವರಿಂದ ಕಾಸು ನಮಗೆ ಬರುವುದಿಲ್ಲ ಹೇಳಿಬಿಟ್ಟಿದ್ದರೆ ಬಿಟ್ಟುಬಿಡಬಹುದಿತ್ತು ನೀವು ಪುಟ ಪುಟವನ್ನೂ ಬಹಳ ಸುಂದರವಾಗಿ ಪ್ರಿಂಟ್ ಮಾಡಿಸಿ ಏಕೆ ಕಳುಹಿಸಬೇಕಾಗಿತ್ತು? ಎಲ್ಲಾ ಅಧಿಕಾರಿಗಳನ್ನು ಸೇರಿಸಿ ಹಗಲು ರಾತ್ರಿಕೂಡಿಸಿ ಮಾಹಿತಿಯನ್ನು ತರಿಸಿ ಆ ವ್ಯವಸ್ಥೆಗೆ 5 ಲಕ್ಷ ರೂಪಾಯಿ ಖರ್ಚು ಆಗಿದೆ. ನಾವು ಏನು ತಿಳಿದಕೊಂಡೆವು ಎಂದರೆ ನಾವು ಏನೋ ಈ ಪುಸ್ತಕ ಕಳುಹಿಸಿದರೆ, ಮನವಿ ಸಲ್ಲಿಸಿದರೆ ಒಂದಷ್ಟು ಹಣ ಬರುತ್ತದೆಂದು. ಈ ರೀತಿ ನೀವು ಬಂಡವಾಳ ಇಲ್ಲದ ಬಡಾಯಿ ಎಂದು ಹೇಳುವುದಾಗಿದ್ದರೆ ಮೊದಲೇ ಬಿಟ್ಟುಬಿಡಬಹುದಾಗಿತ್ತು ಬೇಕಾಗಿಲ್ಲ ಅಲ್ಲಿಗೆ ಕಳುಹಿಸಿದರೂ ಪ್ರಯೋಜನ ಇಲ್ಲ ಬರೆದು ಪ್ರಯೋಜನ ಇಲ್ಲ ಎಂದು ಹೇಳಬಹುದಿತ್ತು, ಈಗ ಒಂದು ಸ್ಪಷ್ಟವಾಯಿತು ಅಧ್ಯಕ್ಷರೇ, ಕೇಂದ್ರದಿಂದ ನಮಗೆ ಒಂದು ಕಿಲುಬು ಕಾಸು ಬರುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ ಮೇಲೆ ನಮಗೆ ಸ್ಪಷ್ಟವಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಕೇಂದ್ರದಿಂದ ಸಾಲದ ರೂಪದಲ್ಲಿ ಬರಬಹುದು ಅಥವಾ ಅಡ್ವಾನ್ಸ್ ರೂಪದಲ್ಲಿ ಬರಬಹುದು. ಆದರೆ ಇರತಕ್ಕಂಥ 27 ಕೋಟಿ ರೂಪಾಯಿಗಳಲ್ಲಿ 21 ಕೋಟಿ ಅವರದು 6 ಕೋಟಿ 75 ಲಕ್ಷ ನಮ್ಮದು ಏನು ಭಾಗ ಇದೆ ಅದು ಬಿಟ್ಟು ಎನ್‌ಹ್ಯಾನ್ಸ್ ಮಾಡತಕ್ಕಂಥಾದ್ದು ಆಗಲಿ ಅಥವಾ ಏಯ್ಡ್ ರೂಪದಲ್ಲಿ ಕೊಡತಕ್ಕಂಥಾದ್ದು ಈ ವರ್ಷ ಇಲ್ಲ. ಅಡ್ವಾನ್ಸ್ ಕೊಡುತ್ತಾರೆಂದರೆ, ಮುಂದಿನ ವರ್ಷ ಕೊಡತಕ್ಕಂಥಾದ್ದು ಕೊಡಬಹುದು. ಇಲ್ಲವೇ ಒಂದು 50 ಕೋಟಿ ಸಾಲ ಕೊಡಬಹುದು. ಈ ರೀತಿ ಸಹಾಯ ಮಾಡಬಹುದೇ ಹೊರತಾಗಿ ಇರತಕ್ಕಂಥ 27 ಕೋಟಿಯನ್ನು ಎನ್ಹಾನ್ಸ್ ಮಾಡಿ 50 ಕೋಟಿ ಅಂತೂಕೊಡುವುದಿಲ್ಲ.

ಶ್ರೀ ಸಿ.ಭೈರೇಗೌಡ :- ಮಾನ್ಯ ಅಧ್ಯಕ್ಷರೇ, ಸರ್ಕಾರ ದಯವಿಟ್ಟು ತೀವ್ರವಾಗಿ ಗಮನಿಸಬೇಕು ಈ ನ್ಯಾಚುರಲ್ ಕಲಾಮೆಟೀಸ್ ಯಾರನ್ನು ಹೇಳಿಕೇಳಿಬರುವುದಿಲ್ಲ. ಮಾಗ್ನಿಟ್ಯೂಡ್ ಸಹ ಒಂದೊಂದು ಸಾರಿ ಹೆಚ್ಚು ಇರುತ್ತದೆ. ಒಂದೊಂದು ಸಾರಿ ಕಡಿಮೆ ಇರುತ್ತದೆ. ಆದ್ದರಿಂದ ನೀವು 27 ಕೋಟಿಗೆ ಒಂದು ಗೆರೆ ಗೀಚಿ ಅದಕ್ಕೆ ಮುಂದಕ್ಕೆ ಹೋಗುವುದಿಲ್ಲ ಅಂದರೆ ಇಡೀ ದೇಶದಲ್ಲಿ ಅನಾಹುತ ಆಗುವುದು ಬೇಡ ಅಕಸ್ಮಾತ್ತಾಗಿ ಆಯಿತು ಎಂದು ಕೊಳ್ಳಿ ಅದಕೋಸ್ಕರ ಪ್ರಾವಿಜನ್ ಇಡಬೇಕಾಗುತ್ತದೆ. ಲಿಮಿಟ್ ಇರತಕ್ಕಂಥಾದ್ದನ್ನು ಕೇಂದ್ರ ಸರ್ಕಾರಕ್ಕೆ ತಾವು ಹೇಳಬೇಕಾಗುತ್ತದೆ. ಈ ಗೆರೆ ಏನು ಇದೆ ಈ ಗೆರೆಯನ್ನು ಹಾಕಬೇಡಿ ಎಂದು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಈ ರೀತಿ ಏನಾದರೂ ತಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೀರಾ ತಿಳಿಸಿದ್ದರೆ ದಯವಿಟ್ಟು ಹೇಳಿ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಖರ್ಗೆಯವರು ಹೇಳಿದಾಗೆ, ನಿನ್ನೆಯೂ ಕೂಡ ತಾವು ಪ್ರಶ್ನೆ ಹಾಕಿದ್ದೀರಿ. ಅದಕ್ಕೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇವೆ. ಇದುವರೆಗೂ ಏನು ರಾಜ್ಯ ಸರ್ಕಾರದಿಂದ ಮನವಿ ಸಲ್ಲಿಸಿದ್ದೇನೆ, ಆ ಮನವಿಗಳಿಗೆ ನೆರವು ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ರಾಜ್ಯದಲ್ಲಿ ಏನು ಹಾನಿ ಆಗಿದೆ ಎನ್ನುವ ಬಗ್ಗೆ

ಕೇಂದ್ರಸರ್ಕಾರಕ್ಕೆ ಮನವಿ ಕೊಡಬೇಕು ಆ ರೀತಿ ನಾವು ಮನವಿ ಕೊಟ್ಟಿದ್ದೇವೆ. ಮಾನ್ಯ ಪ್ರಧಾನ ಮಂತ್ರಿಗಳು ಬಂದಾಗ ಕೂಡ ನಾವು ಮನವಿ ಸಲ್ಲಿಸಿದ್ದೇವೆ. ಮತ್ತು ಮುಖ್ಯಮಂತ್ರಿಗಳು ಕೂಡ ಪ್ರಸ್ತಾಪ ಮಾಡಿದ್ದಾರೆ. ಪದೇ ಪದೇ ಆಗತಕ್ಕಂಥ ನೆರೆಹಾವಳಿ ಮತ್ತು ಬರಗಾಲ ಏನು ಇದೆ ಇದಕ್ಕೆ ನಮಗೆ ಹಣಬೇಕು ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಸಮಕ್ಷಮದಲ್ಲಿ ಭೇಟಿ ಮಾಡಿದಾಗ ಕೂಡ ಹೇಳಿದ್ದಾರೆ. ತಾವು ಡೆಲ್ಲಿಗೆ ಬನ್ನಿ ಅಧಿಕಾರಿಗಳ ಜೊತೆಯಲ್ಲಿ ಅಲ್ಲಿ ಸಮಾಲೋಚನೆ ಮಾಡೋಣ ಗಂಭೀರವಾದ ಸಮಸ್ಯೆ ಇದ್ದರೆ ಏನಾದರೂ ಕೂಡ ನಾವು ಸಹಾಯ ಮಾಡೋಣ ಎಂದು ಕೂಡ ಅವರು ಹೇಳಿದ್ದಾರೆ. ನಾವು ಮೊನ್ನೆ ಡೆಲ್ಲಿಗೆ ಹೋಗಿದ್ದಾಗ ನಮ್ಮ ಲೋಕ ಸಭೆಯ ಸದಸ್ಯರ ಜೊತೆಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಕೇಂದ್ರ ಮಂತ್ರಿಗಳನ್ನು ಮತ್ತು ಪ್ರಧಾನ ಮಂತ್ರಿಯವರನ್ನು ಜೊತೆಗೇ ಭೇಟಿ ಮಾಡಿದ್ದಾರೆ. ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಸಿ ಆರ್‌ಎಫ್‌ದಲ್ಲಿ ನೆರೆಹಾವಳಿ, ಬರಗಾಲ ಪರಿಸ್ಥಿತಿಯು ಬಂದಾಗ 9ನೇ ಫೈನಾನ್ಸ್ ಕಮಿಶನ್ ಮಾನ್ಯ ಪಿ.ಪಿ.ಸಿಂಗ್‌ರವರು ಇದ್ದಾಗ ಅದರಲ್ಲಿ 27 ಕೋಟಿ ರೂಪಾಯಿಗಳು ಎಂದು ಮಾಡಿ, 20 ಕೋಟಿ 75ಲಕ್ಷ ಕೇಂದ್ರ ಸರಕಾರದಿಂದ ಆರು ಕೋಟಿ 25ಲಕ್ಷಗಳನ್ನು ನಾವೇ ಕೊಡಬೇಕಾಗಿದೆ. ಅದನ್ನು ಕೂಡ ಅಡ್ವಾನ್ಸ್ ಎಂದು ಕೊಡುತ್ತಾರೆಯೇ ಹೊರತು ಹಾಗೆಯೇ ಇಲ್ಲಿಯವರೆಗೂ ಕೊಟ್ಟಿಲ್ಲ. ಆದರೂ ಕೂಡ ನಾವು ಹೇಳಿದ್ದೇವೆ. ಇದು ಪದೆ ಪದೇ ಬರುತ್ತಾ ಇದೆ ಹಾಗಾಗಿ ಅಡಿಷನಲ್ಲಾಗಿ ಹೆಚ್ಚಿನ ಒಂದು 50 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡಬೇಕೆಂದು ಹೇಳಿದ್ದೇವೆ. ಆದರೆ ಈ 27 ಕೋಟಿಗಳ ಹೊರತಾಗಿ ನಾವು ನಾಲ್ಕು ವರ್ಷಗಳಲ್ಲಿ 99 ಕೋಟಿ ರೂಪಾಯಿಗಳನ್ನು ರಾಜ್ಯದ ಬೊಕ್ಕಸದಿಂದ ಇಂಥ ಕೆಲಸಗಳಿಗೆ ಖರ್ಚು ಮಾಡಿದ್ದೇವೆ. ಈ ವರ್ಷವೂ ಕೂಡ ಒಂದೂವರೆ ತಿಂಗಳ ಅವಧಿಯಲ್ಲಿ 12 ಕೋಟಿ ರೂಪಾಯಿಗಳನ್ನು ರಾಜ್ಯ ಸರಕಾರದಿಂದ ಬಿಡುಗಡೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರಕಾರದವರು 27 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಆ 27 ಕೋಟಿಗೆ ಮಾತ್ರ ಖರ್ಚಿಗೆ ಸರಿಹೋಗುವ ಹಾಗೆ ನಮ್ಮಲ್ಲಿ ಹಾನಿಯಾಗ ಬೇಕಾಲ್ಲ? ಅದಕ್ಕೂ ಒಂದು ಕಾನೂನು ಮಾಡುವುದು ಒಳ್ಳೆಯದು. 27 ಕೋಟಿ ಖರ್ಚಿಗೆ ಮಾತ್ರ ಆಗುವಷ್ಟು ಹಾನಿಯಾಗಬೇಕು. ಅದಕ್ಕೆ ಹೊರತಾಗಿ ಬೇರೆ ಯಾವ ಹಾನಿಯೂ ಆಗಕೂಡದು. ನಮ್ಮಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ನೂರಾರು ಕೋಟಿಗಳಷ್ಟು ಹಾನಿಯಾಗಿದೆ. ಕೇಂದ್ರ ಸರಕಾರದವರು ಇದರ ಬಗ್ಗೆ ಗಮನಹರಿಸಿಲ್ಲ ಅಂದರೆ ಅದನ್ನು ಬಿಟ್ಟು 27 ಕೋಟಿಗಳನ್ನು ನಾವು ಕೊಟ್ಟಿದ್ದೇವೆ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಅಂದರೆ, ಅದು ಸರಿಯೇ? ಈ ಧೋರಣೆಯು ಬದಲಾವಣೆಯಾಗಬೇಕು. ಕೇಂದ್ರದಿಂದ ನಮಗೆ ಕೊಡತಕ್ಕಂಥ ಹಣದ ಮೊತ್ತವು ಜಾಸ್ತಿಯಾಗಬೇಕು. ಹಾಗೆಯೇ ಸಂದರ್ಭ ಬಂದಾಗ ಹೆಚ್ಚಿನ ರೀತಿಯ ಹಣವನ್ನು ಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೂಡ ಅವರು ಕೊಡಬೇಕು. ಎಷ್ಟು ನಷ್ಟವಾಗಿದೆ ಅದಕ್ಕನುಗುಣವಾಗಿ ಹಣವನ್ನು ಕೊಡುತ್ತೇವೆಂದು ಅವರು ಹೇಳಬೇಕು. ನಾನು ನಿಮಗೆ ಆಕ್ಷೇಪಣೆ ಮಾಡುತ್ತೇನೆ ಎಂದು ಅರ್ಥವಲ್ಲ. ನಮಗೆ ನೂರಾರು ಕೋಟಿಗಳಷ್ಟು ನಷ್ಟವಾಗಿರುವಾಗ ಅವರು 27 ಕೋಟಿಗಳನ್ನು ಮಾತ್ರ ಕೊಟ್ಟರೆ, ನಮಗಾಗಿರುವ ಖರ್ಚು

300-400 ಕೋಟಿಗಳನ್ನು ನೀವು ಎಲ್ಲಿಂದ ಭರಿಸುತ್ತೀರಿ? ಹಣವನ್ನು ಎಲ್ಲಿಂದ ತರುತ್ತೀರಿ? ಆದ್ದರಿಂದ ಈ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತಾಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಕಾವೇರಿ ಮತ್ತು ಕೃಷ್ಣ ಯೋಜನೆಗಳ ಬಗ್ಗೆ ನಮ್ಮ ಸರಾಕಾರದ ಸ್ಪಷ್ಟವಾದ ನಿಲುವು- ಬೇಕು. ಕಾವೇರಿ ಬಗ್ಗೆ ನ್ಯಾಯಮಂಡಳಿಯ ವಾದ ವಿವಾದಗಳು ನಡೆಯುತ್ತಾ ಇವೆ. ಈ ಸಂದರ್ಭದಲ್ಲಿ ನಮ್ಮ ಸರಕಾರದವರು ತೀವ್ರವಾದ ಎಚ್ಚರವನ್ನು ವಹಿಸಬೇಕೆಂದು ಹೇಳುತ್ತಾ ಇದ್ದೇನೆ. ಆ ಎಚ್ಚರವನ್ನು ವಹಿಸುವುದರಿಂದ ನಮಗೆ ಏನು ತೊಂದರೆಯು ಕಾದಿದೆ ಅದನ್ನು ತಪ್ಪಿಸ ಬಹುದೋ ಏನೋ ಎಂಬ ಒಂದು ಭಾಸವು ನನಗೆ ಆಗುತ್ತಿದೆ. ಕೃಷ್ಣ ಬಗ್ಗೆ ಬಚಾವತ್‌ನ ತೀರ್ಪು 2000 ನೇ ವರ್ಷಕ್ಕೆ ಮುಗಿಯುತ್ತದೆ. ನಾವುಗಳು ಹೋದ ಕಡೆಗಳೆಲ್ಲೆಲ್ಲಾ 2000 ವರ್ಷದೊಳಗಾಗಿ ನಾವು ಎಲ್ಲಾ ಕಾಮಗಾರಿಗಳನ್ನು ಮುಗಿಸುತ್ತೇವೆ. ಅದಕ್ಕೆ ಬೇಕಾದ ಹಣವನ್ನು ಒದಗಿಸುತ್ತೇವೆ ಎಂದು ಹೇಳುತ್ತಿದ್ದೇವೆ. ಆದರೆ ಹಣವನ್ನು ಎಲ್ಲಿಂದ ಒದಗಿಸುತ್ತೀರಿ ಸ್ವಾಮಿ? ಈಗ 1995ರಲ್ಲಿ ಹೋಗುತ್ತಿದ್ದೇವೆ. ಇನ್ನು ಐದು ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲು ಸಾಧ್ಯ? ಬಚಾವತ್ ತೀರ್ಪನ್ನು ನಾವು ಒಪ್ಪುವುದಿಲ್ಲ, ಅದನ್ನು ತಿರಸ್ಕರಿಸಿದ್ದೇವೆ ಎಂದು ಹೀಗೆ ನೇರವಾಗಿ ಹೇಳಿದರೆ ಮಾತ್ರ ಸಾಧ್ಯ. ಇಲ್ಲವಾದರೆ ಕೃಷ್ಣ ವಿಚಾರ ನಮಗೆ ನೇರವಾಗಿ ಹೇಳಬೇಕು. ಕಣ್ಣೀರ ಕಥೆಯಾಗುತ್ತದೆ ಎಂದು ತಮ್ಮಲ್ಲಿ ಸೂಕ್ಷ್ಮವಾಗಿ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆಯು ಸಮಗ್ರವಾಗಿ ಬದಲಾವಣೆಯಾಗಬೇಕು. ಹಿಂದಿನ ರಾಜ್ಯಪಾಲರಾಗಿದ್ದ ಧರ್ಮವೀರ್‌ರವರು ಒಂದು ವರದಿಯನ್ನು ಕೊಟ್ಟಿದ್ದರು. ಮಾನ್ಯ ಮುಖ್ಯಮಂತ್ರಿಯವರು ಗೃಹಸಚಿವರು ಆಗಿದ್ದವರು ಈ ಬಗ್ಗೆ ಈಗಾಗಲೇ ಅನೇಕ ಕೆಲಸಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ನನಗಿನ್ನೂ ಮನಸ್ಸಿಗೆ ಅಷ್ಟೊಂದು ಸಮಾಧಾನವಾಗಿಲ್ಲ. ನಮ್ಮ ಪೋಲೀಸ್ ವ್ಯವಸ್ಥೆ, ಪೋಲೀಸ್ ಸ್ಟೇಶನ್ ವ್ಯವಸ್ಥೆ, ಪೋಲೀಸ್ ನೌಕರ ವರ್ಗಕ್ಕೆ ನಾವುಗಳು ಕೊಡುತ್ತಿರತಕ್ಕಂಥ ಸಹಕಾರ, ಇದರಿಂದ ನನಗೇನೂ ಮನಸ್ಸಿಗೆ ಅಷ್ಟೊಂದು ಸಂತೋಷವಾಗಿಲ್ಲ. ಓಬಿರಾಯನ ಕಾಲದ ಲಾಕ್‌ಅಪ್‌ಗಳು ಇವೆ. ಯಾವುದೋ ಹಳೆಯ ಕಾಲದ ವಿನ್ಯಾಸದ ಲಾಕ್‌ಅಪ್‌ಗಳನ್ನು ಅಲ್ಲಿ ಇಟ್ಟಿದ್ದೀರಿ. ಅ ಪೋಲೀಸ್ ಸ್ಟೇಶನ್‌ಗಳು ಸಾರಾಯಿ ಅಂಗಡಿಗಳ ರೀತಿಯಲ್ಲಿ ಇದೆ. ಆ ಸ್ಟೇಷನ್‌ಗಳಲ್ಲಿ ಒಂದು ಕಡೆ ಹಳೆಯ ಸೈಕಲ್ ಇನ್ನೊಂದು ಕಡೆ ಕಳ್ಳಬಟ್ಟಿ ಹಿಡಿದಿರತಕ್ಕಂಥ ಡಬ್ಬಗಳು, ಯಾವುದೋ ಮೂಲೆಯಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್, ರೈಟರ್ ಹೀಗ ಕುಳಿತುಕೊಳ್ಳುತ್ತಾರೆ. ನಾವು ಅಧುನಿಕಾವಾಗಿ ವ್ಯವಸ್ಥೆ ಮಾಡಬೇಕು. ಪೋಲೀಸರಿಗೆ ಹೊಸದಾಗಿ ಶಸ್ತ್ರಾಸ್ತ್ರಗಳನ್ನು ಏನು ಕೊಟ್ಟಿದ್ದೇವೆ? ನನಗನ್ನಿಸುತ್ತದೆ, ನಿಮ್ಮ ಹಳೆಯ ಮಾದುರಿ ಬಂದೂಕುಗಳು ಏನಿವೆ ಅವುಗಳಿಗೆ ಸ್ಟೇಷನಿನಲ್ಲಿ ಬೀಗ ಹಾಕಿರುತ್ತಾರೆ. ಆ ಬಂದೂಕಿನಿಂದ ಯೂರಿಗಾದರೂ ಹೊಡೆಯಬೇಕೆಂದು ಹೊರಟರೆ ಅವು ಸತ್ತ ಬಂದಕುಗಳು. ಅದನ್ನು ಮ್ಯೂಜಿಯಂನಲ್ಲಿಡಬೇಕು. ಆ ಬೀಗ ಬಿಚ್ಚಿ ಹೊರಗೆ ಬಂದೂಕು ಹಿಡಿದು ಕೊಂಡು ಬರುವ ವೇಳೆಗೆ ಅವರು ಓಡಿಹೋಗಿರುತ್ತಾರೆ, ನಿಮಗೆ ಸಿಗುವುದಿಲ್ಲ. ಪೋಲೀಸ್ ಸ್ಟೇಶನ್ ಎಂದರೆ ಹೊಸ ಕಲ್ಪನೆ

ನಮಗೆ ಬರುವಂತೆ ಪೋಲೀಸ್ ಇಲಾಖೆ ಸಮಗ್ರವಾಗಿ ಬದಲಾವಣೆ ಆಗಲೇಬೇಕು. ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಸಿಬ್ಬಂದಿಗೆ 10 ಕೆಜಿ ರವೆ, 10 ಕೆಜಿ, ಅಕ್ಕಿ, 10 ಕೆಜಿ ಸಕ್ಕರೆ ಕೊಡುತ್ತೇವೆಂದು ಆಗಸ್ಟ್‌ನಲ್ಲಿ ಹೇಳಿದರು. ಇದು ಸೆಪ್ಟೆಂಬರ್ ಅಲ್ಲವೇ, ಆದರೂ ಯಾರಿಗೂ ರವೆ ಅಕ್ಕಿ ಗೋಧಿಯೂ ಇಲ್ಲ, ಸಕ್ಕರೆಯೂ ಇಲ್ಲ. ಪತ್ರಿಕೆಗಳಲ್ಲಿ ಮಾತ್ರ ಪೋಲೀಸರಿಗೆ ಇಂದಿನಿಂದ ತಿಂಗಳಿಗೆ 10 ಕೆಜಿ ಧಾನ್ಯವನ್ನು ಉಚಿತವಾಗಿ ಹಂಚಿಬಿಡುತ್ತೇವೆಂದು ಬಂತು. ಅವರೂ ಪಾಪ ತುಟಿಗಿಟಿ ಚಪ್ಪರಿಸಿಕೊಂಡು ನಮಗೂ 10 ಕೆಜಿ ರವೆ, ಗೋಧಿ, ಸಕ್ಕರೆ ಸಿಗುತ್ತದೆಂದು ಕಾದಿದ್ದಾರೆ. ನಿಜ, ಪೋಲೀಸರನ್ನು ಬೈಯುವ ವ್ಯವಸ್ಥೆ ಒಂದು, ಆದರೆ ಪೋಲಿಸ್ ಸಿಬ್ಬಂದಿಗೆ ನಾವೇನು ಮಾಡಿದ್ದೇವೆ? ಸರ್ಕಲ್ ಇನ್ಸ್‌ಪೆಕ್ಟರಿಂದ ಮೇಲ್ವರ್ಗಕ್ಕೆ ಸ್ವಲ್ಪ ಅನುಕೂಲಗಳಾಗಿವೆ. ಆ ಎಸ್.ಐ.ಇಂದ ಕೊನೇದರ್ಜೆ ಕಾನ್‌ಸ್ಟೇಬಲ್‌ಗಳಿಗೆ ನಾವೇನು ಮಾಡಿದ್ದೇವೆ. 24 ಗಂಟೆ ಚಳುವಳಿ ಆದರೆ 24 ಗಂಟೆಯೂ ಬೆಳಿಗ್ಗೆಯಿಂದ ಸಂಜೆವರೆಗೆ ಇರಬೇಕು. ಬೂಟ್ಸ್ ಬಿಚ್ಚುವುದಕ್ಕೆ ಟೈಮಿರುವುದಿಲ್ಲ, ಮಕ್ಕಳನ್ನು ನೋಡುವುದಕ್ಕೆ ಟೈಮಿರುವುದಿಲ್ಲ. ನಾವು ಅವರಿಗೆ ಏನು ಸಹಕಾರ ಕೊಟ್ಟಿದ್ದೇವೆ? ಎಷ್ಟು ಭತ್ಯ ಕೊಟ್ಟಿದ್ದೇವೆ, ಹೇಳಿ. ಒಂದು ಚೂರು ವ್ಯವಸ್ಥೆ ಮಾಡಿಲ್ಲ. ಬೇರೆ ನೌಕರರು ಮಾತ್ರ 8 ಗಂಟೆ ಕೆಲಸಮಾಡಬೇಕು, ಇವರು 24 ಗಂಟೆ ಕೆಲಸ ಮಾಡುವುದಾದರೆ ಏನೇನು ಅನುಕೂಲ ಬೇಕೋ ಅವನ್ನು ಮಾಡಿ. ಯಾವುದೂ ಮಾಡಿಲ್ಲ. ಓಬಿರಾಯನ ಕಾಲದ ಮನೆಗಳನ್ನು ಅವರಿಗೆ ಕೊಟ್ಟಿದ್ದೀರಿ, ಲೈಟಿಲ್ಲ, ನೀರಿಲ್ಲ, ಕೊಳವೆ ಕೆಟ್ಟುಹೋಗಿ ಎಷ್ಟೋ ದಿವಸವಾಯಿತು. ಆ ಮನೆಗಳು ಒಂದು ರೀತಿ ನರಕ ಇದ್ದಹಾಗಿದೆ. ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಅವರಿಗೆ ವೈದ್ಯಕೀಯ ಸೌಲಭ್ಯ ಕೊಟ್ಟಿದ್ದೀರಾ? ಅವರಿಗೆ ಏನು ಸೌಲಭ್ಯ ಕೊಟ್ಟಿದ್ದೀರಿ ಎಂದು ಈ ಸಭೆ ಮುಂದೆ ಹೇಳಿ. ಸುತ್ತಮುತ್ತ ನಮ್ಮನ್ನು ಕಾಯುತ್ತಾರಲ್ಲ ಬಿಳಿ ಬಟ್ಟೆಹಾಕಿಕೊಂಡು ಅವರೇ ಖಾಕಿ ಬಟ್ಟೆ ಹಾಕುವುದು. ಆ ವರ್ಗದ ಜನಕ್ಕೆ ನಾವೇನು ಕೊಟ್ಟಿದ್ದೇವೆ. ಸರ್ಕಲ್ ಇನ್ಸ್‌ಪೆಕ್ಟರ್ ಆದರೆ ಒಂದು ತರಹ ವ್ಯವಸ್ಥೆ ಇರುತ್ತೆ ಬಿಡಿ. ಇವರು ಏನು ಮಾಡುವುದಕ್ಕಾಗುತ್ತದೆ? ಎಲ್ಲಿಯಾದರೂ ಹೋಗಿ ಒಬ್ಬ ಕಾನ್‌ಸ್ಟೇಬಲ್ ಕಾಫಿ ಕುಡಿದರೆ ಅವನ ಮೇಲೆ ತನಿಖೆಗೆ ಹಾಕಿಬಿಡುತ್ತೀರಿ. ಒಬ್ಬ ಕಾನ್‌ಸ್ಟೇಬಲ್ ಕಾಫಿ ಕುಡಿದರೆ ಹೋಟೆಲ್ ಮಾಲೀಕ ಬಂದು ಹೇಳಿದರೆ ತಕ್ಷಣ ಸಿಒಡಿ ಎಂದು ಬಿಡುತ್ತೀರಿ. ನಿಮ್ಮಲ್ಲಿ ಅನೇಕ ಅಂಗಡಿಗಳು, ಸಿಒಡಿ, ಸಿಐಡಿ ಎಷ್ಟೆಷ್ಟೋ ಮಾಡಿಕೊಂಡಿದ್ದೀರಿ. ನಿಮಗ್ಯಾರಿಗಾದರೂ ಬೇಕಾದರೆ ಖಾಕಿ ಬಟ್ಟೆಗೆ ಕೊಡುತ್ತೀರಿ, ಬೇಡವೇ ಸಿಒಡಿಗೆ ಕೊಡುತ್ತೀರಿ, ಸಿಒಡಿ ಇಲ್ಲವೇ ಲೋಕಾಯುಕ್ತಕ್ಕೆ ಕೊಡುತ್ತೀರಿ. ಇದರಲ್ಲಿ ಮುಖ ನೋಡಿ ಮಣೆ ಹಾಕುತ್ತೀರಿ. ಅವರ ಮುಖ ನೋಡಿ ಎಲ್ಲೆಲ್ಲಿ ಇಡಬೇಕು ಎಂದು ಹೇಳುತ್ತೀರಿ. ಇದು ಹೋಗಬೇಕು. ಅದಿಕಾರಿಗಳನ್ನು ನೇಮಕ ಮಾಡುವಾಗಲೀ, ವರ್ಗ ಮಾಡುವಾಗಲೀ, ಜಾತಿ ಕುಲವಾಗಲೀ ಯಾವುದೂ ಅದಕ್ಕೆ ಅಡ್ಡಬರಬಾರದು . ಆ ಮನುಷ್ಯನ ದಕ್ಷತೆ ಮೇಲೆ ಕ್ರಮಕೈಗೊಳ್ಳಬೇಕು. ಈ ಇಲಾಖೆಯು ನಿಜವಾಗಿ ಅತ್ಯಂತ ಶೋಚನೀಯವಾಗಿದೆ. ಎಷ್ಟು ಸಾರಿ ಈ ಸಭೆಯಲ್ಲಿ ಹೇಳಿದರೂ ಕೂಡ ಇದರ ಬಗ್ಗೆ ಒಂದು ಚಕರಾವನ್ನು ಎತ್ತಿಲ್ಲ. ಈಗ ಪೋಲೀಸ್‌ನವರಿಗೆ ಒಂದು ವರ್ಷಕ್ಕೆ 15 ದಿವಸ ಸಂಬಳಕ್ಕೆ ಬದಲಾಗಿ 30 ದಿವಸ ಸಂಬಳ ಕೊಡಿ, ಅವರಿಗೆ ವಿಶೇಷವಾಗಿ ಸೌಲತ್ತುಗಳನ್ನು ಕೊಡಿ. ಅವರು ನಮಗೆ ರಕ್ಷಣೆ ಕೊಡುತ್ತಾರೆ. ಪೋಲೀಸ್‌ನವರಿಗೆ ವಿಶೇಷ ಕರ್ತವ್ಯ ಇದ್ದಾಗ ಅರ್ಧ ದಿವಸ ಸಂಬಳ ಹೆಚ್ಚಿಗೆ ಕೊಡಿ ಪೋಲೀಸ್ ಸಿಬ್ಬಂದಿ 24

ಗಂಟೆ ಕಾರ್ಯ ನಿರ್ವಹಿಸುತ್ತಾರೆ. ಆದ್ದರಿಂದ ಅವರಿಗೆ ಉಚಿತವಾದ ವೈದ್ಯಕೀಯ ಸೌಲಭ್ಯ ಕೊಡಿ, ಈಗ ಅವರಿಗೆ ಇದ್ಯಾವುದೂ ಇಲ್ಲ. ಅವರು ಇಂದು ನರಕದಲ್ಲಿ ಬದುಕುವ ಹಾಗೆ ಬದುಕುತ್ತಿದ್ದಾರೆ. ಸುಮ್ಮನೆ ಅವರನ್ನು ಬೈದುಕೊಂಡು ತಿರುಗಾಡುವುದು ಒಂದು ವಾದವಾದರೆ ಮತ್ತೊಂದು ವಾದವು ಇದೆ. ಒಂದು ಕಾಲದಲ್ಲಿ ಗೋಲಿಬಾರ್ ಆದರೆ ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಇಲ್ಲಿ ನಡೆಯುತ್ತಿತ್ತು. ಮಧುಗಿರಿ ಪ್ರಕರಣ ನಡೆದಾಗ ಈ ಸದನದಲ್ಲಿ ಮೂರು ದಿನಗಳ ಕಾಲ ನಿರಂತರವಾಗಿ ಚರ್ಚೆ ನಡೆಯಿತು. ಶ್ರೀಮಾನ್ ಶಾಂತವೇರಿ ಗೋಪಾಲಗೌಡರು ಆಗಿನ ಗೃಹ ಮಂತ್ರಿಗಳಾಗಿದ್ದ ಶ್ರೀ ರಾಮರಾಯರಿಗೆ ಹೇಳಿದರು. ''ಮಧುಗಿರಿ ಪ್ರಕರಣದಲ್ಲಿ ಆದಂತೆ ನಿಮ್ಮ ಮನೆಯ ಹೆಂಗಸರ ಮೇಲೆ ಅತ್ಯಾಚಾರ ಆಗಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳಿದರು ಆಗ ಅವರು ನೇರವಾಗಿ ರಾಜೀನಾಮೆ ಕೊಟ್ಟರು. ಅವತ್ತಿನ ಪರಿಸ್ಥಿತಿ ಆ ರೀತಿ ಇತ್ತು. ಆದರೆ ಇವತ್ತು ಗೋಲಿಬಾರ್‌ಗಳಿಗೆ ಲೆಕ್ಕವೇ ಇಲ್ಲ. ಗೋಲೀಬಾರ್ ಮಾಡುತ್ತಾರೆ, ಅದಕ್ಕೆ ರೇಟ್ ಫಿಕ್ಸ್ ಮಾಡಿದ್ದಾರೆ 1.5 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಐದು ಜನ ಸತ್ತರೆ ಐದು ಲಕ್ಷ ರೂಪಾಯಿಗಳು ಹಾಗೂ ಪ್ರಧಾನಿಗಳ ಪರಿಹಾರ ನಿಧಿಯಿಂದ 50,000 ರೂ ಪಾಯಿಗಳನ್ನು ಕೊಡುತ್ತಾರೆ. ಈ ಐದು ಲಕ್ಷ ರೂಪಾಯಿಗಳಿಂದ ಮತ್ತೇ ಅವನ ಜೀವ ಬರುತ್ತದೆಯೇ? ಅವರ ಜೀವದ ಜೊತೆ ಚೆಲ್ಲಾಟ ನಡೆಯುತ್ತಿದೆ. ಇನ್ನು ಲಾಕ್‌ಅಫ್ ಡೆಥ್‌ಗಳಿಗೆ ಲೆಕ್ಕವೇ ಇಲ್ಲ. ಮೊದಲು ಮುನಿಯಮ್ಮನ ಪ್ರಕರಣ ವೈಯ್ಯಾಲಿ ಕಾವಲ್‌ನಲ್ಲಿ ಪೋಲೀಸ್ ಠಾಣೆಯಲ್ಲಿ ನಡೆದಾಗ ಈ ಸದನದಲ್ಲಿ ಒಂದು ವಾರ ಚರ್ಚೆ ನಡೆಯಿತು. ಇವತ್ತು ಲಾಕ್‌ಅಪ್ ಸಾವುಗಳನ್ನು ಯಾರು ಗಮನಿಸುತ್ತಾರೋ ಕಾಣುತ್ತಿಲ್ಲ. ಅವನು ಲಾಕಪ್‌ನಲ್ಲಿ ಸತ್ತಿಲ್ಲ, ಅವನಿಗೆ ಚಳಿ, ಜ್ವರ ಬಂದಿದ್ದು ರಿಕ್ಷಾದಲ್ಲಿ ವಿಕ್ಟೋರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗುವುದರೊಳಗೆ ರಸ್ತೆಯಲ್ಲಿ ಸತ್ತುಹೋದ ಎಂದು ಹೇಳುತ್ತಾರೆ. ಈ ಇಲಾಖೆಗೆ ಒಂದು ದಕ್ಷತೆ, ಪ್ರಾಮಾಣಿಕತೆ ಇರಬೇಕು. ಬರೀ ತಿರುಚಿ- ಮುರುಚಿ ಒಂದು ವರದಿಯನ್ನು ತಯಾರು ಮಾಡತಕ್ಕದ್ದು ನಿಲ್ಲಬೇಕು.ಅದಕ್ಕೆ ಬದಲಾಗಿ ನೇರವಾಗಿ ಲಾಕ್‌ಪ್‌ನಲ್ಲಿ ಸಾವು ಆಗಿದೆ, ನಾವು ಅವನನ್ನು ಹೊರಗಡೆ ಇಡಬೇಕು ಎಂಬ ಪ್ರಾಮಾಣಿಕ ಚಿಂತನೆ ಪೋಲೀಸ್ ಇಲಾಖೆಯಲ್ಲಿ ಬರಬೇಕು. ಇಲಾಖೆಯಲ್ಲಿ ಒಳ್ಳೊಳೆಯ ಅಧಿಕಾರಿಗಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ. ಬೆಂಗಳೂರು ನಗರದಲ್ಲಿ ಯಾಗಲೀ ಅಥವಾ ಬೇರೆ ಕಡೆಗಳೆಲ್ಲಿ ಯಾಗಲೀ ಇವತ್ತು ದರೋಡೆಗಳು, ಚೈನು ಕೀಳತಕ್ಕದ್ದು ಪ್ರತಿದಿನ ನಡೆಯುತ್ತಿವೆ. ಪತ್ರಿಕೆಗಳಲ್ಲಿ ಪ್ರತಿದಿನವು ಇವು ಬರುತ್ತಿರುತ್ತದೆ. ಪತ್ರಿಕಾಕರ್ತರು ಇಂತಹ ಕಡೆ ಇಂತಹ ಚೈನು ಕಿತ್ತುಕೊಂಡು ಹೋದರು. ಇನ್ನೊಂದು ಕಡೆ ಸೈಕಲ್ ಕಿತ್ತುಕೊಂಡು ಹೋದರು ಎಂದಲ್ಲಾ ಪ್ರತಿದಿನ ವರದಿ ಮಾಡುತ್ತಿರುತ್ತಾರೆ. ಆದರೆ ಕಣ್ಣಿಗೆ ಕಾಣದೇ ಇರತಕ್ಕಂಥ ಇನ್ನೂ ಎಷ್ಟೋ ಪ್ರಕರಣಗಳು ಇವೆ. ಆದ್ದರಿಂದ ಈ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಸರಿಪಡಿಸಬೇಕು ಎಂದು ನಾನು ಈ ಸದನದಲ್ಲಿ ಕೇಳುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇನ್ನು ವೀರಪ್ಪನ್ ಹೆಸರು ಹೇಳಿದರೆ ನಿಮಗೆ ಹಾಸ್ಯವಾಗಬಹುದು. ಆದರೆ ನಾನು ಮತ್ತೆ ಮತ್ತೇ ಹೇಳಲೆಬೇಕಾಗಿದೆ. ವೀರಪ್ಪನ್ ಹಿಡಿಯುವುದರ ಬಗ್ಗೆ ನಿಮ್ಮ ಎಲ್ಲಾ ಶಕ್ತಿ ವಿಫಲವಾಗಿದೆ. ಕೇಂದ್ರದಿಂದ ಬಂದಂಥ ಭದ್ರತಾ ಪಡೆಯ ಕೊನೆಯ ತುಕಡಿ ಸಹ ಇವತ್ತು

ಹೊರಟುಹೋಯಿತು. ಈಗ ಮಾನ್ಯ ಮುಖ್ಯಮಂತ್ರಿಗಳು ಕೆಲವು ಕಡೆ ಹೇಳಿದ್ದಾರೆ. ಅತನ ಜೊತೆಯಲ್ಲಿ ಇರತಕ್ಕವರು 8 ಜನ ಮಾತ್ರ ಮಿಕ್ಕವರನ್ನೆಲ್ಲಾ ನಾವು ಹಿಡಿದಿದ್ದೇವೆಂದು ಹೇಳಿದ್ದಾರೆ. ಅದು ಹೇಗೆ ಗೊತ್ತಾಯಿತು ಇವರಿಗೆ? ಐವತ್ತುಕ್ಕೂ ಹೆಚ್ಚು ಜನ ಹಿಡಿದಿದ್ದೇವೆ ಎಂದೆಲ್ಲಾ ಹೇಳುತ್ತಾರೆ, ವೀರಪ್ಪನನ್ನು ಸಹ ಹಿಡಿಯುತ್ತೇವೆ ಎಂದು ಹೇಳುತ್ತಾರೆ, ಈಗ ಚುನಾವಣೆ ಹತ್ತಿರ ಬಂದಿದೆ. ಇನ್ನು ಮೂರು ದಿವಸ ಈ ಸದನ ನಡೆಯುತ್ತಿದೆ. ಆಮೇಲೆ ನಾವು ಯಾರನ್ನು ಕೇಳೋಣ. ಶ್ರೀ ವೀರೇಂದ್ರಪಾಟೀಲರು ಅದಿಕಾರದಲ್ಲಿದ್ದಾಗ ಇನ್ನು ಒಂದು ವಾರದಲ್ಲಿ ವೀರಪ್ಪನನ್ನು ಹಿಡಿಯುತ್ತೇವೆ ಎಂದು ಹೇಳಿದರು. ತಾವು ಕಡತವನ್ನು ಬೇಕಾದರೆ ತರಿಸಿ ನೋಡಿ. ಶ್ರೀಮಾನ್ ಬಸವಲಿಂಗಪ್ಪನವರು ಆರಣ್ಯ ಸಚಿವರಾಗಿದ್ದಾಗ ಇನ್ನು ಎರಡು ದಿವಸದಲ್ಲಿ ಹಿಡಿಯುತ್ತೇವೆ ಎಂದು ಹೇಳಿದರು. ಶ್ರೀ ಧರ್ಮಸಿಂಗ್ ಅದರೂಸಹ ಅವನನ್ನು ತಕ್ಷಣದಲ್ಲಿ ಹಿಡಿಯುತ್ತೇವೆ ಎಂದು ಹೇಳಿದರು.

ಅಧ್ಯಕ್ಷರು :- ಯಾರನ್ನು ಹಿಡಿಯುವುದು?

ಶ್ರೀ ವಾಟಾಳ್ ನಾಗರಾಜ್ :- ವೀರಪ್ಪನನ್ನು ಹಿಡಿಯುವುದು. ಈಗ- ಒಂದು ಕಥೆ ಹೇಳುತ್ತಿದ್ದಾರೆ, ಅವನೇ ಬಂದು ಶರಣಾಗುತ್ತಾನೆಂದು ಮತ್ತೆ ಅವನನ್ನು ಹಿಡಿಯಲು ಹೋಗಿ ಏನಾದರೂ ಹೆಚ್ಚು ಕಡಿಮೆಯಾಗದಂತೆ ನೋಡಿಕೊಳ್ಳಿ. ಒಳ್ಳೊಳ್ಳೆಯ ಅಧಿಕಾರಿಗಳು, ಈಗಾಗಲೇ ಅವನಿಂದ ಮೃತಪಟ್ಟಿದ್ದಾರೆ. ಹರೀಕೃಷ್ಣ ಒಬ್ಬ ಒಳ್ಳೆಯ ಅಧಿಕಾರಿಯಾಗಿದ್ದರು. ಅವರೂ ಸಹ ಅವನಿಂದ ಮ್ರುತಪಟ್ಟರು. ಅವರ ಅತ್ಮಕ್ಕೆ ಈ ಸಂದರ್ಭದಲ್ಲಿ ಶಾಂತಿಯನ್ನು ಕೋರುತ್ತೇನೆ. ಅವರು ನಿಜವಾದ ಧೈರ್ಯಸ್ಥೈರ್ಯದಿಂದ ಹೋದರು. ಶ್ರೀ ವಿಶ್ವನಾಥರವರು ಅರಣ್ಯ ಮಂತ್ರಿಗಳಾದ ಮೇಲೆ ಗುಂಡು ನಿರೋಧಕ ಕಾರನ್ನು ತೆಗೆದುಕೊಂಡು ಅವರನ್ನು ನೋಡಿಕೊಂಡು ಬರಲು ಹೋದರು. ಕಾಡಿನ ಬುಡಕ್ಕೆ ಹೋಗಿ ಬಂದುಬಿಟ್ಟರು. ಅವರಿಗೆ ರಕ್ಷಣೆ ಕೊಡವುದಕ್ಕೆ ಅರಣ್ಯ ಇಲಾಖೆಯವರು ನೂರು ಜನರು, ಪೋಲೀಸ್‌ನವರು ನೂರು ಜನರು ಹಿಂದೆ ಮುಂದೆ ಹೋದರು. ಇದು ಎಲ್ಲಿಯಾದರೂ ಉಂಟೆ? ನೀವು ಹೇಳಿ ಸ್ವಾಮಿ. ನಮ್ಮ ಕೈಯಲ್ಲಿ ಹಿಡಿಯುವುದಕ್ಕಾಗುವುದಿಲ್ಲ ಎಂದು ಧಾರಾಳವಾಗಿ ಹೇಳಿಬಿಟ್ಟರೆ ನಾವೂ ಕೂಡ ಸುಮ್ಮನೆ ಇರಬಹುದು. ಸುಮ್ಮನೆ ಜನಗಳ ಮುಂದೆ ನಾಲ್ಕುಮುಕ್ಕಾಲು ವರ್ಷದಿಂದ ಒಂದೇ ಸಮನೆ ನೀವು ಹೇಳಿಕೊಂಡು ಬಂದಿದ್ದೀರಿ. ಇದು ನಿಜವಾಗಲೂ ನಿಮಗೆ ಗೌರವ ತರತಕ್ಕಂಥದ್ದಲ್ಲ. ಆದ್ದರಿಂದ ಗೌರವ ತರತಕ್ಕಂಥ ಕೆಲಸವನ್ನು ತಾವು ಮಾಡಬೇಕು ಎಂದು ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮತ್ತೆ ಆಸ್ಪತ್ರೆಗಳ ಬಗ್ಗೆ ಶ್ರೀಮಾನ್ ಸಿಂಧ್ಯಾರವರು ನಿಜವಾಗಿಯೂ ಚೆನ್ನಾಗಿ ಹೇಳಿದರು. ಯಾವ ಆಸ್ಪತ್ರೆಗೂ ಬೇಡ, ಕೆ.ಆರ್. ಆಸ್ಪತ್ರೆಗೆ ಸ್ವಲ್ಪ ಹೋಗಿ. ನಮ್ಮ ಮೈಸೂರಿನ ಕೆ.ಆರ್ ಆಸ್ಪತ್ರೆಯಿದೆಯಲ್ಲ ಅಲ್ಲಿಗೆ ಹೋದರೆ ಏನು ಬೇಕಾಗಿಲ್ಲ. ಸಾಮಾನ್ಯ ರೋಗಿಗಳು ಇದ್ದಾರಲ್ಲಾ ಅಲ್ಲಿ ಒಳಗಡೆ ಹೋಗಿ ನೀವು ಅಲ್ಲಿಗೆ ಹೋಗಿ ಹೊರಗೆ ಬಂದ ತಕ್ಷಣ ನಿಮಗೇ ರೋಗ ಬರುತ್ತದೆ ಸ್ವಾಮಿ. ಆಸ್ಪತ್ರೆಯ ಒಳಗಡೆ ಹೋಗಿ ನೀವು ಹೊರಗಡೆ ಬಂದರೆ ನೀವೇ ಬೇರೆ ಆಸ್ಪತ್ರೆಗೆ ಸೇರಬೇಕು. ಈ ವ್ಯವಸ್ಥೆಯಿಂದ ನಮ್ಮ ಸರ್ಕಾರಿ ಆಸ್ಪತ್ರೆಗಳು ನರಕ ಅನುಭವಿಸುತ್ತಿವೆ. ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಖಂಡಿತವಾಗಿಯೂ ಆಗಿಲ್ಲ. ನಮ್ಮ ಆರೋಗ್ಯ ಇಲಾಖೆಯನ್ನು ಹರಿದು

ಹಂಚಿ ಒಬ್ಬರು ಆರೋಗ್ಯ ಶಿಕ್ಷಣ, ಒಬ್ಬರು ಕುಟುಂಬ ಯೋಜನೆ, ಒಬ್ಬರು ಕಲ್ಯಾಣ- ಹೀಗೆ ಎಲ್ಲಾ ಹರಿದು ಮೂರು - ನಾಲ್ಕು ಹಂಚಿಕೆ ಮಾಡಿಬಿಟ್ಟಿದ್ದಾರೆ. ಯಾರು ಯಾರಿಗೆ ಮಾಡಬೇಕು ಎಂದು ಒಬ್ಬರಿಗೂ ಗೊತ್ತಿಲ್ಲ. ಈ ಪರಿಸ್ಥಿತಿಯಾಗಿ ಆಸ್ಪತ್ರೆಗಳು ಸಂಪೂರ್ಣವಾಗಿ ನರಕವಾಗಿದೆ. ಇದರ ಜೊತೆಗೆ ಸಂಜಯ ಗಾಂಧಿ ಆಸ್ಪತ್ರೆಗೆ ಒಳ್ಳೆಯ ಹೆಸರನ್ನು ಇಟ್ಟು ಸಂಜಯಗಾಂದಿಯವರ ಹೆಸರಿನಲ್ಲಿ ಸ್ಥಾಪನೆಯಾದಂಥ ಆಸ್ಪತ್ರೆ ಏನಿದೆ ಅಲ್ಲಿ ನಡೆಯುವಂಥ ನರಕ, ಅಲ್ಲಿ ಆಗತಕ್ಕಂಥ ಅನ್ಯಾಯಗಳನ್ನು ನೀವು ನೋಡಬೇಕು. ಬಹಳ ತೀವ್ರವಾಗಿ ಒಂದು ರೀತಿಯ ಆಘಾತವೇ, ಒಂದು ಹಗರಣವೇ ಅಲ್ಲಿ ನಡೆದುಹೋಗಿದೆ. ಆದ್ದರಿಂದ ಸಮಗ್ರವಾಗಿ ಸಂಜಯಗಾಂಧಿ ಆಸ್ಪತ್ರೆಗೆ ಇಡೀ ಸರ್ಕಾರ ಅಲ್ಲಿಗೆ ಒಂದು ಸಮಿತಿಯನ್ನು ನೇಮಕ ಮಾಡಿ ಒಂದು ವಾರದಲ್ಲಿ ವರದಿ ತರಿಸಿ ಅಲ್ಲಿ ಆಗಿರುವ ಅನ್ಯಾಯಗಳ ಬಗ್ಗೆ ಕೇಂದ್ರಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ಯಾವ ಉದ್ದೇಶದಿಂದ ಸಂಜಯಗಾಂಧಿಯವರ ಹೆಸರನ್ನು ಇಟ್ಟು ನಾವು ಆಸ್ಪತ್ರೆಯನ್ನು ಮಾಡಿದ್ದೇವೊ ಆ ಉದ್ದೇಶಕ್ಕೆ ಭಂಗ ಬಂದಿದೆ. ಆ ಉದ್ದೇಶವನ್ನು ಸರಿಪಡಿಸಬೇಕು ಎನ್ನುವ ಮಾತನ್ನು ತಮ್ಮ ಮೂಲಕ ನಾನು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತಿದ್ದೇನೆ. ಇದರ ಜೊತೆಯಲ್ಲಿ ನಮ್ಮ ದೂರದರ್ಶನ ಬಗ್ಗೆ ತಮ್ಮ ಮೂಲಕ ನಾನು ಕೇಂದ್ರ ಮನವಿ ಮಾಡುತ್ತಿದ್ದೇನೆ. ಬೆಂಗಳೂರು ದೂರದರ್ಶನ ನಮಗೆ ಬೇಕು. ಪಾರ್ಲಿಮೆಂಟನ ಲೋಕಸಭೆಯಲ್ಲಿ ಲೋಕಸಭೆಯನ್ನು ನೇರವಾಗಿ ದೂರದರ್ಶನದ ಮೂಲಕ ಇಡೀ ದೇಶದ ಜನರಿಗೆ ತೋರಿಸುರುತ್ತಾರೆ. ಹಿಂದೆ ಇದ್ದಂಥ ಅಧ್ಯಕ್ಷರೂ ಈ ಸಭೆಯಲ್ಲೂ ಸಹ ಆ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಅವರ ಕಲ್ಪನೆ ಮತ್ತು ಚಿಂತನೆ ಇತ್ತು. ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ತಾವು ಸಾಧ್ಯವಾದರೆ ಲೋಕಸಭೆಯ ಅಧ್ಯಕ್ಷರ ಜೊತೆಯಲ್ಲಿ ಮಾತುಕತೆಯಾಡಿ ದೂರದರ್ಶನದ ಮೂಲಕ ನಮ್ಮ ಈ ಕಲಾಪಗಳೂ ಸಹ ಪ್ರಚಾರವಾಗತಕ್ಕಂಥ ವ್ಯವಸ್ಥೆಯನ್ನು ಇಲ್ಲೂ ನಾವು ಮಾಡೇಕು. ನಮ್ಮ ದೂರದರ್ಶನ ಯಾರಿಗೋಸ್ಕರ ಇರತಕ್ಕಂಥದ್ದು? ಕನ್ನಡಿಗರಿಗೋಸ್ಕರವೇ? ಯಾರಿಗೋಸ್ಕರ ಇರತಕ್ಕಂಥದ್ದು ದೂರದರ್ಶನದಲ್ಲಿ ಬರತಕ್ಕಂಥಾದ್ದು ಕಳಪೆಯ ಕಾರ್ಯಕ್ರಮಗಳು ಸರಿಯಾದ ವ್ಯವಸ್ಥೆ ಇಲ್ಲ ಅಲ್ಲಿ ಕನ್ನಡಿಗರು ಕೆಲಸದಲ್ಲಿಯೇ ಇಲ್ಲ. ಎಲ್ಲೋ ಅಲ್ಪ ಸ್ವಲ್ಪ ಒಬ್ಬಿಬ್ಬರು ಇದ್ದಾರೆ. ಅಲ್ಲಿ ಬರುವ ದಾರವಾಹಿಗಳು ಕೆಟ್ಟ ದಾರವಾಹಿಗಳು. ಆ ದಾರವಾಹಿಗಳನ್ನು ಯಾರು ಮಾಡುತ್ತಾರೋ ಏನು ಕಥೆಯೋ? ಪ್ರತಿದಿನ ಅದನ್ನು ನೋಡಿದರೆ ಇಡೀ ಮನೆ ಮಂದಿಯೆಲ್ಲಾ ಕೆಟ್ಟುಹೋಗಬೇಕು. ಅಂಥ ದಾರವಾಹಿಗಳು ನಮಗೆ ಇವತ್ತು ಬರುತ್ತಿವೆ.

ಶ್ರೀ ಬಿ.ಎಂ. ಇದಿನಬ್ಬ : ಅಲ್ಲಿ ಬರತಕ್ಕ ದಾರವಾಹಿಗಳಲ್ಲಿ ನೈತಿಕ ಮಟ್ಟ ಇಲ್ಲ. ಪೂರ ಅನೈತಿಕವಾದಂತಹ ವಿಚಾರಗಳು. ಅದನ್ನು ನಿಲ್ಲಿಸಿದ್ದರೆ ಮಾತ್ರ ಏನಾದರೂ ಕರ್ನಾಟಕಕ್ಕೆ ಒಳ್ಳೆಯದಾಗುತ್ತದೆ. ಮತ್ತು ಕೆಲವು ಕನ್ನಡಿಗರು ಮಾತನಾಡುತ್ತಾರೆ. ಅವರಿಗೆ ಸರಿಯಾಗಿ ಕನ್ನಡ ಮಾತನಾಡುವುದಕ್ಕೇ ತಿಳಿಯುವುದಿಲ್ಲ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ನಮಗೆ ಬೇರೇ ಯಾವುದೇ ವೇದಿಕೆ ಸಿಗದೇ ಇರುವುದರಿಂದಾಗಿ ಹೇಳುತ್ತಿದ್ದೇವೆ. ಏಕೆಂದರೆ ಕೇಂದ್ರಸರ್ಕಾರಕ್ಕೆ ಪತ್ರಗಳನ್ನು ಬರೆದು ಅವರ ಗಮನಕ್ಕೆ ತಂದು ಮಂತ್ರಿಗಳಿಗೆ ಬರೆಯುವುದರಿಂದ ನಾವೇನೂ ಮಾಡುವುದಕ್ಕೆ

ಆಗುವುದಿಲ್ಲ. ಸರ್ಕಾರದವರು ಮತ್ತು ತಾವು ಇದರ ಕಡೆಗೆ ಗಮನಕೊಟ್ಟರೆ ಈ ಸಮಸ್ಯೆಗೆ ಏನಾದರೂ ಪರಿಹಾರ ಕಂಡು ಹಿಡಿಯಬಹುದೆಂದು ನಾನು ಅಂದು ಕೊಂಡಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಮತ್ತು ಶಾಸಕರಾದ ಇದಿನಬ್ಬರವರು ಹೇಳಿದಂತೆ ನಿಜವಾಗಿಯೂ ದೂರದರ್ಶನದಲ್ಲಿ ಬರುತ್ತಿರತಕ್ಕಂಥ ಕನ್ನಡದ ಕಾರ್ಯಕ್ರಮಗಳು ಬರೀ ಕಳಪೆ ಮಟ್ಟದ್ದು ಅಷ್ಟೇ ಅಲ್ಲ, ಬಹಳ ಅಶ್ಲೀಲವಾಗಿರುತ್ತದೆ. ಕುಟುಂಬದ ಸದಸ್ಯರುಗಳ ಜೊತೆಯಲ್ಲಿ, ಮಕ್ಕಳುಗಳ ಜೊತೆಯಲ್ಲಿ, ಸ್ನೇಹಿತರುಗಳ ಜೊತೆಯಲ್ಲಿ ಕುಳಿತುಕೊಂಡು ನೋಡುವುದಕ್ಕೆ ಆಗುವುದಿಲ್ಲ. ಆ ಸಂಬಾಷಣೆಗಳನ್ನು ಕೇಳುವುದಕ್ಕೆ ಸಹ ಆಗುವುದಿಲ್ಲ. ತಾವು ಬೇಕಾದರೆ ಒಂದು ದಿವಸ ನೋಡಿ. ಎಷ್ಟು ಒಳ್ಳೊಳ್ಳೆಯ ಕಾರ್ಯಕ್ರಮಗಳು ಬೇರೆ ಬೇರೆ ಭಾಷೆಯಲ್ಲಿ ಬರುತ್ತವೆ. ಮತ್ತು ಇವತ್ತಿನ ದಿವಸ ಬೇರೆ ಬೇರೆ ಛಾನಲ್‌ಗಳು ಇವೆ ಆ ಛಾನಲ್‌ಗಳಲ್ಲಿ ಒಳ್ಳೆಯ ಕಾರ್ಯಕ್ರಮಗಳು ಬರುವಾಗ ನಮ್ಮ ಈ ದೂರದರ್ಶನದಲ್ಲಿ ಏಕೆ ಈ ರೀತಿ ಮಾಡುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ. ನಮ್ಮ ಅಭಿಪ್ರಾಯಗಳನ್ನು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇದರ ಬಗ್ಗೆ ನಾವು ಹಿಂದೆ ಒಂದು ಸಾರಿ ಪ್ರಸ್ತಾಪ ಮಾಡಿದ್ದೇವೆ. ನಾವು ಇದುವರೆಗೂ ಆದ್ಯತೆ ಕೊಡುವುದಿಲ್ಲ ಎಂದು ಒತ್ತಾಯ ಮಾಡುತ್ತಿದ್ದೆವು. ಈಗ ಆದ್ಯತೆಯನ್ನು ಅಲ್ಪ ಸ್ವಲ್ಪ ಕೊಟ್ಟರೂ ಸಹ ತೀರಾ ಅಶ್ಲೀಲವಾಗಿರತಕ್ಕದ್ದು. ತೀರಾ ಕಳಪೆ ಇರತಕ್ಕದ್ದು, ಯಾರೂ ನೋಡಲು ಅಸಹ್ಯವಾಗಿರತಕ್ಕದ್ದು ಇರುತ್ತದೆ. ಅದರಲ್ಲಿ ಅರ್ಥವೇನೂ ಇರುವುದಿಲ್ಲ. ಮನರಂಜನೆ ಸಹ ಇರುವುದಿಲ್ಲ. ಬಹಳ ಕೆಳಮಟ್ಟದ ಮನರಂಜನೆಯನ್ನು ಅನೇಕ ಸಂದರ್ಭಗಳಲ್ಲಿ ತೋರಿಸುತ್ತಾರೆ. ಇದರ ಬಗ್ಗೆ ನಮಗೆ ಬಹಳ ಕಳಕಳಿ ಇದೆ. ಇದನ್ನು ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದವರು ತಿಳಿಸಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಏನು ಆಗಿದೆ ಇಲ್ಲಿ ಎಂದರೆ ತಮಗೆ ಗೊತ್ತಿರುವ ಹಾಗೆ ರಾಜ್ಯಪಾಲರ ಭಾಷಣ ಇಲ್ಲಿ ಬರುತ್ತದೆ. ಮತ್ತು ಮಾನ್ಯ ಮುಖ್ಯಮಂತ್ರಿಗಳಾಗಲೀ ಅಥವಾ ಮಾನ್ಯ ಹಣಕಾಸಿನ ಸಚಿವರುಗಳಲ್ಲಿ ಆಯವ್ಯಯವನ್ನು ಮಂಡಿಸುತ್ತಾರೆ. ಸುದ್ದಿಯನ್ನು ನೋಡಬೇಕು. ತಮಿಳುನಾಡಿನದ್ದು, ಆಂಧ್ರದ್ದು ಕೇರಳದ್ದು ಬೇರೆ ರಾಜ್ಯದ್ದು ಇಂಗ್ಲೀಷ್-ಹಿಂದಿ ಸುದ್ದಿಯಲ್ಲಿ ಬರುತ್ತದೆ. ನಮ್ಮದು ಕರ್ನಾಟಕದ ಸುದ್ದಿಯಲ್ಲಿ ಮಾತ್ರ ಹೇಳಿ ಕೈತೊಳೆದುಕೊಂಡು ಬಿಡುತ್ತಾರೆ. ಇದಕ್ಕೆ ಕಾರಣ ಏನು? ಯಾವ ಉದ್ದೇಶದಿಂದ ಈ ರೀತಿ ಕೊಡುತ್ತಾರೆ ಈ ಸುದ್ದಿ ಎಲ್ಲಾ ಕಡೆ ಬರಬೇಕು. ದೇಶದ ಎಲ್ಲ ಭಾಷೆಗಳಲ್ಲಿ ಮುಖ್ಯಮಂತ್ರಿಗಳಾಗಲೀ ಅಥವಾ ಹಣಕಾಸಿನ ಸಚಿವರಾಗಲಿ ಇಲ್ಲಿ ಮಂಡಿಸಿದಂತಹ ಆಯವ್ಯಯ ಸಂಪೂರ್ಣವಾಗಿ ಬರಬೇಕು. ಮತ್ತು ತಮಿಳುನಾಡಿನಲ್ಲಿ ಏನು ಆಗಿದೆಯೆಂದರೆ ಹಿಂದಿಯನ್ನು ತೆಗೆದಿದ್ದಾರೆ. ಸಂಪೂರ್ಣವಾಗಿ ತಮಿಳುಸುದ್ದಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಈಗ ನಮಗೆ ಬರತಕ್ಕ 7.30 ರ ಸುದ್ದಿಯಲ್ಲಿ ಕರ್ನಾಟಕದ್ದು ಒಂದು ಭಾಗ, 99 ಭಾಗ ದೆಹಲಿಯದು ಬರುತ್ತದೆ. ಅವರ ಮಂತ್ರಿಗಳು ಬಂದರು, ನೇಪಾಳದ ಮಂತ್ರಿಗಳು ಬಂದರು, ಇದರಿಂದ ಬಂದರು, ಅದರಿಂದ ಬಂದರು ಎಂದುತೋರಿಸುತ್ತಾರೆಯೇ ಹೊರತು ಕನ್ನಡದ ಬಗ್ಗೆ ಗಂಧವೇ ಇಲ್ಲ. ಕನ್ನಡದ್ದು ಒಂದೇ ಒಂದು ಭಾಗ ಮಾತ್ರ ಬರುತ್ತದೆ. ಆದ್ದರಿಂದ ಈ ಬಗ್ಗೆ ನಾನು ಹೇಳುತ್ತೇನೆ. ಬೆಳಗಿನ ಪ್ರಸಾರ ಸಹ ನಾವು ಪರಿಣಾಮಕಾರಿಯಾಗಿ ಮಾಡಬೇಕು. ಮಾನ್ಯ ಅಧ್ಯಕ್ಷರೇ, ಕೆಲವು ಸಂದರ್ಶನಗಳು ಬರುತ್ತವೆ. ಅವು ಕೆಲವರಿಗೇ ಗುತ್ತಿಗೆ. ನೀವೇ

ಸಂದರ್ಶಕರು, ನಿಮ್ಮನ್ನು ಕೇಳಬೇಕು, ಬೆಳಗ್ಗೆಯಿಂದ ಸಂಜೆಯವರೆಗೆ. ಸಂದರ್ಶನ ಮಾಡುವವರು ಕೆಲವರು, ಸಂದರ್ಶನಕ್ಕೆ ಕೆಲವು. ನಾವು ಸಹ 35 ವರ್ಷಗಳಿಂದ ಹೋರಾಟ ಮಾಡಿದೆವು. ಒಬ್ಬನಾದರೂ ಸಂದರ್ಶನ ಮಾಡಲಿಲ್ಲ ತಿಮ್ಮಪ್ಪನವರೆ. ಆದ್ದರಿಂದ ಇಲ್ಲಿ ಬೆಂಗಳೂರು ದೂರದರ್ಶನದ ಸಮಗ್ರ ವ್ಯವಸ್ಥೆ ಆಗಬೇಕು. ಈ ಬಗ್ಗೆ ತಮ್ಮ ಮೂಲಕ ಕೇಂದ್ರ ಸರ್ಕಾರವನ್ನು ನಾವು ಪ್ರಾಮಾಣಿಕವಾಗಿ ಕೇಳಬೇಕಾಗಿದೆ. ನಾಡು ನುಡಿ ಸಂಸ್ಕೃತಿಯ ಇತಿಹಾಸದ ಕಲ್ಪನೆಯೇ ಅವರಿಗೇ ಇಲ್ಲ. ಮತ್ತು ಅರ್ಥ ಇಲ್ಲದ ಕಾರ್ಯಕ್ರಮಗಳು ಪ್ರಸಾರಗಳು ಹೆಚ್ಚು ಆಗುತ್ತಿವೆ. ಭ್ರಷ್ಟಾಚಾರ, ಪಕ್ಷಪಾತ ಸುಮ್ಮನೇ ಒಂದು ಕಡೆಯಿಂದ ನಿರಂತರವಾಗಿ ತುಂಬಿದೆ. ಇದಕ್ಕೆ ಸರಿಯಾದ ವ್ಯವಸ್ಥೆ ಆಗಲೇಬೇಕಾಗುತ್ತದೆ. ರಾಜ್ಯ ಪ್ರಶಸ್ತಿ ಮತ್ತು ಯಾರಾದರೂ ಬಂದರೆ ಅವರದ್ದು ತಿರುಚಿ ಕೊಡತಕ್ಕಂತಹ ಅನೇಕ ಸಮಸ್ಯೆಗಳು ನಿರ್ಮಾಣ ಆಗುತ್ತಿವೆ. ಆದ್ದರಿಂದ ದೂರದರ್ಶನದ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ತಮಗೆ ಹೇಳುತ್ತೇನೆ, ನನ್ನ ವರದಿಯಲ್ಲಿ ನಾನೇನೂ ಬರೆದಿಲ್ಲ. ದೂರದರ್ಶನದ ವ್ಯವಸ್ಥೆ ಸಮಗ್ರವಾಗಿ ಆಗಬೇಕು ಎಂದು ಸಮಿತಿಯ ವರದಿಯಲ್ಲಿ ಬರೆದರೆ, ದೂರದರ್ಶನದವರು ನನ್ನ ಮೇಲೆ ಮುನಿಸಿಕೊಂಡು ಬಿಟ್ಟರು. ಏನು ನಮ್ಮ ಬಗ್ಗೆ ವರದಿಯಲ್ಲಿ ಬರೆಯುವುದು ಎಂದರೆ ಏನು? ಈ ತರಹ ಆಗಬಾರದು. ಒಂದು ಪ್ರಾಮಾಣಿಕತೆ ಇರಬೇಕು. ಒಂದು ಚಿಂತನೆ ಇರಬೇಕು. ಇದರ ಬಗ್ಗೆ ದೂರದರ್ಶನದ ವಿರುದ್ಧ ಇಡೀ ರಾಜ್ಯದ್ಯಂತ ನಾವು ತೀವ್ರವಾಗಿ ಹೋರಾಟ ಮಾಡುತ್ತೇವೆ.

2.00 ಪಿ.ಎಂ

ಮತ್ತು ಕೇಂದ್ರ ಸರ್ಕಾರದಲ್ಲಿರುವ ಶ್ರೀ ಕೆ.ಪಿ. ಸಿಂಗ್‌ದೇವ್ ಅವರಿಗೆ ಈ ಮಾತನ್ನು ಹೇಳುತ್ತೇನೆ. ಹಾಗೆಯೇ ತಮಗೆ ಸೇರಿದಂಥ ಇಲಾಖೆಯಲ್ಲಿ ಕನ್ನಡ ಬೆರಳಚ್ಚುಗಾರರಿಗೆ ಕಡ್ಡಾಯ ಮಾಡಿರುವ ಇಂಗ್ಲೀಷ್ ಬೆರಳಚ್ಚು ಬೇಡ, ದಯವಿಟ್ಟು ಈ ಕಡ್ಡಾಯವನ್ನು ತೆಗೆದು ಹಾಕಿ ಕನ್ನಡ ಬೆರಳಚ್ಚುಗಾರರಿಗೆ ಭಡ್ತಿ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಲೋಕಸೇವಾ ಆಯೋಗದಲ್ಲಿ 'ಸಿ' ದರ್ಜೆ ಹುದ್ದೆಯ ಪರೀಕ್ಷೆಯಲ್ಲಿ ಒಂದು ಉತ್ತರ ಪತ್ರಿಕೆಯನ್ನು ಇಂಗ್ಲೀಷ್‌ನಲ್ಲಿ ಬರೆಯಬೇಕೆಂದು ನಿಯಮ ಮಾಡಿ ಇಡೀ ರಾಜ್ಯದ ಜನರಿಗೆ ತೊಂದರೆ ಕೊಟ್ಟಿದ್ದೀರಿ, ಏಕೆ ಸ್ವಾಮಿ? ರಾಜ್ಯದ ಆಡಳಿತ ಭಾಷೆ ಕನ್ನಡ ಆಗಿರುವಾಗ ಸಿ ಗುಂಪಿನ ಹುದ್ದೆಯ ಪರೀಕ್ಷೆಯಲ್ಲಿ ಇಂಗ್ಲೀಷ್‌ನಲ್ಲಿ ಉತ್ತರ ಪತ್ರಿಕೆ ಬರೆಯುತಕ್ಕಂಥ ವ್ಯವಸ್ಥೆ ಬೇಕಾಗಿಲ್ಲ. ಈ ಕುರಿತು ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಹೇಳಿಕೆ ಕೊಡುತ್ತಾ, ಇದಕ್ಕೊಂದು ಸಮಿತಿ ನೇಮಕ ಮಾಡಲಾಗುವುದೆಂದು ತಿಳಿಸಿದ್ದಾರೆ. ಈ ಸಮಿತಿ ತನ್ನ ವರದಿ ಕೊಡುವುದಾದರೂ ಯಾವಾಗ? ಆದುದರಿಂದ, ಸರ್ಕಾರ – **'ಕನ್ನಡ'** ವನ್ನು ಆಡಳಿತ ಭಾಷೆಯಾಗಿ ಒಪ್ಪಿಕೊಂಡಿರುವಾಗ 'ಸಿ' ದರ್ಜೆ ಹುದ್ದೆಯ ಪರೀಕ್ಷೆಯಲ್ಲಿ ಇಂಗ್ಲೀಷ್ ಪತ್ರಿಕೆ ಕಡ್ಡಾಯ ಮಾಡುವುದು ಬೇಡವೆನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನದ ಕಲಾಪವನ್ನು ಮುಂದೂಡಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರುವುದು.

(ಸಭೆಯು ಪುನಃ 3.30 ಗಂಟೆಗೆ ಸಮಾವೇಶಗೊಂಡಿತು. ವಿಧಾನಸಭಾ ಉಪಾಧ್ಯಕ್ಷರಾದ ಶ್ರೀ ಅಂಜನಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

ವಿಮಾನ ನಿಲ್ದಾಣದಲ್ಲಿ ಮಹಾಪೌರರಿಗೆ ಆದ ಅಗೌರವ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಿನ್ನೆ ವಿಮಾನ ನಿಲ್ದಾಣದಲ್ಲಿ ನೇಪಾಳದ ಯುವ ರಾಜರು ಬಂದಾಗ ಬೆಂಗಳೂರು ನಗರದ ಮಹಾಪೌರರನ್ನು ತಡೆದು ಒಂದು ರೀತಿಯ ಅಗೌರವವನ್ನು ಭದ್ರತಾ ಸಿಬ್ಬಂದಿಯವರು ತೋರಿಸಿದ್ದಾರೆ. ಈ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು.

ಉಪಾಧ್ಯಕ್ಷರು : ಮಾನ್ಯ ಚಂದ್ರೇಗೌಡರು ಎಲ್ಲಿ ಹೋದರು?

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಹೇಳಿದೆ. ಇದರ ಬಗ್ಗೆ ....

ಉಪಾಧ್ಯಕ್ಷರು : ಕಡತ ಬರುವ ಪ್ರಕಾರ ಏನು ಆಗಿದೆ ನೋಡೋಣ ....

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ನಗರದ ಜನತೆಗೆ ಅಗೌರವ ಆಗಿದೆ. ಬೆಂಗಳೂರು ನಗರದ ಮಹಾ ಪೌರರನ್ನು ಒಂದು ಮೈಲಿಯವರೆಗೆ ತಡೆದು ಅವರು ಕಾಲು ನಡಿಗೆಯಲ್ಲಿ ಬರುವಂತೆ ಮಾಡಿರುವುದು ಅಗೌರವ ಆಗಿದೆ. ಇದರ ಬಗ್ಗೆ ಸರ್ಕಾರ ಏನಾದರೂ ಹೇಳಬೇಕಲ್ಲ. ಇದರ ಬಗ್ಗೆ ಯಾರು ಹೇಳುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ : ಪತ್ರಿಕೆಯಲ್ಲಿಯೂ ಈ ವಿಚಾರ ಬಂದಿದೆ. ಬೆಂಗಳೂರಿನ ಮಹಾಪೌರರಿಗೆ ವಿಮಾನ ನಿಲ್ದಾಣದಲ್ಲಿ ಏನು ಮರ್ಯಾದೆ ಕೊಡಬೇಕಾಗಿತ್ತು ಅದನ್ನು ಕೊಡಲಿಲ್ಲ ಎನ್ನತಕ್ಕ ವಿಷಯ ನಮ್ಮ ಗಮನಕ್ಕೂ ಬಂದಿದೆ. ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಹಾ-ಪೌರರಿಗೆ ಆಗಿರತಕ್ಕ ಈ ಒಂದು ಅಗೌರಕ್ಕೆ ಸರ್ಕಾರದ ಪರವಾಗಿ ನಾನು ವಿಶಾದವನ್ನು ವ್ಯಕ್ತಪಡಿಸುತ್ತೇನೆ.

ಉಪಾಧ್ಯಕ್ಷರು : ಚಂದ್ರೇಗೌಡರೇ, ತಾವು ಮಾತನಾಡುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಸೋಮವಾರ ಮಾತನಾಡುತ್ತೇನೆ.

ಬೇಡಿಕೆಗಳ ಮೇಲಿನ ಚರ್ಚೆಗೆ ಸಚಿವರಿಂದ ಉತ್ತರ

*ಶ್ರೀ ಎಸ್.ಎಂ. ಯಾಹ್ಯ (ಉನ್ನತ ಶಿಕ್ಷಣ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷರೇ, ಈ ವರ್ಷದ ಬಜೆಟ್‌ನಲ್ಲಿ ಯಾವ ರೀತಿ ಚರ್ಚೆಯಾಯಿತು ಎಂದರೆ ಅದರಲ್ಲಿ ಹೊಸದಾಗಿ ವಿಷಯ ಸಮಿತಿಗಳ ಪದ್ಧತಿಯನ್ನು ಮಾಡಿ ಈ ಬಜೆಟ್ ಮೇಲೆ ಬಹಳಷ್ಟು ವಿಚಾರಗಳು ಚರ್ಚೆಯಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ಹೊಸದಾಗಿ ತಿರುವನ್ನು ಕೊಡಬೇಕು, ಶಿಕ್ಷಣದಲ್ಲಿ ಬದಲಾವಣೆಯಾಗುತ್ತಿರುವ ಈ ಕಾಲದಲ್ಲಿ ಸಮಾಜಕ್ಕೆ ಮತ್ತು ದೇಶಕ್ಕೆ ಉತ್ತಮವಾಗಬೇಕು. ಅಭಿವೃದ್ಧಿಯಾಗಬೇಕು ಅದಕ್ಕಾಗಿ ಎಲಿಮೆಂಟರಿ ಶಿಕ್ಷಣವನ್ನು ಯಾವ ರೀತಿ ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯಾಗುತ್ತಿದೆ ಅದರ ಪ್ರಕಾರ ಕೊಡಬೇಕೆಂದು ಏನು ನೀತಿ ಇದೆ ಈ ನೀತಿಯ ಪ್ರಕಾರ ನಮ್ಮ ಇಲಾಖೆಯವರು ಹಲವಾರು ಸಾದನೆಗಳನ್ನು ಸಹ ಮಾಡಿದ್ದಾರೆ. ನಾವು ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು, ಸಮಾಜಕ್ಕೆ ಅನುಕೂಲವಾಗಬೇಕು ಎನ್ನತಕ್ಕ ದೃಷ್ಟಿಯಿಂದ ಈ ವರ್ಷ ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಮುಖ್ಯವಾಗಿ globalisation of economy ಆಗುವಾಗ ಇಡೀ ಅಂತರಾಷ್ಟ್ರೀಯ ವ್ಯಾಪಾರ ಮತ್ತು ಆಮದು ರಫ್ತುಗಳಿಗೆ ಸಂಬಂಧಪಟ್ಟ ಮೇನೇಜ್‌ಮೆಂಟ್ ಕೋಸ್‌ಗಳನ್ನು ಮಾಡಬೇಕೆಂದು ಬಿಬಿಎಂ ಮತ್ತು ಎಂಬಿಎ ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಅದೇ ರೀತಿ ಕಂಪ್ಯುಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ವಿಚಾರದಲ್ಲಿ ಬಿ.ಎಸ್.ಸಿ ಕೋರ್ಸ್‌ಗಳನ್ನು ಸಹ ಹೊಸದಾಗಿ ಮಾಡಿದ್ದೇವೆ. ಹಾಗೆಯೆ ಹೋಟೆಲ್ ಮೆನೇಜ್‌ಮೆಂಟ್‌ನ್ನು ಹಲವಾರು ಕಾಲೇಜುಗಳಲ್ಲಿ ಕೊಟ್ಟು ಇದರಿಂದ ವಿದ್ಯಾರ್ಥಿಗಳಿಗೆ ಜಾಬ್ ಓರಿಯೆಂಟೆಡ್ ಎಜ್ಯುಕೇಷನನ್ನು ಕೊಡಬೇಕೆಂದು ನಾವು ಬಹಳ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಿದ್ದೇವೆ. ಈ ರೀತಿ ನಮ್ಮ ಇಲಾಖೆಯಿಂದ ಇದುವರೆಗೆ ರಿಲವೆಂಟ್ ಎಜ್ಯುಕೇಷನ್ ಮತ್ತು ಪರ್‌ಪಸ್ ಫುಲ್‌ಎಜ್ಯುಕೇಷನ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಾಗತಕ್ಕ ಈ ದಿಸೆಯಲ್ಲಿ ಇಂಥ ವಿದ್ಯೆಯಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಬೇಕು ಮತ್ತು ದೇಶಕ್ಕೂ, ಸಮಾಜಕ್ಕೂ ಪ್ರಯೋಜನವಾಗಬೇಕೆಂದು ಹಲವಾರು ಕಾರ್ಯಕ್ರಮಗಳನ್ನು ಇಟ್ಟಿದ್ದೇವೆ. ನಮ್ಮ ಯೂನಿವರ್ಸಿಟಿಗಳು ಅಕ್ಯಾಡಮಿಕ್ ಅಟ್‌ಮಾಸ್‌ಫಿಯರನ್ನು ಉಂಟು ಮಾಡಿ ಅಲ್ಲಿ ಸಂಪೂರ್ಣವಾದ ಶಿಸ್ತನ್ನು ಮತ್ತು ಎಲ್ಲ ರೀತಿಯ ಪ್ರಗತಿಯನ್ನೂ ಸಹ ನಾವು ಸಾಧಿಸಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕವಾದ ಬದಲಾವಣೆಯೇನೆಂದರೆ, ಯಾವುದೇ ವಿದ್ಯಾರ್ಥಿಗಾಗಲಿ, ಯಾವ ಜನರಿಗೆಯೇ ಆಗಲಿ ಬಹಳಷ್ಟು ಕಾರಣದಿಂದ ವಿದ್ಯೆ ಅಥವಾ ಡಿಗ್ರಿಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲವೋ ಅಂಥವರಿಗೆ ಈ ವರ್ಷ ಡಾ : ಬಿ.ಆರ್. ಅಂಬೇಡ್ಕರ್‌ರವರ ಹೆಸರಿನಲ್ಲಿ ಒಂದು ಓಪನ್ ಯೂನಿವರ್ಸಿಟಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದಕ್ಕೆ ಸರ್ಕಾರ ನಿರ್ಣಯ ಮಾಡಿರಲಿಲ್ಲ. ಆದರೆ ಅದರ ಬಗ್ಗೆ ಒಂದು ಬಿಲ್ಲನ್ನು ತಂದು ಮೊನ್ನೆ ಅದು ಪಾಸ್ ಕೂಡ ಆಗಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಒಂದು ರೀತಿಯ ರ್‍ಯಾಡಿಕಲ್ ಮತ್ತು ರೆವಲ್ಯುಷನರಿ ಸ್ಟೆಪ್ ಆಗಿರುತ್ತದೆ. ಇದರಿಂದ ಉನ್ನತ ಶಿಕ್ಷಣ ಯಾರಿಗೆ ದೊರಕಲಿಲ್ಲವೋ ಅವರಿಗೆ ದೊರಕಲು ಸಾಧ್ಯವಾಗುತ್ತದೆ. ಅದಕ್ಕಾಗಿ ಆ ಬಿಲ್ಲನ್ನು ಇಲ್ಲಿ ಪಾಸ್ ಮಾಡಿದ್ದೇವೆ. ಸೋಮವಾರ ಆ ಬಿಲ್ಲನ್ನು ವಿಧಾನ ಪರಿಷತ್‌ನಲ್ಲಿ ಪಾಸ್ ಮಾಡಿ ಜಾರಿಗೆ ತರುತ್ತೇವೆ. ಇದಕ್ಕಾಗಿ ಬಜೆಟ್‌ನಲ್ಲಿ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅದೇ ರೀತಿ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳನ್ನು

ಸೇರಿಸಿಕೊಂಡು ತಾಂತ್ರಿಕ ಯುನಿವರ್ಸಿಟಿಯನ್ನು ಮಾಡತಕ್ಕ ಮಸೂದೆ ಸೋಮವಾರ ಈ ಸದನಕ್ಕೆ ಬರುತ್ತದ. ಅದು ಈ ವರ್ಷವೇ ಆಗಬೇಕೆಂದು, ಅದಕ್ಕಾಗಿ ಹತ್ತು ಲಕ್ಷ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಇಟ್ಟಿದ್ದೇವೆ. ಕರ್ನಾಟಕದಲ್ಲಿ ಮತ್ತು ಇಡೀ ದೇಶಕ್ಕೆ ತಾಂತ್ರಿಕ ಶಿಕ್ಷಣದಲ್ಲಿ ಸುಪ್ರಸಿದ್ಧರಾಗಿದ್ದ ಡಾ : ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಇದಕ್ಕೆ ಇಡುತ್ತಿದ್ದೇವೆ. ಅದೇ ರೀತಿ ಬಡ ವಿದ್ಯಾರ್ಥಿಗಳಿಗೆ ನಮ್ಮಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಪ್ರೊಫೆಷನಲ್ ಕಾಲೇಜುಗಳಿಗೆ ಹೆಚ್ಚು ಹೆಚ್ಚು ಹಣವು ಬೇಕಾಗಿರುವುದರಿಂದ ಹೆಚ್ಚು ಫೀಸ್ ಬೇಕಾಗಿರುವುದರಿಂದ the government is contemplating to set up a company to finance poor students for professional courses. ತತ್ವಶಃ ಸರ್ಕಾರ ಅದನ್ನು ಒಪ್ಪಿಕೊಂಡು ಅದರಿಂದ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡತಕ್ಕದ್ದು ಒಂದು ಕಡೆ, ಎರಡನೆಯದಾಗಿ, ಅಂಥ ಶಿಕ್ಷಣ ಸಂಸ್ಥೆಗಳೇನಿವೆ ಅವರಿಗೆ ಕನ್‌ಸ್ಟ್ರಕ್ಷನ್‌ಗಾಗಲೀ, ಲ್ಯಾಬೋರೇಟರಿಗಳನ್ನು ಪ್ರಾರಂಭ ಮಾಡುವುದಕ್ಕಾಗಲಿ ಹಣವನ್ನು ಸಾಲ ಕೊಡತಕ್ಕಂಥ ಕಾರ್ಯಕ್ರಮವಿದೆ. ಇದಕ್ಕೆ 300 ಕೋಟಿ ರೂಪಾಯಿಗಳನ್ನು ತೊಡಗ್ಗಿಸತಕ್ಕ ಒಂದು ಕಂಪನಿಯನ್ನು ಮಾಡಿ ಈ ರೀತಿಯಲ್ಲಿ ಪ್ರೊಫೆಷನ್ ಕಾಲೇಜುಗಳಿಗೆ ಸಹಾಯ ಮಾಡಬೇಕೆನ್ನುವ ಕಾರ್ಯವನ್ನು ಸರ್ಕಾರ ಮಾಡಿದೆ. ಅದೇ ರೀತಿಯಲ್ಲಿ ಕಾಲೇಜಿನ ಕಟ್ಟಡಗಳು, ಅದು ಕಾರ್ಯಪ್ರವೃತ್ತಿಯಲ್ಲಿ ಬರುವ ಅಥವಾ ಹೊಸದಾಗಿ ಕಟ್ಟಡವನ್ನು ಮಾಡುವುದಿರಬಹುದು, ಇದಕ್ಕಾಗಿ ಎರಡೂವರೆ ಕೋಟಿ ರೂಪಾಯಿಗಳನ್ನಿಟ್ಟಿದ್ದೇವೆ. ಸರ್ಕಾರದ 137 ಕಾಲೇಜುಗಳಲ್ಲಿ 70 ಕಾಲೇಜುಗಳಿಗೆ ಕಟ್ಟಡದ ಕೆಲಸ ನಡೆಯುತ್ತಿದೆ. ಅದಲ್ಲದೆ ಹೊಸದಾಗಿ ಈ ವರ್ಷದ ಬಜೆಟ್‌ನಲ್ಲಿ ಹಳೆಯ ಕಾಲೇಜುಗಳ ರಿಪೇರಿಗಾಗಿ ಒಂದು ಕೋಟಿ ರೂಪಾಯಿಗಳನ್ನಿಟ್ಟಿದ್ದೇವೆ. ಈ ರೀತಿ ರಿಪೇರಿಗಾಗಿ ಹಣವನ್ನಿಟ್ಟಿರುವುದು ಇದೇ ಮೊದಲ ಬಾರಿ. Prestigious old colleges are there and they have to be either repaired or brought into new shape for which in the budget we have again kept about Rs.1 Crore. ಇನ್ನು ಲೆಕ್ಚರರ್‌ರ ಬಗ್ಗೆ ಹೇಳುವುದಾದರೆ, 757 ಲೆಕ್ಚರರ್ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿಗೆ ಕೊಟ್ಟು, ಯಾರ್‍ಯಾರು ಎನ್‌ಇಟಿ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ ಅವರಿಗೆ ಅಕಾಡೆಮಿಕ್ ಸ್ಟ್ಯಾಂಡರ್ಡ್ ಚೆನ್ನಾಗಿರಬೇಕು, ಟೀಚಿಂಗ್ ಸ್ಟ್ಯಾಂಡರ್ಡ್ ಚೆನ್ನಾಗಿರಬೇಕು. ಟೀಚರ್ಸ್ ಪಾತ್ರ ಉತ್ತಮವಾಗಬೇಕು. ಎಂದು ಎನ್.ಇ.ಟಿ, ಮತ್ತು ಎಂ.ಎ.ಯಲ್ಲಿ ಓದಿದವರಿಗೆ 757 ಹುದ್ದೆಗಳನ್ನು ಖಾಯಂ ಮಾಡಲು ಪಿ.ಎಸ್.ಸಿ.ಗೆ ಈಗ ತಾನೇ ಹೋಗಿದೆ.

ಶ್ರೀ ಸಿ. ಭೈರೇಗೌಡ :- ಮಾನ್ಯ ಉನ್ನತ ಶಿಕ್ಷಣ ಸಚಿವರ ಇಲಾಖೆಯ ಬೇಡಿಕೆಗೆ ಸಂಬಂಧಪಟ್ಟ, ಹಾಗೆ ಇಲ್ಲಿ ಯಾರೂ ಮಾತನಾಡಲೇ ಇಲ್ಲ, ಚರ್ಚೆಯೂ ಆಗಲಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ : ಅವರು ಪಬ್ಲಿಸಿಟಿ ಕೊಡಬೇಕೆಂದು ಹೇಳಿದರಲ್ಲಾ, ಒಳ್ಳೆಯ ಕಾರ್ಯ ಮಾಡಿದ್ದೀರಿ, ತಾವು ಹೇಳಬೇಕಲ್ಲಾ?

ಶ್ರೀ ಸಿ. ಭೈರೇಗೌಡ : - ನಿಮ್ಮ ವಿಚಾರವನ್ನು ಯಾರೂ ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ.

ಉಪಾಧ್ಯಕ್ಷರು :-ಹಾಗಾದರೆ, ಅವರು ಹೇಳುವುದು ಬೇಡವೆಂದು ಹೇಳುತ್ತೀರಾ?

ಶ್ರೀ ಸಿ. ಭೈರೇಗೌಡ : - ಅವರು ಎದ್ದು ಹೇಳುತ್ತಿದ್ದಾರೆ. ಬಹುಶಃ ವಿಷಯ ಸಮಿತಿಯ ವರದಿ ಅವರಿಗೆ ಬಂತೋ? ಇಲ್ಲವೋ? ನಮಗೆ ಗೊತ್ತಿಲ್ಲ. ಸಮಿತಿಯ ವರದಿಯ ಬಗ್ಗೆ ಹೊಸ ಸೂಚನೆಗಳನ್ನು ಕೊಟ್ಟಿದ್ದರೆ.......

ಶ್ರೀ ಎಸ್.ಎಂ.ಯಾಹ್ಯಾ :- ಈಗ ಅದನ್ನೇ ಹೇಳುತ್ತಿದ್ದೇನೆ. ಹುದ್ದೆಗಳ ಬಗ್ಗೆ, ವರದಿಯಲ್ಲಿ ಇದೆ, ಆ ವರದಿಯ ಪ್ರಕಾರ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಇದೆ ಎಂದು ಹೇಳುತ್ತಿದ್ದೇನೆ. 2ನೆಯದು, ವರದಿಯಲ್ಲಿ ಸ್ಟಾಪ್ ಗ್ಯಾಪ್ ಟೀಚರ್ಸ್ ಬಗ್ಗೆ ಹೇಳಿದೆ.

ಶ್ರೀ ಸಿ. ಭೈರೇಗೌಡ : ನಾನು ತಮ್ಮಲ್ಲಿ ನಿನ್ನೆ ಅರಿಕೆ ಮಾಡಿಕೊಂಡಿದ್ದೇನೆ. ಈಗ ಒಂದು ಹೊಸ ವ್ಯವಸ್ಥೆಯನ್ನು ನಾವು ಜಾರಿಗೆ ತರುತ್ತಿದ್ದೇವೆ. ಇವತ್ತು ಕಾಲದ ಪರಿಮಿತಿಗೆ ಸಿಕ್ಕಿ ಚರ್ಚೆ ಇಲ್ಲದೆ ಬೇಡಿಕೆಗಳನ್ನು ಮಂಜೂರು ಮಾಡುವಂತಹ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಏಕೆಂದರೆ, 7ನೆ ತಾರೀಖು ಸಭೆ ಮುಕ್ತಾಯವಾಗುತ್ತದೆ. ಆದ ಕಾರಣ ವಿವರವಾಗಿ ಚರ್ಚೆ ಮಾಡುವುದಕ್ಕೆ ಕೂಡ ಅವಕಾಶ ವಿಲ್ಲದಂಥಹ ರೀತಿಯಲ್ಲಿ ಪರಿಸ್ಥಿತಿ ಉಂಟಾಗಿ ನಾವು ಚರ್ಚೆ ಇಲ್ಲದೆ ಬೇಡಿಕೆಗಳನ್ನು ಮುಗಿಸಬೇಕಾಗಿದೆ.

ಶ್ರೀ ಎಸ್.ಎನ್. ಯಾಹ್ಯಾ :-ನಾನು ವರದಿಯ ವಿಚಾರವನ್ನೇ ಹೇಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ :- ನನ್ನ ಪ್ರಕಾರ ಇದು ಸರಿಯಲ್ಲ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ತಾವು ನಿನ್ನೆ ಎಲ್ಲಾ ಮಾತನಾಡಿದ್ದೀರಿ. ಅಬ್ಕಾರಿ ಇಲಾಖೆಗೆ ಸಂಬಂಧ ವಿಷಯ ಸಮಿತಿಯಲ್ಲಿ ತಾವು ಸದಸ್ಯರೂ ಆಗಿದ್ದೀರಿ. ಮಾನ್ಯ ರಂಗನಾಥ್‌ರವರು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಸಮಿತಿಯ ವಿಚಾರವನ್ನು ಬಿಟ್ಟು ಬೇರೆ ಮಾತನಾಡಿ ಎಂದು ಹೇಳಿದರು. ಆದರೂ ತಾವು ಅದರ ಬಗ್ಗೆಯೇ ಸುಮಾರು ಹೊತ್ತು ಮಾತನಾಡಿದ್ದೀರಿ. ನಿನ್ನೆ ಇದರ ಬಗ್ಗೆ ಮಾತನಾಡಬಹುದಾಗಿತ್ತು, ಮಾತನಾಡಿದ್ದರೆ ಈಗ ಅದಕ್ಕೆ ಉತ್ತರ ಸಿಕ್ಕುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ :- ಒಂದು ಪ್ರಶ್ನೆ ಉನ್ನತ ಶಿಕ್ಷಣ ಸಚಿವರ ಇಲಾಖೆಯ ಬಗ್ಗೆ ಯಾರೊಬ್ಬರೂ ಚಕಾರವೆತ್ತಲಿಲ್ಲ.

ಉಪಾಧ್ಯಕ್ಷರು :- ವಾಟಾಳ್ ನಾಗರಾಜ್‌ರವರೇ, ತಾವು ನಿನ್ನೆ ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ನಾನು ಇಲ್ಲ ಎನ್ನುವುದಿಲ್ಲ. ಇವತ್ತು ಮಾನ್ಯ ಸದಸ್ಯರುಗಳು ಅನೇಕ ಜನರು ಬಂದಿಲ್ಲ. ಇವತ್ತು ಶನಿವಾರ. ಮಂತ್ರಿಗಳು ಬಿಟ್ಟರೆ ನಾವು 5-6 ಜನರು ಹೊರಗೆ ಹೋದರೆ ಕೋರಂ ಅಭಾವ ಆಗುತ್ತದೆ. ಅದಕ್ಕೆ ನಿಮ್ಮ ಜೊತೆಯಲ್ಲಿದ್ದೇವೆ.

ಉಪಾಧ್ಯಕ್ಷರು : ಈಗ ಅದರ ಪ್ರಶ್ನೆಯಲ್ಲ, ಕೋರಂ ಇದೆಯ, ಇಲ್ಲವೊ, ಅಷ್ಟು ಹೇಳಿ. ಶನಿವಾರ ಸಭೆ ಇದೆ ಎಂಬುದು ಗೊತ್ತಿದ್ದು ಬರುವುದು, ಬರುವುದು ಅವರಿಗೆ ಸೇರಿದ್ದುದು.

ಶ್ರೀ ವಾಟಾಳ್ ನಾಗರಾಜ್ :- ಸಭೆ ನಡೆಯುವುದು 7ನೆ ತಾರೀಖು ಕೊನೆಯ ದಿನ. ಕೊನೆಯ ಗಳಿಗೆಯಲ್ಲಿ ಶನಿವಾರ ಸಭೆಯೆಂದು ತೀರ್ಮಾನವಾಯಿತು. ಮಾನ್ಯ ಸದಸ್ಯರುಗಳು ಅವರವರ ಕ್ಷೇತ್ರದಲ್ಲಿ, ಸಭೆ, ಸಮಾರಂಭಗಳನ್ನು, ಪ್ರವಾಸಗಳನ್ನು ಇಟ್ಟುಕೊಂಡಿರುತ್ತಾರೆ. ಆದುದರಿಂದ, ಆ ಕಡೆ, ಈ ಕಡೆಯ ಸದಸ್ಯರುಗಳು ಬರುವುದಕ್ಕೆ ಆಗಿಲ್ಲ. ಈ ನಿಮ್ಮ ದಂಡಿ-ದಂಡಿ ಬೇಡಿಕೆಗಳನ್ನು ಕೊಟ್ಟು ನೀವು ಉತ್ತರ ಕೊಡಿ ಎಂದರೆ ಅವರಿಗೆ ಮನಸ್ಸಿಗೆ ನೋವಾಗುತ್ತದೆ. ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯ ಬಗ್ಗೆ ಯಾರೂ ಮಾತನಾಡಲಿಲ್ಲ, ಆದರೂ ನಿಂತುಕೊಂಡು ಮಾತನಾಡಬೇಕಲ್ಲ ಎಂಬ ಮುಜುಗರವೂ ಅಲ್ಲಿ ಇದೆ.

ಉಪಾಧ್ಯಕ್ಷರು :- ತಾವು ನಿನ್ನೆ ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಮಾನ್ಯ ಭೈರೇಗೌಡರು ಭಾಗವಹಿಸಿದ್ದರು. ಈಗ ಉನ್ನತ ಶಿಕ್ಷಣ ಸಚಿವರು ಏನು ರಿಪ್ಲೈ ಕೊಡುತ್ತಿದ್ದಾರೆ ಅದನ್ನು ಸದನಕ್ಕೆ ಕೊಡಲಿ. ಚರ್ಚೆಯಲ್ಲಿ ನೀವು ಮಾತನಾಡಬೇಡಿ ಎಂದು ಯಾರೂ ಹೇಳಲಿಲ್ಲವಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನಾವು ಸತ್ತ ಕುದುರೆಯನ್ನು ಹೇರಿಕೊಂಡು ಹೋಗುತ್ತಿದ್ದೇವೆ. ಅದರಲ್ಲಿ ಏನೂ ಆಗಿಲ್ಲ. ಕುದುರೆ ಕೆಳಕ್ಕೆ ಬಿದ್ದು ಹೋಗಿದೆ. ಅದರ ಮೇಲೆ ಹೇರಿಕೊಂಡು ಹೋಗುತ್ತಿದ್ದೇವೆ. ಇದು ಸರಿಯಲ್ಲ ಆದುದರಿಂದ ತಮಗೆ ಹೇಳುತ್ತಿದ್ದೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಚೆನ್ನಾಗಿ ಮಾತನಾಡಿದ್ದೀರಿ.

ಶ್ರೀ ಧರ್ಮಸಿಂಗ್ : ಕಲಾಪ ಸಲಹಾ ಸಮಿತಿಯಲ್ಲಿ ಒತ್ತಾಯ ಪೂರ್ವಕವಾಗಿ ಹೇಳಿದ್ದೀರಿ. ಶನಿವಾರದ ದಿವಸ ಸಭೆ ಸೇರಿ ಚರ್ಚೆಯಾಗಬೇಕೆಂಬುದು ತಮ್ಮದೇ ಒತ್ತಾಯ. ತಾವೇ ಹೇಳಿದ್ದುದು, ಅದರ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ತಮ್ಮೆಲ್ಲರ ಪರವಾಗಿ ದೀರ್ಘಕಾಲ ಚೆನ್ನಾಗಿ ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಂದಾಯ ಸಚಿವರಿಗೆ ಸ್ವಲ್ಪ ಜ್ಞಾಪಿಸುತ್ತೇನೆ. ನನ್ನ ಪಕ್ಕದಲ್ಲಿ ಶ್ರೀ ಭೈರೇಗೌಡರು ಕುಳಿತಿದ್ದರು. ಅವರು ಶನಿವಾರ ಬೇಕೆಂದು ಹೇಳಿದ್ದುದು. ಅದನ್ನು ನೀವು ನಾನು ಹೇಳಿದ್ದುದು ಎಂದು ತಿಳಿದುಕೊಂಡಿದ್ದೀರಿ. ಆದುದರಿಂದ ದಯಮಾಡಿ ಇರುವುದು 3 ದಿವಸ. ಈ ಮೂರು ದಿವಸಗಳಲ್ಲಾದರೂ ಪರಿಣಾಮಕಾರಿಯಾಗಿ ಚರ್ಚೆ ಆಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಉಪಾಧ್ಯಕ್ಷರೇ, ತಾವು ಇದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು : ತಾವು ನಿನ್ನೆಯಿಂದ ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಆಗ ಮಾತನಾಡಬೇಕಾಗಿತ್ತು. ಈಗ ಸಚಿವರು ಏನು ಹೇಳುತ್ತಿದ್ದಾರೆ ಅದನ್ನು ಮುಗಿಸಲಿ. ಸಚಿವರೆ ತಾವು ಮುಂದುವರೆಸಿ, ಸದನಕ್ಕೆ ಬರುವವರನ್ನು ಬೇಡವೆಂದು ಹೇಳಲಿಲ್ಲ, ಅದು ಅವರ ಕರ್ತವ್ಯ, ಅವರು ಬರಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ :- ನಾನು ಹೇಳುವುದು ನಿಜ, ನಾನು ಒಪ್ಪಕೊಳ್ಳುತ್ತೇನೆ. ಈಗ ನಮ್ಮ ಕಡೆಯೂ ಇಲ್ಲ, ತಮ್ಮ ಕಡೆಯೂ ಸಹ ಬಹಳ ಜನ ಮಾತನಾಡುವವರು ಇದ್ದಾರೆ.

ಉಪಾಧ್ಯಕ್ಷರು :- ಈಗ ಪ್ರಶ್ನೆ ಇರುವುದು ಕೋರಂ ಇದೆಯೇ ಇಲ್ಲವೇ ಎನ್ನುವುದು.

ಶ್ರೀ ವಾಟಾಳ್ ನಾಗರಾಜ್ :- ಈಗ ನಿವೇನೋ ಹಾಳೂರಿಗೆ ಉಳಿದವರೆ ಗೌಡರು ಎಂದು. ನೀವು ನಮ್ಮ ಮನವಿಯನ್ನು ಪುರಸ್ಕರಿಸಲ್ಲಿಲ್ಲ.

ಶ್ರೀ ಎಸ್. ಎಂ. ಯಾಹ್ಯ: ಮಾನ್ಯ ಉಪಾಧ್ಯಕ್ಷರೆ, ಈಗ ಈ ವರದಿಯಲ್ಲಿ ಒಂದು ಕೋಟಿ ರೂಪಾಯಿ ಯಾವ ರಿಪೇರಿಗೆ ಇಟ್ಟಿದ್ದಾರೆ, ನೀವೂ ಸಹ ಅದರ ಬಗ್ಗೆ ಅಭಿನಂದನೆ ಮಾಡಿದ್ದೀರಿ. ಅದೇ ರೀತಿಯಲ್ಲಿ ನಮ್ಮ ಖಾಲಿ ಹುದ್ದೆಗಳನ್ನೂ ಸಹ ನಾವು ಭರ್ತಿ ಮಾಡುತ್ತಿದ್ದೇವೆ. ಇದುವರೆಗೆ ಸ್ಟಾಪ್ ಗ್ಯಾಪ್ ಲೆಕ್ಚರರ್ಸ್ ಗೆ 450 ಕ್ಕಿಂತಲೂ ಹೆಚ್ಚು ಜನರಿಗೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ ಆಧಾರದ ಮೇಲೆ ಮಾಡಿಕೊಟ್ಟಿದ್ದೇವೆ. ಇನ್ನು ಯಾರಿಗೆ ಕೊಡುವುದ್ದಕ್ಕೆ ಆಗಲಿಲ್ಲ ಅವರಿಗೆ ಸಂಪೂರ್ಣವಾದ ವೇತನ ಕೊಡಲು ತೀರ್ಮಾನಿಸಿದೆ. ಹೊಸಬರು ಬಂದು ಅಲ್ಲಿ ಖಾಯಂ ಆಗುವವರೆಗೆ ಸ್ಟಾಪ್ ಗ್ಯಾಪ್ ಅರೇಂಜ್‌ಮೆಂಟ್‌ನಲ್ಲಿ ಯಾರಿಗೆ ಸುಪ್ರೀಂ ಕೋರ್ಟ್‌ನ ಡೈರೆಕ್ಷನ್ ಮೇಲೆ ಕೊಡುವುದಕ್ಕೆ ಆಗುವುದಿಲ್ಲವೋ ಅವರಿಗೆ ಸಂಪೂರ್ಣವಾದ ವೇತನ ಕೊಡುವ ರೀತಿಯಲ್ಲಿ ಸರ್ಕಾರ ತೀರ್ಮಾನ ಮಾಡಿದೆ. ಅದಕ್ಕೆ ನಾಲ್ಕೂವರೆ ಕೋಟಿ ರೂಪಾಯಿ ಸಹ ಅಡಿಷನಲ್ ಫೈನಾನ್ಸ್ ಬರ್ಡನ್ ಸರ್ಕಾರಕ್ಕೆ ಆಗುತ್ತದೆ. ಅದೇ ರೀತಿ ಪಾರ್ಟ್‌ಟೈಮ್ ಲೆಕ್ಚರರ್‌ಗೆ 600 ರೂಪಾಯಿ ಮಾತ್ರ ಕೊಡುತ್ತಿದ್ದೇವೆ. ಅವರಿಗೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ಪ್ರಕಾರ ಎಂಪ್ಲಾಯ್‌ಮೆಂಟ್ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೀರಿ. ಆದರೂ ಸಹ ನಾವು 600 ರೂಪಾಯಿಯು ಬಹಳ ಕಡಿಮೆಯಾಯಿತು, ಅದನ್ನು ಹೆಚ್ಚು ಮಾಡಬೇಕು ಎನ್ನುವ ವಿಚಾರ ಫೈನಾನ್ಸ್

ಡಿಪಾರ್ಟ್‌ಮೆಂಟ್‌ನಲ್ಲಿ ಇದೆ. ಇನ್ನು 2-3 ವಾರದಲ್ಲಿ ಸಹ ಅವರ ಸಂಬಳ ಹೆಚ್ಚು ಮಾಡುತ್ತೇವೆ. ನಂತರ ಟೆಕ್ನಿಕಲ್ ಎಜುಕೇಷನ್‌ನಲ್ಲಿ ವಿಶ್ವಬ್ಯಾಂಕಿನಿಂದ ಬಂದ 50 ಕೋಟಿ ರೂಪಾಯಿಯಲ್ಲಿ ಇದುವರೆಗೆ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದೇ ವರ್ಷ 14 ಕೋಟಿ ರೂಪಾಯಿ ಸಹ ಖರ್ಚು ಮಾಡುತ್ತಿದ್ದೇವೆ. ಇವತ್ತು ಇನ್‌ಸ್ಟಿಟ್ಯೂಟ್ ಆಫ್ ಪ್ರಿಂಟಿಂಗ್ ಟೆಕ್ನಾಲಜಿ 20 ವರ್ಷಗಳಿಂದ ಏನು ಕೆಲಸ ಮಾಡುತ್ತಿದೆ, ಅದಕ್ಕೆ ಹೊಸ ಕಟ್ಟಡವನ್ನು ಕಟ್ಟುವುದಕ್ಕೆ 3 ಕೋಟಿ ರೂಪಾಯಿಗಳನ್ನು ಇಡಲಾಗಿದ್ದು, ಅದಕ್ಕೆ 15-16ನೇ ತಾರೀಖು ಫೌಂಡೇಷನ್ ಸ್ಟೋನ್ ಹಾಕುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇವೆ. ಇನ್ನೂ 2-3 ವಾರದಲ್ಲಿ ಅದರ ಶಂಕುಸ್ಥಾಪನೆ ನಡೆಯಲಿದೆ. ಇದು 3 ವರ್ಷದ ಡಿಪ್ಲೊಮಾ ಕೋರ್ಸ್ ಆಗಿರುತ್ತದೆ. ಅದಲ್ಲದೆ, we are contemplating a post diploma course also in printing. ಈ ರೀತಿ ಹಲವಾರು ವಿಧದಲ್ಲಿ ಜಾಬ್ ಓರಿಯೆಂಟಡ್ ಕೋರ್ಸ್‌ನ್ನು ಕೊಟ್ಟು ನಮ್ಮ ಟೆಕ್ನಿಕಲ್ ಎಜುಕೇಷನ್‌ನಲ್ಲಿ ಯಾಗಲಿ ಮತ್ತು ಜನರಲ್ ಎಜುಕೇಷನ್‌ನಲ್ಲಾಗಲಿ ಸರ್ಕಾರ ಒಂದು ನೀತಿ ಇಟ್ಟುಕೊಂಡು ಅಭಿವೃದ್ಧಿಯಾಗುವಂತಹ ಕಾರ್ಯಕ್ಕೆ ನಮ್ಮ ಇಲಾಖೆಯವರು ಖರ್ಚು ಮಾಡಿ ಕೆಲಸ ಮಾಡಿದ್ದಾರೆ. ಬಾಕಿ ಎಲ್ಲಾ ಹಲವಾರು ವಿಚಾರಗಳಲ್ಲಿ ಖಂಡಿತವಾಗಿ ಒಳ್ಳೆಯ ರೀತಿಯಲ್ಲಿ ಸೂಕ್ತ ಸಮಯಕ್ಕೆ ಸೂಕ್ತ ಕಾರ್ಯವನ್ನು ಮಾಡುತ್ತೇವೆಂದು ಹೇಳಿ ನಮ್ಮ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಮೇಲೆ ವಿಷಯ ಪರಿಶೀಲನಾ ಸಮಿತಿ ಸುದೀರ್ಘವಾಗಿ ಚರ್ಚೆ ನಡೆಸಿ, ಅಮೂಲ್ಯವಾದಂತಹ ಅನೇಕ ಸಲಹೆಗಳನ್ನು ನೀಡಿತು. ಅದರಲ್ಲೂ ವಿಶೇಷವಾಗಿ ಅನುಭವಿಗಳಾದಂತಹ ಹಿಂದಿನ ಸಮಾಜ ಕಲ್ಯಾಣ ಇಲಾಖೆಯ ಖಾತೆಯ ಜವಾಬ್ದಾರಿ ಹೊತ್ತಂತಹ ಮಾನ್ಯ ಸದಸ್ಯರಾದ ಸಿಂಧ್ಯರವರು,ಶ್ರೀಮಾನ್ ನರಸಿಂಹಮೂರ್ತಿಯವರಂತಹ ಹಿರಿಯ ನಾಯಕರು ಈ ಸಮಿತಿಯಲ್ಲಿ ಚರ್ಚೆ ಮಾಡಿ ಉಪಯುಕ್ತವಾದಂತಹ ಸಲಹೆಗಳನ್ನು ಮಾಡಿದ್ದಾರೆ. ನಾನು ಆ ವರದಿಯನ್ನು ನೋಡಿದ್ದೇನೆ. ಏಕೆಂದರೆ, ನಮ್ಮ ಸರ್ಕಾರಕ್ಕೆ ಕೆಲವು ಆದ್ಯತೆಗಳನ್ನು ನಾವು ಗುರುತಿಸಿಕೊಂಡಿದ್ದೇವೆ. ಆ ಆದ್ಯತೆಯಲ್ಲಿ ಹರಿಜನ ಗಿರಿಜನರು, ಹಿಂದುಳಿದವರು, ಅಲ್ಪ ಸಂಖ್ಯಾತರು, ಮಕ್ಕಳು ಮತ್ತು ಮಹಿಳೆಯರು ಪ್ರಮುಖವಾಗಿ ಸಮಾಜದ ಅಂಗವಾಗಿರತಕ್ಕಂಥ ವರ್ಗದ ಶ್ರೇಯಸ್ಸು. ನಮ್ಮ ಸರ್ಕಾರದ ಒಂದು ಮುಖ್ಯ ಆದ್ಯತೆಯಲ್ಲಿ ಸೇರಿರತಕ್ಕಂಥ ಅಂಶ. ಇದನ್ನು ಗಮನದಲ್ಲಿಟ್ಟುಕೊಂಡು ಇರತಕ್ಕಂಥ ಕಾರ್ಯಕ್ರಮಗಳ ಜೊತೆಗೆ ಅನೇಕ ಹೊಸ ಕಾರ್ಯಕ್ರಮಗಳನ್ನು ವಿಸ್ತರಿಸಿ ಈ ವರ್ಗದ ಜನರಲ್ಲಿ ಒಂದು ನಂಬಿಕೆ, ಆತ್ಮ ವಿಶ್ವಾಸ ಮತ್ತು ಭರವಸೆಗಳನ್ನು ಮೂಡಿಸತಕ್ಕಂಥ ಪ್ರಯತ್ನವನ್ನು ನಾವು ಇವತ್ತು ಮಾಡುತ್ತಿದ್ದೇವೆ. ಅದಕ್ಕಾಗಿ ವಿಷಯ ಸಮಿತಿಯವರು ಕೊಟ್ಟಂತಹ ಸಲಹೆಗಳು ಏನಿವೆ, ಅವೆಲ್ಲವನ್ನು ಕೂಡ ನಾವು ಕಾರ್ಯಗತ ಮಾಡತಕ್ಕಂಥ ಸಲಹೆಗಳೇ, ತೆಗೆದುಹಾಕತಕ್ಕಂಥ ಯಾವ ಸಲಹೆಗಳು ಇಲ್ಲ. ಆದರೆ ಹಣಕಾಸನ್ನು ನಾವು ಹೊಂದಿಸಿಕೊಳ್ಳಬೇಕಾಗುತ್ತದೆ. ನಾನು ಅದಕ್ಕೆ ಬೇಕಾಗುವ ಒಟ್ಟು ವೆಚ್ಚ ಎಷ್ಟು ಎಂದು ನೋಡಿದಾಗ ಸುಮಾರು 110 ಕೋಟಿ ರೂಪಾಯಿಗಳಿಗೂ ಮಿಕ್ಕು ಬೇಕಾಗುತ್ತದೆ. ಅದರಲ್ಲಿ ನಾನೀಗಾಲೇ ಕೆಲವು ಕಾರ್ಯಕ್ರಮಗಳನ್ನು ಪ್ರಚಾರ ಪಡಿಸಿದ್ದೇನೆ. ಅವು ಅದರಲ್ಲಿ ಸೇರಿವೆ. ಆದರೂ ಹಣದ ಕೊರತೆಯಿಂದ ನಾವು

ಹಿಂದೆ ಹೋಗಬಾರದು. ಆದ್ದರಿಂದ, ಅದನ್ನು ಕಾರ್ಯಗತ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಖಂಡಿತ ಸರ್ಕಾರ ಮಾಡುತ್ತದೆ. ಹಣಕಾಸು ಲಭ್ಯವಾದಂತ ಹಂತ ಹಂತದಲ್ಲಿ ಆ ಕೆಲಸವನ್ನು ಮಾಡಬೇಕಾಗುತ್ತದೆ. ಅದರಿಂದ, ನಾನು ಮೊದಲು ಹೇಳಿದ ರೀತಿಯಲ್ಲಿ ಇವತ್ತು ನಮ್ಮ ಅನೇಕ ವಿದ್ಯಾ ಸಂಸ್ತೆಗಳಲ್ಲಿ ಇನ್ನಷ್ಟು ಬದಲಾವಣೆಗಳನ್ನು ಮಾಡಬೇಕಾಗಿದೆ. ಮಕ್ಕಳಿಗೆ ಅಗತ್ಯವಾಗಿ ಬೇಕಾದಂತಹ ಸೌಕರ್ಯಗಳನ್ನು ನಾವು ಒದಗಿಸಿಕೊಡಬೇಕಾಗಿದೆ. ಅದರಲ್ಲೂ ಕೂಡ ಒಂದು ಸಲಹೆಯನ್ನು ನೀಡಿದ್ದಾರೆ. ಪ್ರತಿ ವಿದ್ಯಾರ್ಥಿನಿಲಯದಲ್ಲಿ ಕಾಂಪೌಂಡನ್ನು ಹಾಕಬೇಕು, ನೀರಿನ ವಸತಿ ಇರಬೇಕು, ಇನ್ನಿತರೆ ಸೌಕರ್ಯಗಳಿರಬೇಕು ಎಂದು ಹೇಳಿದ್ದಾರೆ. ನಾನು ಅದನ್ನು ನೂರಕ್ಕೆ ನೂರು ಒಪ್ಪುತ್ತೇನೆ. ಏಕೆಂದರೆ, ನಾವು ವಿದ್ಯಾರ್ಥಿನಿಲಯಗಳನ್ನು ಜಾಸ್ತಿ ಮಾಡುವುದು ಬಹಳ ಮುಖ್ಯವಲ್ಲ. ಇರತಕ್ಕಂಥ ವಿದ್ಯಾರ್ಥಿನಿಲಯಗಳಲ್ಲಿ ಒಳ್ಳೆಯ ವಿದ್ಯಾಭ್ಯಾಸ ಸಿಗಬೇಕಾದರೆ ಅವುಗಳ ಅಗತ್ಯಗಳನ್ನು ನಾವು ಪೂರೈಸಲೇಬೇಕು. ಏಕೆಂದರೆ, ಈವರ್ಗದ ಜನರು, ಹರಿಜನ ಗಿರಿಜನರಾಗಿರಬಹುದು, ಹಿಂದುಳಿದವರಾಗಿರಬಹುದು, ಅಲ್ಪ ಸಂಖ್ಯಾತರಾಗಿರಬಹುದು–ಈವರ್ಗದಿಂದ ಬಂದಂಥ ಮಕ್ಕಳಿಗೆ ಪೂರ್ವಾಪರ ಅವರಿಗೆ ಒಂದು ಸಂಸ್ಕೃತಿ ಈ ವಿಧ್ಯಾಭ್ಯಾಸ ಕ್ಷೇತ್ರದಲ್ಲಿ ಕಡಿಮೆ ಇದೆ. ಅದಕ್ಕಾಗಿ ಅಂತಹ ಮಕ್ಕಳಿಗೆ ಈ ವಿದ್ಯಾಭ್ಯಾಸ ನೀಡತಕ್ಕ ವಿದ್ಯಾರ್ಥಿನಿಲಯಗಳಲ್ಲಿ ಅತ್ಯಂಥ ಶ್ರೇಷ್ಟವಾದಂಥ ಉತ್ತಮ ದರ್ಜೆಯ ಸೌಕರ್ಯಗಳನ್ನು ಕೊಟ್ಟಾಗ ಮಾತ್ರ ಅವರ ಮನಸ್ಸು ವಿಕಾಸಗೊಳ್ಳುತ್ತದೆ ಮತ್ತು ಅವರಿಗೆ ಒಳ್ಳೆಯ ಆಕರ್ಷಣೀಯವಾದಂತಹ ಕ್ಷೇತ್ರ ಲಭ್ಯವಾಗುತ್ತದೆ. ಆಗ ಮಾತ್ರ ಅವರೂ ಕೂಡ ಅವರಲ್ಲಿ ಇರತಕ್ಕಂಥ ಬುದ್ಧಿ ಪ್ರವರ್ತನೆಯನ್ನು ವಿಸ್ತಾರಗೊಳಿಸಿಕೊಂಡು ಒಳ್ಳೆಯ ವಿದ್ಯಾವಂತರಾಗುವುದಕ್ಕೆ ಇವತ್ತು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಅವು ಹರಿಜನ ಗಿರಿಜನ, ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳಾಗಿರಬಹುದು ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯಗಳಾಗಿರಬಹುದು, ಹಿಂದುಳಿದ ವರ್ಗದವರ ವಿದ್ಯಾರ್ಥಿನಿಲಯಗಳಾಗಿರಬಹುದು. ಇವೆಲ್ಲವೂಗಳಿಗೂ ಕೂಡ ಶಕ್ತಿ ತುಂಬಿಸತಕ್ಕಂಥ ಕೆಲಸವನ್ನು ವಿಶೇಷವಾಗಿ ನಾವು ಮಾಡಬೇಕಾಗಿದೆ. ಅದರಲ್ಲೂ ಕೂಡ ಅನೇಕ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳು ಕೂಡ ಇಲ್ಲ , ಅದನ್ನು ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಈ ವರ್ಷ ನಮಗೆ ಈ ವಿಶೇಷ ಘಟಕ ಯೋಜನೆಯಿಂದ ನಮ್ಮ ಇಲಾಖೆಯಲ್ಲಿ ಕಟ್ಟದಕ್ಕೋಸ್ಕರ ಹಣ ಇತ್ತು. ಆಮೇಲೆ ವಿಶೇಷ ಘಟಕ ಯೋಜನೆಯಿಂದ ಕ್ರೊಡಿಕರಿಸಿದಂಥ ಹಣದಲ್ಲೇ ಸುಮಾರು 5 ಕೋಟಿ ರೂಪಾಯಿಗಳ ಹಣವನ್ನು ಸೇರಿಸಿಕೊಂಡು ಒಟ್ಟು ಏಳೂವರೆ ಕೋಟಿ ರೂಪಾಯಿಗಳನ್ನು ನಾವು ಮಾಡಿ. ಕೇಂದ್ರ ಸರ್ಕಾರದಿಂದ ನಮಗೆ ಅರ್ಧಭಾಗದಷ್ಟು ಹಣವನ್ನು ಈಗ ಕೊಡುತ್ತೇವೆ ಎಂದು ಹೇಳಿ ಅವರಿಂದ ಪತ್ರ ಕೂಡ ಬಂದಿದೆ. ಆದ್ದರಿಂದ ಹಿಂದೆ ಕೆಲವು ಮಿತಿ ಇತ್ತು ಈಗ ವಸ್ತುಸ್ಥಿತಿಯಲ್ಲಿ ಕಟ್ಟಡದ ನಿರ್ಮಾಣದ ಅರ್ಧಭಾಗದ ವೆಚ್ಚವನ್ನು ಕೊಡುವುದಕ್ಕೆ ಪತ್ರ ಕೂಡ ಬರೆದಿದ್ದಾರೆ. ಆ ಆಧಾರದಮೇಲೆ ನಾವೀಗ 100 ವಿದ್ಯಾರ್ಥಿನಿಲಯಗಳನ್ನು 15 ಕೋಟಿ ರೂಪಾಯಿಯ ವೆಚ್ಚದಲ್ಲಿ ಈ ವರ್ಷ ಕಟ್ಟಬೇಕು ಎಂದು ಒಂದು ಪಟ್ಟಿಯನ್ನು ಮಾಡಿದ್ದೇವೆ. ಈಗಾಗಲೇ ಸುಮಾರು 80–82 ವಿದ್ಯಾರ್ಥಿನಿಲಯಗಳ ಒಂದು ಪಟ್ಟಿ ಕೇಂದ್ರ ಸರ್ಕಾರಕ್ಕೆ ಹೋಗಿದೆ ಉಳಿದವನ್ನು ಕೂಡ ಸೇರಿಸುತ್ತೇವೆ. ಆದ್ದರಿಂದ ನಾನು ಎಲ್ಲಾ ಶಾಸಕರಲ್ಲೂ ಮನವಿ ಮಾಡಿಕೊಳ್ಳುವುದೇನೆಂದರೆ, ನಮಗೆ ಇವತ್ತು ಅನೇಕ ವಿದ್ಯಾರ್ಥಿನಿಲಯಗಳಿಗೆ ನಿವೇಶನ ಇಲ್ಲ ಅದಕ್ಕೆ ತಮೆಲ್ಲರ ಪ್ರಯತ್ನದಿಂದ ನಿವೇಶನವನ್ನು

ಒದಗಿಸಿ ಕೊಡುವ ಪ್ರಯತ್ನ ಮಾಡುವುದಾದರೆ, ಇನ್ನೂ ಜಾಸ್ತಿ ನಿಲಯದ ಕಟ್ಟಡಗಳನ್ನು ನಾವು ಇವತ್ತು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಾನು ಈ ಸಂದರ್ಭವನ್ನು ಉಪಯೋಗ ಮಾಡಿಕೊಂಡು ನನ್ನ ಎಲ್ಲಾ ಶಾಸಕ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ಹರಿಜನ ಗಿರಿಜನರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯತಕ್ಕ ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ಇಲ್ಲದೆಹೋದರೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೆ ಅವುಗಳಿಗೆ ನಿವೇಶನವನ್ನು ಒದಗಿಸಿಕೊಟ್ಟತಕ್ಕಂತ ಒಂದು ಪ್ರಯತ್ನ ತಮ್ಮಿಂದ ಕೂಡಿ ಬಂದರೆ ಖಂಡಿತವಾಗಿಯೂ 100 ವಿದ್ಯಾರ್ಥಿನಿಲಯಗಳಲ್ಲ, ಇನ್ನೂ 50 ವಿದ್ಯಾರ್ಥಿನಿಲಯಗಳನ್ನು ನಾವು ಜಾಸ್ತಿ ಮಾಡುವುದಕ್ಕೆ ಇವತ್ತು ಸಾಧ್ಯವಾಗುತ್ತದೆ. ಏಕೆಂದರೆ, ಈ ವರ್ಗಕ್ಕೆ ಸೇರಿದಂಥ ಮಕ್ಕಳ ಹಿತದೃಷ್ಟಿಯಿಂದ ಬಾಡಿಗೆ ಕಟ್ಟಡದಲ್ಲಿ ಹೆಚ್ಚು ದಿವಸ ಶಾಲೆಗಳನ್ನು ನಡೆಸುವುದು ಒಳ್ಳೆಯದಲ್ಲ. ಏಕೆಂದರೆ ಅಲ್ಲಿ ಸ್ನಾನದ -ಗೃಹ, ಶೌಚಾಲಯ, ಆಟದ ಬಯಲು ಇರುವುದಿಲ್ಲ. ಆದ್ದರಿಂದ ಈ ಅನಾನುಕೂಲತೆಗಳನ್ನು ಹೋಗಲಾಡಿಸಬೇಕು, ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗಬೇಕೆಂದು ಹೇಳುವುದಾದರೆ ಒಂದು ಒಳ್ಳೆಯ ವಾತಾವರಣ ಸೃಷ್ಟಿಯಾಗಬೇಕೆಂದರೆ ಅದಕ್ಕೆ ಒಳ್ಳೆಯ ವಿದ್ಯಾರ್ಥಿನಿಲಯದ ಕಟ್ಟಡ ಅಗತ್ಯವಾಗಿ ಆಗಬೇಕಾಗಿದೆ. ನನಗೆ ತಿಳಿದಮಟ್ಟಿಗೆ 350 ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ಇಲ್ಲ. ಈ ವರ್ಷ 100 ಕಟ್ಟಡ ತೆಗೆದುಕೊಂಡರೆ ಇನ್ನೂ 50 ಜಾಸ್ತಿ ಮಾಡಬಹುದು. ಕೇವಲ ಒಂದೆರಡು ವರ್ಷಗಳಲ್ಲಿ ರಾಜ್ಯದಲ್ಲಿ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಸ್ವಂತ ಕಟ್ಟಡಗಳನ್ನುಒದಗಿಸಿಕೊಡಲು ಸಾಧ್ಯವಾಗುತ್ತದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ನಮ್ಮಲ್ಲಿ ಸುಮಾರು 3.5 ಕೋಟಿ ರೂಪಾಯಿನಷ್ಟು ಹಣ ಇದೆ. ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಈಗ ಪ್ರಾರಂಭವಾಗಿರುವ ಸುಮಾರು 133 ಕಟ್ಟಡಗಳು ಏನು ವಿವಿಧ ಹಂತದಲ್ಲಿವೆ ಅವುಗಳ ಜೊತೆಗೆ ಇನ್ನೂ 50 ಕಟ್ಟಡಗಳನ್ನು ಸೇರಿಸಿ ಈ ವರ್ಷ ಕನಿಷ್ಟ 150 ಕಟ್ಟಡಗಳನ್ನಾದರೂ ಪೂರೈಸಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ನಮ್ಮ ಸರ್ಕಾರ ಈ ವರ್ಷ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದೆ. ಇದರ ಜೊತೆಗೆ ನಮ್ಮ ಸಮಾಜಕಲ್ಯಾಣ ಇಲಾಖೆಯ ವತಿಯಿಂದ 100 ವಿದ್ಯಾರ್ಥಿನಿಲಯಗಳನ್ನು ಮತ್ತು ಹಿಂದುಳಿದ ವರ್ಗದವರಿಗೆ 100 ವಿದ್ಯಾರ್ಥಿನಿಲಯಗಳನ್ನು ಕೊಡುತ್ತೇವೆಂದು ನಾವು ಘೋಷಣೆ ಮಾಡಿದ್ದೇವೆ. ಆದರೆ ಅವುಗಳನ್ನು ಎಲ್ಲೆಲ್ಲಿ ಕೊಡಬೇಕೆಂದು ಪಟ್ಟಿಯನ್ನು ಮಾಡುವಾಗ ಎಲ್ಲಾ ಮಾನ್ಯ ಸದಸ್ಯರುಗಳ ಸಲಹೆಗಳನ್ನು ಪಡೆಯುತ್ತೇವೆ.

ಇನ್ನು ವಿಶೇಷವಾಗಿ ನಾವು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಕಡೆ ಲಕ್ಷ್ಯವನ್ನು ಕೊಡಬೇಕಾಗಿದೆ. ಶಿಕ್ಷಕರನ್ನು ಆಯ್ಕೆಮಾಡಬೇಕಾದರೆ ಅವರು ಪಿ.ಯು.ಸಿ.ಯನ್ನು ಪಾಸ್ ಮಾಡಲೇಬೇಕಾಗಿದೆ. ಅದರಲ್ಲೂ ಹಿಂದುಳಿದವರ, ಅಲ್ಪಸಂಖ್ಯಾತರ ಹೆಣ್ಣು ಮಕ್ಕಳು ಏನಿದ್ದಾರೆ ಅವರಿಗೆ ಬಹಳ ಕಡಿಮೆ ಅವಕಾಶಗಳಿವೆ. ಆದ್ದರಿಂದ, ಅಲ್ಪಸಂಖ್ಯಾತರ, ಹಿಂದುಳಿದವರ್ಗದವರ ಹೆಣ್ಣುಮಕ್ಕಳಿಗೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿನಿಲಯಗಳನ್ನು ಕೊಡಬೇಕೆಂದು ಅಪೇಕ್ಷೆಯನ್ನು ಇಟ್ಟುಕೊಂಡು ಈ ವರ್ಷ ಅದನ್ನೂ ನಾವು ಘೋಷಣೆ ಮಾಡಿದ್ದೇವೆ. ನನಗೆ ಒಂದು ವ್ಯಥೆ ಏನೆಂದರೆ, ಇಲ್ಲಿ ಪ್ರತಿಯೊಬ್ಬ ಶಾಸಕ ಮಿತ್ರರೂ ಕೂಡ ಕೇವಲ ಗಂಡುಮಕ್ಕಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವಂತೆ ಕೇಳುತ್ತಿದ್ದಾರೆಯೇ ಹೊರತು ಹೆಣ್ಣುಮಕ್ಕಳ ಬಗ್ಗೆ ಹೆಚ್ಚಿನ ಬೇಡಿಕೆ ಬರುತ್ತಿಲ್ಲ. ಯಾವ ಯಾವ ತಾಲ್ಲೂಕುಗಳಲ್ಲಿ ಪಿ.ಯು.ಸಿ. ಅಥವಾ ಕಾಲೇಜುಗಳಿವೆ ಅಂಥ ಕಡೆಗಳಲ್ಲಿ ಹರಿಜನ ಗಿರಿಜನ, ಅಲ್ಪಸಂಖ್ಯಾತರ ಮತ್ತು ಹಿಂದುಳಿದವರ್ಗಗಳ

ಹೆಣ್ಣುಮಕ್ಕಳಿಗೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡತಕ್ಕುದ್ದು ತುಂಬಾ ಜರೂರಾಗಿದೆ. ಇದರ ಬಗ್ಗೆ ತಮ್ಮಿಂದ ಸಲಹೆಗಳು ಬಂದರೆ ಎಲ್ಲೆಲ್ಲಿ ಆದ್ಯತೆಯ ಮೇಲೆ ಕೊಡುವುದಕ್ಕೆ ಸಾಧ್ಯತೆ ಇದೆ ಎಂಬುದನ್ನು ನೋಡಿ ಕೊಡುತ್ತೇವೆ. ಇವತ್ತು 200 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದರೆ, ಎಲ್ಲೆಲ್ಲಿ ಅವಶ್ಯಕತೆ ಇದೆ, ಅವಕಾಶವಿದೆ ಎಂಬುದನ್ನು ನೋಡಿ ಅಲ್ಲಿಗೆ ಕೊಡುವ ಕೆಲಸವನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ವಸತಿ ಶಾಲೆಗಳ ಬಗ್ಗೆ ಹೇಳುವುದಾದರೆ, ಹಿಂದೆ ಒಂದೊಂದು ಡಿವಿಜನ್‌ನಲ್ಲಿ 4-4 ವಸತಿ ಶಾಲೆಗಳನ್ನು ಮಾಡಿದ್ದರು. ಅದನ್ನು ಇವತ್ತು ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ಇವು ಮಾದರಿಯಾಗಿರಬೇಕು. ಕೇವಲ ನಾವು ವಸತಿ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳುವುದು, ಆದರೆ ಅವುಗಳಿಗೆ ಕಟ್ಟಡ ಇಲ್ಲ, ಜಾಗ ಇಲ್ಲ ಎಂಬಂತೆ ಆಗಕೂಡದು.

ಶ್ರೀ ಸಿ. ಬೈರೇಗೌಡ :- ಈಗ ಡಿಮ್ಯಾಂಡ್ ಮೇಲೆ ಮಾನ್ಯ ಸಚಿವರಾದ ಖರ್ಗೆಯವರು ಮಾತನಾಡುತ್ತಾರೆ, ತಾವು ಸ್ವಲ್ಪ ದಯವಿಟ್ಟು ಅವಕಾಶವನ್ನು ಕೊಡಬೇಕು.

ಶ್ರೀ ಕಾಗೋಡುತಿಮ್ಮಪ್ಪ :- ವಸತಿ ಶಾಲೆಗಳನ್ನು ಹಿಂದುಳಿದ ವರ್ಗದವರಿಗೆ, ಹರಿಜನ ಗಿರಿಜನರಿಗೆ ಅಲ್ಪಸಂಖ್ಯಾತರಿಗೆ ಹೆಚ್ಚು ಮಾಡಬೇಕಾಗಿದೆ. ಇದರಲ್ಲಿ ನನಗೆ ವಿಶೇಷ ಆಸಕ್ತಿ ಇದೆ. ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಮಾದರಿಯಲ್ಲಿ ಮಾಡಲು ಇವರನ್ನು ಸಂಘಟಿಸುವಂತೆ ಮಾಡಬೇಕೆಂಬ ಉದ್ದೇಶವಿದೆ. ಇದೆಲ್ಲದರ ಜೊತೆಗೆ ಅಲ್ಪಸಂಖ್ಯಾತರ, ಹಿಂದುಳಿದವರ್ಗದವರ, ಹರಿಜನಗಿರಿಜನರ ಆರ್ಥಿಕ ಶಕ್ತಿಯನ್ನು ಬಲಪಡಿಸುವಂಥ ಕೆಲಸಕೂಡ ಇದೇ ಸಂದರ್ಭದಲ್ಲಿ ಆಗಬೇಕಾಗಿದೆ. ಹೊಸ ಹೊಸ ಭರವಸೆಗಳನ್ನು ಇವರಲ್ಲಿ ಮೂಡಿಸಬೇಕಾದರೆ ಇವರಿಗೆ ಹೊಸ ಹೊಸ ಉದ್ಯೋಗಗಳನ್ನೂ ಕೂಡ ಒದಗಿಸಬೇಕಾಗುತ್ತದೆ. ಸ್ವಯಂ ಉದ್ಯೋಗ ಮಾಡುವಂಥ ಜನರಿಗೆ ನಾವು ಸಹಾಯವನ್ನೂ ಕೂಡ ಒದಗಿಸಬೇಕಾಗುತ್ತದೆ. ಈ ಕಾರಣದಿಂದಾಗಿ ಹರಿಜನಗಿರಿಜನರ, ಅಲ್ಪಸಂಖ್ಯಾತರ, ಹಿಂದುಳಿದವರ, ಮಹಿಳಾ ಅಭಿವೃದ್ಧಿ ನಿಗಮಗಳಿಗೆ ಹೆಚ್ಚು ಹಣವನ್ನು ಸರ್ಕಾರಕೊಟ್ಟು ಅವುಗಳನ್ನು ಆರ್ಥಿಕವಾಗಿ ಶಕ್ತಿಯುತವಾಗಿ ಮಾಡಿ ಅವುಗಳ ಮುಖಾಂತರ ಲಕ್ಷಾಂತರ ಜನ ಯುವಕರಿಗೆ ಉದ್ಯೋಗಗಳನ್ನು ಸೃಷ್ಟಿಸುವುದಕ್ಕೆ ಮತ್ತು ಇರತಕ್ಕ ಉದ್ಯೋಗಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡುವುದಕ್ಕೆ ನಾವು ಬಹಳ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಮೂಲಕ ಹರಿಜನಗಿರಿಜನ ಅಭಿವೃದ್ಧಿ ನಿಗಮದ ಮೂಲಕ ಸುಮಾರು 70 ಸಾವಿರ ಜನರಿಗೆ 145 ಕೋಟಿ ರೂಪಾಯಿ ವೆಚ್ಚದಲ್ಲಿ ಸಹಾಯವನ್ನು ವಿಸ್ತರಿಸಬೇಕೆಂದಿದ್ದೇವೆ. ಇದರ ಜೊತೆಗೆ ಹಿಂದುಳಿದವರ್ಗದ ನಿಗಮದ ಮೂಲಕ ಕನಿಷ್ಟ 50 ಸಾವಿರ ಜನರಿಗೆ ಈ ವರ್ಷ ಸಹಾಯ ಮಾಡಬೇಕೆಂದುಕೊಂಡಿದ್ದೇವೆ. ಇದರ ಜೊತೆಗೆ ಅಲ್ಪಸಂಖ್ಯಾತರಿಗೆ ಸುಮಾರು 8 ಸಾವಿರ ಕುಟುಂಬಗಳಿಗೆ ಸಹಾಯ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು ಪ್ರತಿಯೊಬ್ಬ ಶಾಸಕರ ಕ್ಷೇತ್ರದಲ್ಲಿ ಅದು ಹರಿಜನಗಿರಿಜನರು ಇರಬಹುದು, ಅಲ್ಪಂಸಖ್ಯಾತರು ಇರಬಹುದು, ಮಹಿಳೆಯರು, ಇರಬಹುದು, ಹಿಂದುಳಿದ ವರ್ಗದವರು ಇರಬಹುದು. ಈ ವರ್ಗದವರಿಂದ ಈ ವರ್ಷ ಕನಿಷ್ಠ 300ರಿಂದ 400 ಕುಟುಂಬಗಳಿಗೆ ಸಹಾಯ ಮಾಡಲು ವ್ಯಾಪಕ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ನಾನು ಈಗಾಗಲೇ ಹೇಳಿದಂತೆ ಈ ವರ್ಗದ ಜನರಲ್ಲಿ ಹೊಸದಾಗಿ ಭರವಸೆಗಳನ್ನು ಮೂಡಿಸಬೇಕಾದರೆ ವಿಶ್ವಾಸವನ್ನು ಮಾಡಿಸಬೇಕಾದರೆ ಆರ್ಥಿಕವಾಗಿ ಅವರಿಗೆ ಉನ್ನತಿಯ ಮಾರ್ಗವನ್ನು ತೋರಿಸಬೇಕಾಗುತ್ತದೆ.

ಆದ್ದರಿಂದ ನಾವು ಈವರ್ಷ ಹಿಂದೆಂದೂ ಮಾಡದೇ ಇರುವಂಥ ಒಂದು ವ್ಯಾಪಕ ಕಾರ್ಯಕ್ರಮವನ್ನು ನಮ್ಮ ಸಮಾಜಕಲ್ಯಾಣ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದೇವೆ. ಇದಕ್ಕೆ ಸಮಾಜದ ಎಲ್ಲಾ ಮುಖ್ಯಂಡರ ಸಹಾಯ ಬೇಕಾಗಿದೆ. ಆ ವರ್ಗಕ್ಕೆ ಸೇರಿದ ಜನರನ್ನು ಆರಿಸುವಾಗ ನೇರವಾಗಿ ಆವರಿಗೆ ಈ ಸಹಾಯವನ್ನು ತಲುಪಿಸುವ ಕೆಲಸವನ್ನು ಒಂದು ಹೋರಾಟದ ರೂಪದಲ್ಲಿ ಮಾಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ : ಈ ಸದನದಲ್ಲಿ ಯಾರೂ ಕೂಡ ಕುಳಿತಿರುವುದಕ್ಕೆ ತಯಾರಿಲ್ಲ. ಅಯಕಡೆಯವರೂ ಅಷ್ಟೇ. ಈ ಕಡೆಯವರೂ ಅಷ್ಟೇ ಯಾವಾಗ ಈ ಸದನ ಮುಗಿಯುತ್ತದೆಯೋ ಎಂದು ಕಾಯುತ್ತಿದ್ದೇವೆ. ಚುನಾವಣೆ ಬರುತ್ತಿದೆ ಆದರೆ ಇವರು ಹೋರಾಟ ಮಾಡಬೇಕೆಂದು ಹೇಳುತ್ತಿದ್ದಾರೆ. ನಾವು ಏನು ಮಾಡಬೇಕು?

4.00 ಪಿ ಎಂ

ಶ್ರೀ ಕಾಗೋಡು ತಿಮ್ಮಪ್ಪ : ಚುನಾವಣೆಯೂ ಕೂಡ ಒಂದುರೀತಿಯ ಹೋರಾಟ. ಸನ್ನಿವೇಶ ಬಂದಾಗ ಚುನಾವಣೆಯಲ್ಲಿ ಭಾಗವಹಿಸಿ, ಇನ್ನೊಂದು ಸಂದರ್ಭದಲ್ಲಿ ಹೋರಾಟದಲ್ಲಿ ಭಾಗವಹಿಸಿ. ಇವತ್ತು ಹೋರಾಟದ ಮುಖಾಂತರ ಈ ವರ್ಗದ ಜನರಿಗೆ ನ್ಯಾಯವನ್ನು ನೇರವಾಗಿ ತಲುಪಿಸುವ ಕೆಲಸವನ್ನು ನಮ್ಮ ಹೃದಯಪೂರ್ವಕವಾಗಿ ಮಾಡಬೇಕೆಂದು ಮಾಡಿದ್ದೇವೆ. ಇದರ ಬಗ್ಗೆ ಎಲ್ಲಾ ಕೆಲಸವೂ ಸರ್ಕಾರದಿಂದ ನಡೆಯುತ್ತದೆಂದು ನಾವು ಯಾರೂ ಕೂಡ ಯಾವುದೇ ಚಕಾರ ಎತ್ತದೆ ಟೀಕೆ ಮಾಡದೆ ಈ ಬೇಡಿಕೆಗೆ ತಮ್ಮ ಸಂಪೂರ್ಣವಾದ ಒಮ್ಮತದ ಅನುಮೋದನೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಜಿ..ಆರ್. ಸಿಂಧ್ಯ(ಕನಕಪುರ) :-ಮಾನ್ಯ ಉಪ ಸಭಾಪತಿಯವರೆ, ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ನಾನು ಹೇಳಿದಂಥ ವಿಚಾರದ ಬಗ್ಗೆ ಪ್ರಸ್ತಾಪವನ್ನೇ ಮಾಡಲಿಲ್ಲ. ಆಗ ಬಹುಶಃ ಅವರು ಇರಲಿಲ್ಲವೆಂದು ಕಾಣಿಸುತ್ತದೆ. ನಾನು ಹೇಳಿದ್ದುದು ಹರಿಜನಗಿರಿಜನರ ಭೂಮಿಗಳಿಗೆ ನೀರನ್ನು ಕೊಡತಕ್ಕ ಗಂಗಾ ಕಲ್ಯಾಣ ಮತ್ತು ಬೋರ್‌ವೆಲ್‌ಗಳನ್ನು ಕೊಡತಕ್ಕ ಸಿ ಅಂಡ್ ಡಿ ಕ್ಲಾಸ್ ಜಮೀನು. ಅವರಿಗೆ ಸಿಕ್ಕತಕ್ಕದ್ದು ಬಹಳ ಕೀಳುಮಟ್ಟದ ಜಮೀನು. ಎರಡನೆಯದಾಗಿ ಅವರು ಸಾಲದ ರೂಪದಲ್ಲಿ ಹಣವನ್ನು ತೆಗೆದುಕೊಂಡು 4-5 ವರ್ಷವಾಗಿದೆ. ನಾವು ಅವರಿಗೆ ಸಬ್ಸಿಡಿ ಹಣವನ್ನು ಸ್ವಲ್ಪ ಹೆಚ್ಚು ಕೊಟ್ಟಿರಬಹುದು. ಕಳೆದ 3-4 ವರ್ಷಗಳ ಹಿಂದೆ ಅವರಿಗೆ ಹಾಕಿಕೊಟ್ಟಿರುವ ಬೋರ್‌ವೆಲ್‌ಗಳಲ್ಲಿ ನೀರು ಬಿದ್ದಿಲ್ಲ. ಇನ್ನು ಕೆಲವು ಕಡೆ ಕರೆಂಟ್‌ಕೊಟ್ಟಿಲ್ಲ, ಇನ್ನು ಕೆಲವು ಕಡೆ ಬೋರ್‌ವೆಲ್ ಹಾಕಿ ಕರೆಂಟೂ ಕೂಡ ಕೊಟ್ಟಿದೆ, ಬೋರ್‌ಫೇಲ್ಯೂರ್ ಆಗಿದೆ. ಅವರು ಬೇರೆಕಡೆ ಸಾಲವನ್ನು ತೆಗೆದುಕೊಳ್ಳುವಂತಿಲ್ಲ. ಇಂಥಾದ್ದು ಒಂದೆರಡು ಜಿಲ್ಲೆಗಳಲ್ಲಿ ಅಲ್ಲ. ಎಲ್ಲಾ ಕಡೆ ಆಗಿದೆ.

ಇನ್ನೊಂದು ಸಮಸ್ಯೆ ಎಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರು ಈ ಬೋರ್‌ವೆಲ್‌ಗಳನ್ನು ಮುಚ್ಚಿಹಾಕುತ್ತಿದ್ದಾರೆ. ಇದಾದನಂತರ ಅದನ್ನು ಎಸ್‌ಸಿಎಸ್‌ಟಿ

ಕಾರ್ಪೊರೇಷನ್‌ನವರು ತೆಗೆದುಕೊಂಡರು. ಪ್ರತಿವರ್ಷವೂ ಏಜೆನ್ಸಿಗಳು ಬದಲಾವಣೆ, ಆಗುತ್ತಿದ್ದಾರೆ. ಜಿಲ್ಲಾ ಪರಿಷತ್ತಿನವರು ಈ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುವ ಏಜೆನ್ಸಿ ಈ ಯೋಜನೆ ನಿಜವಾಗಿಯೂ ಹರಿಜನಗಿರಿಜನರಿಗೆ ಉಪಯೋಗವಾಗುವಂಥ ಕಾರ್ಯಕ್ರಮ . ಈ ಕಾರ್ಯಕ್ರಮವನ್ನು ಅಳವಡಿಸುವಾಗ ನಾವು ಏನು ನಿರೀಕ್ಷೆ ಮಾಡಿದ್ದೆವು ಎಂದರೆ, ಕಳೆದ 3-4 ವರ್ಷದಿಂದ ಬಾಕಿ ಇರತಕ್ಕವು ಪೂರ್ಣವಾಗುತ್ತವೆ ಎಂದು ತಿಳಿದಿದ್ದೆವು. ನನಗೆ ತಿಲಿದ ಮಟ್ಟಿಗೆ ಸುಮಾರು 10 ಸಾವಿರಕ್ಕಿಂತ ಹೆಚ್ಚು ಬೋರ್‌ವೆಲ್‌ಗಳು ಇಂಥವೇ ಇವೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಮತ್ತು ಸರ್ಕಾರದಲ್ಲಿ ಒತ್ತಾಯ ಮಾಡಿದ್ದೆಂದರೆ, ಈ ಕಾರ್ಯಕ್ರಮಕ್ಕೆ ಸ್ವಲ್ಪ ಹೆಚ್ಚು ಒತ್ತವನ್ನು ಕೊಟ್ಟು ಇದನ್ನು ಮಾನಿಟರ್ ಮಾಡುಥವ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ ಎಂಬ ಆಪಾದನೆ ನನ್ನದು.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಸದಸ್ಯರಾದ ಸಿಂಧ್ಯರವರು ಹೇಳಿದ್ದುದು ನನಗೆ ಗೊತ್ತಿದೆ. ಒಟ್ಟು 3 ಸಾವಿರ ಕೊಳವೆ ಬಾವಿಗಳಿಗೆ ವಿದುಚ್ಛಕ್ತಿಯನ್ನು ನಾವು ಕೊಡಬೇಕಾಗಿದೆ. ಈಗಾಗಲೇ ನಾನು ವಿದ್ಯುಚ್ಛಕ್ತಿ ಮಂಡಲಿಯ ಸಂಬಂಧಪಟ್ಟವರನ್ನು ಕರೆಯಿಸಿಕೊಂಡು ಮಾತನಾಡಿದ್ದೇನೆ ನೀವು ಒಂದುನಿಗದಿತ ಸಮಯದೊಳಗೆ ಮಾಡಿಕೊಡಲೇಬೇಕೆಂದು ಹೇಳಿದ್ದೇನೆ. ವಿದ್ಯುತ್ ಕೊಡುವಾಗ ಇವರಿಗೆ ನಿಮ್ಮ ನಿಯಮಾವಳಿಯ ಪ್ರಕಾರ ಏನು ಹಣವನ್ನು ಖರ್ಚುಮಾಡಬೇಕಾಗಿದೆ ಅದಕ್ಕಿಂತ ಹೆಚ್ಚಿಗೆ ಏನಾದರೂ ಅಂದರೆ ನಿಮ್ಮ ಎಸ್ಟಿಮೇಟ್ ಕಾಸ್ಟ್‌ಗಿಂತ ಹೆಚ್ಚಿಗೆ ಆದರೆ ಆ ಖರ್ಚನ್ನು ನಾವೇ ವಹಿಸಿಕೊಳ್ಳುತ್ತೇವೆಂದು ಹೇಳಿದ್ದೇವೆ. ಈ ವರ್ಷ 3 ಸಾವಿರ ಕೊಳವೆಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೇವೆ ಎಂದು ಅವರು ಭರವಸೆಯನ್ನು ಕೊಟ್ಟಿದ್ದಾರೆ. ಆ ಕೆಲಸವನ್ನು ನಾವು ಪೂರ್ಣವಾಗಿ ಮಾಡುತ್ತೇವೆ. ಇದರ ಜೊತೆಗೆ ಈವರ್ಷ ನಾವು ಕನಿಷ್ಠ 25 ಸಾವಿರ ಕುಟುಂಬಗಳಿಗೆ ಅದು ಕೊಳವೆಬಾವಿ ಇರಬಹುದು, ತೆರೆಗೆ ಬಾವಿ ಇರಬಹುದು, ಅಥವಾ ಹೊಳೆಯಿಂದ ಪಂಪ್‌ನ್ನು ಹಾಕಿ ನೀರನ್ನು ಒದಗಿಸುವುದು ಇರಬಹುದು. ಒಟ್ಟಿನಲ್ಲಿ 25 ಸಾವಿರ ಕುಟುಂಬಗಳಿಗೆ ಈ ಸೌಲಭ್ಯವನ್ನು ಆದ್ಯತೆಯಮೇಲೆ ಕೊಡಲು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ವರ್ಷ ಇದನ್ನು ಘೋಷಣೆ ಮಾಡಿ ಒಂದು ವ್ಯಾಪಕ ಕಾರ್ಯಕ್ರಮವನ್ನೂ ಕೂಡ ನಾವು ಹಾಕಿಕೊಂಡಿದ್ದೇವೆ. ಏಕೆಂದರೆ, ಇದೊಂದು ಕಾರ್ಯಕ್ರಮ ನೇರವಾಗಿ ತಕ್ಷಣ ಲಾಭ ಕೊಡತಕ್ಕ ಕಾರ್ಯಕ್ರಮವಾಗಿರುವುದರಿಂದ ಇದನ್ನು ವ್ಯಾಪಕವಾಗಿ ಮಾಡಬೇಕೆಂದು ಇದೆ. ಜೊತೆಗೆ ತಮ್ಮ ತಾಲ್ಲೂಕಿನಲ್ಲಿ ಹಿಂದೆ ಬೋರ್‌ವೆಲ್ ಅವರೇ ತೆಗೆದುಬಿಟ್ಟಿದ್ದಾರೆ. ಅದಕ್ಕೆ ಪಂಪ್‌ಸೆಟ್ ಕೊಡಬೇಕೆಂದು ಹೇಳಿದ್ದಾರೆ. ಅದು ಹಣಕಾಸಿನ ಇಲಾಖೆಯಲ್ಲಿದೆ. ನಾವು ಮಾಡಿದ್ದೇವೆ. ಆದ್ದರಿಂದ ತಾವು ಹೇಳಿರತಕ್ಕದ್ದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅದ್ಯತೆ ದೃಷ್ಟಿಯಿಂದ ಆ ಕೆಲಸವನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ವ್ಯಾಪಕವಾಗಿ ಮಾಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿರತಕ್ಕದ್ದು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಮೊಯಿಲಿಯವರೂ ಸಹ ಮುಖ್ಯಮಂತ್ರಿಯಾದ ಹೊಸದರಲ್ಲಿ ಇದಕ್ಕೆ ಆದ್ಯತೆಯನ್ನು ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಬಜೆಟ್ ಭಾಷಣದಲ್ಲೂ ಕೂಡ ಹೇಳಿದ್ದರು. ಈಗ ಅಧಿಕಾರ ಮುಗಿಯುತ್ತಾ ಬಂತು. ಸಮಾಜ

ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಹರಿಜನರಿಗೆ ಸ್ಮಶಾಣಕ್ಕೆ ಜಾಗ ಕೊಡುವ ವಿಚಾರದಲ್ಲಿ ಕಾರ್ಯಕ್ರಮ ಆಗೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಹೇಳಬೇಕು ಅಂದರೆ ನಾನು ಬಹಳ ಸಾರಿ ಹೇಳಿದ್ದೇನೆ....

ಶ್ರೀ ಧರ್ಮಸಿಂಗ್:- ಪ್ರತಿಯೊಂದು ಜಿಲ್ಲಾಧಿಕಾರಿಗಳಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಸ್ಮಶಾಣಕ್ಕೆ ನಿಗದಿಪಡಿಸಿ ಈಗಾಗಲೇ ಆರ್ಡರ್ ಕೂಡ ಕೊಟ್ಟಿದ್ದೇವೆ. ಬೇಕಾದರೆ ಸರ್ಕಾರಿ ಆಜ್ಞೆಯ ಕಾಪಿ ತಮಗೆ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಜಮೀನಿದೆ. ದುಡ್ಡಿಲ್ಲ ಎಂದು ಹೇಳುತ್ತಾರೆ.

ಶ್ರೀ ಧರ್ಮಸಿಂಗ್:-ಒಂದು ಕೋಟಿ ರೂಪಾಯಿಗಳನ್ನು ಪ್ರತಿಯೊಂದು ಜಿಲ್ಲೆಗೆ ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಯಾವಾಗ?

ಶ್ರೀ ಧರ್ಮಸಿಂಗ್:- ಕೊಟ್ಟು ಮೂರು ತಿಂಗಳಾಯಿತು. ಬೇಕಾದರೆ ಆರ್ಡರ್ ಕಾಪಿ ಕೊಡುತ್ತೇನೆ. ಎಲ್ಲಾ ಜಿಲ್ಲೆಗಳಲ್ಲೂ ಕೊಟ್ಟಿದ್ದೇವೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ನಾವು ದುಡ್ಡು ರಿಲೀಸ್ ಮಾಡಿದ್ದೇವೆ. ಆಯಾ ಜಿಲ್ಲಾಧಿಕಾರಿಗಳ ಹತ್ತಿರ ದುಡ್ಡು ಇದೆ. ದಯಮಾಡಿ ಜಿಲ್ಲಾಧಿಕಾರಿಗಳಿಗೆ ಕಾಂಟಾಕ್ಟ್ ಮಾಡಿ.

ಶ್ರೀ ಸಿ.ಬೈರೇಗೌಡ:- ಕಾಗೋಡು ತಿಮ್ಮಪ್ಪನವರು ಗಂಗಾಕಲ್ಯಾಣ ಯೋಜನೆ ಬಗ್ಗೆ ಮಾತನಾಡಿದ್ದಾರೆ. ನಮ್ಮನ್ನು ಹೋರಾಟ ಮಾಡಬೇಕೆಂದು ಹುರಿದುಂಬಿಸಿ ಹೇಳುತ್ತಿದ್ದಾರೆ. ಈಗ ಯಾರ ಮೇಲೆ ನಾವು ಹೋರಾಟ ಮಾಡಬೇಕೋ ನಮಗೆ ಗೊತ್ತಿಲ್ಲ. ಏಕೆಂದರೆ ಇದು ಬಹಳ ಪ್ರಯೋಜನ ಆಗತಕ್ಕ ಕಾರ್ಯಕ್ರಮ. ನೀರನ್ನು ಕೊಟ್ಟು ತಕ್ಷಣ ಅವರ ಆರ್ಥಿಕ ಪರಿಸ್ಥಿಯನ್ನು ಬದಲಾವಣೆ ಮಾಡತಕ್ಕ ಕಾರ್ಯಕ್ರಮ ಇದು. ನಮ್ಮ ಕೆಲವು ತಾಲ್ಲೂಕುಗಳಲ್ಲಿ ಏನಾಗಿದೆ ಅಂದರೆ, ಗ್ರೇ ಏರಿಯಾ ಡಾರ್ಕ್ ಏರಿಯಾ ಎಂದು ಆಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು 20-25 ಹರಿಜನ ಕುಟುಂಬಗಳಿಗೆ ನಿಮಗೆ ಕೊಳವೆಬಾವಿ ಮಂಜೂರಾಗಿದೆ, ಪಂಪ್‌ಸೆಟ್ ಇದೆಲ್ಲಾ ಮಂಜೂರಾಗಿದೆ ಎಂದು ಹೇಳಿರುವುದರಿಂದ ಪ್ರತಿದಿವಸ ಆಜ್ಞೆ ತಂದು ತೋರಿಸುತ್ತಿದ್ದಾರೆ. ಆದರೆ ಎಸ್.ಸಿ.ಎಸ್.ಟಿ.ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಕೇಳಿದರೆ ಇದು ಡಾರ್ಕ್ ಏರಿಯಾ, ಇದು ಗ್ರೇ ಏರಿಯಾ, ಆದ್ದರಿಂದ ಇದನ್ನು ನಿಮಗೆ ಮಂಜೂರು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಈ ಕಾರ್ಯಕ್ರಮವನ್ನು ಡಾರ್ಕ್ ಏರಿಯಾ ಗ್ರೇ ಏರಿಯಾ ಎಂಬುದನ್ನು ಬಿಟ್ಟು ನೀವು ಕಾರ್ಯಗತೆ ಮಾಡುತ್ತೀರಾ?

ಶ್ರೀ ಕಾಗೋಡು ತಿಮಪ್ಪ :- ನಾನು ಹೇಳುತ್ತೇನೆ ಕೇಳಿ. ಕನಕಪುರ ತಾಲ್ಲೂಕಿನಲ್ಲಿ ಇದೇ ಪ್ರಶ್ನೆ ಇದೆ. ಇದು ಏನಾಗಿದೆಯೆಂದರೆ ಇವರೆಲ್ಲಾ ಮುಂಚೆ ಬೋರ್‌ವೆಲ್ ಹಾಕಿಸಿಕೊಂಡುಬಿಟ್ಟರು. ಹರಿಜನರು ಹಾಕುವುದಕ್ಕೆ ಹೋದಾಗ ಡಾರ್ಕ್ ಏರಿಯಾ, ಎಕ್ಸಸ್ ಆಗಿದೆ, ನೀರಿಲ್ಲ,-ಇದೆಲ್ಲಾ ಬಂದಿದೆ. ಅದಕ್ಕೆ ನಾನೇನು ಹೇಳುತ್ತೇನೆ ಅಂದರೆ...

ಶ್ರೀ ಪಿ.ಜಿ.ಆರ್.ಸಿಂಧ್ಯ :- ಇವರೆಲ್ಲಾ ಎಂದರೆ ನನ್ನ ಮೇಲೂ ರಿಫ್ಲೆಕ್ಟ್ ಆಗುತ್ತದೆ. ನನ್ನ ಮೇಲೆ ಕೆಟ್ಟ ಅಭಿಪ್ರಾಯ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : - ನಾನೇನು ಹೇಳಿದ್ದೇನೆ ಅಂದರೆ, ಅಂಥ ಕಡೆಗಳಲ್ಲಿ ಹರಿಜನರೇ ಕೊಳವೆಬಾವಿಗಳನ್ನು ತೆಗೆಸಿಕೊಂಡಿದ್ದಾರೆ. ಅದಕ್ಕೆ ನಾವು ಪಂಪ್‌ಸೆಟ್ ಕೊಡೋಣ ಎಂದು ಒಂದು ಘಟಕ ಎಂದು ಮಾಡಿ...

ಶ್ರೀ ಸಿ.ಬೇರೇಗೌಡ:- ಗ್ರೇ ಏರಿಯಾದಲ್ಲಿ, ಡಾರ್ಕ್ ಏರಿಯಾದಲ್ಲಿ ಏನು ಮಾಡಿದ್ದೀರಿ? ನಮ್ಮ ಕೆಲವು ತಾಲ್ಲೂಕುಗಳು ಕತ್ತಲು ಪ್ರದೇಶವಾಗಿವೆ. ಅಲ್ಲಿ ಕೊಳವೆ ಬಾವಿ ಕೊಡುವುದಕ್ಕಾಗುವುದಿಲ್ಲ,ಪಂಪ್‌ಸೆಟ್ ಕೂಡ ಕೊಡುವುದಕ್ಕಾಗುವುದಿಲ್ಲ.ಗ್ರೇ ಏರಿಯಾದಲ್ಲಿ ಪಂಪ್‌ಸೆಟ್ ಕೊಡಬಹುದು. ಡಾರ್ಕ್ ಏರಿಯಾದಲ್ಲಿ ಪಂಪ್‌ಸೆಟ್ ಕೊಡುವುದಕ್ಕಾಗುವುದಿಲ್ಲ, ಕೊಳವೆಬಾವಿ ಕೊಡುವುದಕ್ಕಾಗುವುದಿಲ್ಲ. ಆದರೆ ಎಸ್.ಸಿ.ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್‌ಲ್ಲಿ ನಿಮಗೆ ಕೊಳವೆ ಬಾವಿಯನ್ನು ಮಂಜೂರು ಮಾಡಿದ್ದೇವೆ ಎಂದು ಪತ್ರ ಕೊಟ್ಟಿದ್ದಾರೆ. ಅದನ್ನು ಜನರು ಇಟ್ಟುಕೊಂಡಿದ್ದಾರೆ. ನಮ್ಮ ಏರಿಯಾ ಡಾರ್ಕ್ ಏರಿಯಾ ಆಗಿದೆ. ಅಲ್ಲಿ ಏನು ಮಾಡುತ್ತೀರಿ ದಯಮಾಡಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ :- ಈ ಪ್ರಕರಣದಲ್ಲಿ ಏನಾಗಿದೆಯೆಂದರೆ, 1993ನೇ ಇಸವಿಯಲ್ಲಿ ಕೊನೆಯ ಗಳಿಗೆಯಲ್ಲಿ 150-200 ಬಾವಿಗಳಿಗೆ ಕೋಲಾರ ಜಿಲ್ಲೆಯಲ್ಲಿ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಮುಂಜೂರು ಮಾಡಲಾಗಿದೆ ಎಂದು ಕೊಟ್ಟುಬಿಟ್ಟಿದೆ. ಇದರಲ್ಲಿ 60ರಷ್ಟು ಸಬ್ಸಿಡಿ ಇದೆ, 40 ಪರ್ಸೆಂಟ್ ಬ್ಯಾಂಕ್ ಪೋರ್ಷನ್ ಇದೆ. ಅವರು ಸಾಲ ಕೊಡುವಾಗ ಇದನ್ನು ನೋಡುತ್ತಾರೆ. ತಮ್ಮ ತಾಲ್ಲೂಕಿನಲ್ಲಿ ಸುಮಾರು ಜನ ಕೊಳವೆಬಾವಿ ತೆಗೆಸಿಕೊಂಡಿದ್ದಾರೆ. ಅವರಿಗೆ ಪಂಪ್‌ಸೆಟ್ ಕೊಟ್ಟುಬಿಡೋಣ ಎಂದು ನಾವು ತೀರ್ಮಾನ ಮಾಡಿ ಹಣಕಾಸಿನ ಒಪ್ಪಿಗೆಗೋಸ್ಕರ ಓಡಾಡುತ್ತಿದೆ ಫೈಲ್. ನೀವು ಹೇಳುವುದು ಒಟ್ಟಾರೆ ಅದು. ಕೊಳವೆಬಾವಿಯನ್ನು ಅವರು ತೆಗಿಸಿದ್ದಾರೆ. ಬ್ಯಾಂಕಿನವರು ಏತಕ್ಕೆ ಸಾಲ ಕೊಡುತ್ತಿಲ್ಲ ಎಂದರೆ ಡಾರ್ಕ್ ಏರಿಯಾ ಎಂಬ ಕಾರಣಕ್ಕಾಗಿ. ಅವರೇ ಕೊಳವೆಬಾವಿ ತೆಗೆಸಿ ಕೊಂಡಮೇಲೆ ನಾವು ಪಂಪ್‌ಸೆಟ್ ಕೊಡೋಣ ಎಂದು ತಿರ್ಮಾನ ಮಾಡಿದ್ದೇವೆ.

ಶ್ರೀ ಸಿ.ಬೈರೇಗೌಡ :- ಕರ್ನಾಟಕ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಅಭಿವೃದ್ಧಿ ನಿಗಮದಿಂದ ಆಜ್ಞೆ ಹೋಗಿದೆ. ರಿಗ್‌ನವರಿಗೂ ಕೂಡ ನೀವು ಕೊಳವೆಬಾವಿ ಮಾಡಿಯೆಂದು ಹೇಳಿದ್ದಾರೆ. ಒಂದೆರೆಡು ಕೊಳವೆಬಾವಿ ತೆಗೆದಿದ್ದಾರೆ. ಅವರಿಗೆ ಹಣವಿಲ್ಲ ಇವರಿಗೆ ಸಿಗುವುದಿಲ್ಲ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ನಮ್ಮ ಹತ್ತಿರ ಬಂದು ನೋಡಿ ಸ್ವಾಮಿ ನಮಗೆ ಕಾರ್ಪೊರೇಷನ್‌ನಿಂದ ಕೊಳವೆಬಾವಿ ಮಂಜೂರಾಗಿದೆ ನಮಗೆ ಕೊಳವೆಬಾವಿ ಕೊರೆಸಿಕೊಡಿಯೆಂದು ಬಂದು ನಮ್ಮ ಕುತ್ತಿಗೆ ಹಿಸುಕುತ್ತಾರೆ. ಅವರಿಗೆ ಕೊಳವೆಬಾವಿ ಕೊಡಿಯೆಂದು ನಾವು

ಹೇಳಿದ್ದೇವೆ, ಅದರ ಬಗ್ಗೆ ಆಜ್ಞೆ ಸಹ ಇದೆ. ಆ ಆಜ್ಞೆಯನ್ನು ದಯವಿಟ್ಟು ಜಾರಿಮಾಡಿ. ಇನ್ನು ಮುಂದೆ ಕೊಡುವುದು ಬೇಕಾಗಿಲ್ಲ. ಈಗ ಯಾರಿಗೆ ಆಜ್ಞೆ ಕೊಟ್ಟಿದ್ದೀರಿ ಅವರಿಗೆ ಕೊಳವೆಬಾವಿ ಕೊರೆಸಿ ಕೊಡುವ ಹಾಗೂ ಪಂಪ್‌ಸೆಟ್ ಹಾಕುವ ವ್ಯವಸ್ಥೆಯನ್ನು ದಯವಿಟ್ಟು ಮಾಡುತ್ತೀರಾ? ಇದು ಬಹಳ ತೀವ್ರವಾದ ಸಮಸ್ಯೆಯಾಗಿದೆ.

ಉಪಾಧ್ಯಕ್ಷರು : ಆಯಿತು ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಕಾಗೋಡುತಿಮ್ಮಪ್ಪ : ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ಸ್ವಲ್ಪ ಟೆಕ್ನಿಕಲ್ ಆಗಿ ವಿಚಾರ ಮಾಡಬೇಕಾಗುತ್ತದೆ. ಅವರಿಗೆ ಸಹಾಯ ಮಾಡಬೇಕೆನ್ನುವುದು ನನಗೆ ಸಂಪೂರ್ಣವಾಗಿ ಇದೆ. ತೊಂದರೆಯಾಗದ ರೀತಿಯಲ್ಲಿ ಸಹಾಯ ಮಾಡೋಣವೆಂದು ಹೇಳಿದ್ದೇನೆ,

ದ.ಅ. ಆರೋಗ್ಯ ಮಂತ್ರಿಗಳಿಂದ ಉತ್ತರ

ಡಾ : ಎ.ಬಿ. ಮಲಕರೆಡ್ಡಿ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, 1994-95ನೇ ಸಾಲಿನಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಗಳ ಮೇಲೆ ಬಹಳಷ್ಟು ಜನ ಮಾತನಾಡಲಿಲ್ಲ. ಆದರೆ ವಿರೋಧಪಕ್ಷದ ಉಪ ಧುರೀಣರಾದ ಮಾನ್ಯ ಸಿಂಧ್ಯರವರು ಎರಡು ಮೂರು ಆಸ್ಪತ್ರೆಗಳ ಬಗ್ಗೆ ಅಷ್ಟೆ ಹೇಳಿದ್ದಾರೆ. ಅಮೇಲೆ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡಿದ್ದಾರೆ. ನಾನು ಆಗಾಗ್ಗೆ ಅದಕ್ಕೆ ಧೋರಣೆ ವಿಷಯಗಳಲ್ಲಿ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಒಂದೆರಡು ಆಸ್ಪತ್ರೆಗಳ ಬಗ್ಗೆ ಹೇಳುತ್ತಾ, ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಿದ್ದಾರೆ. ನನ್ನ ವಿಚಾರದಲ್ಲಿ ಹೇಳಬೇಕಾದರೆ, ಜಯದೇವ ಹೃದ್ರೋಗ ಆಸ್ಪತ್ರೆ 1979ನೇ ಇಸವಿಯಲ್ಲಿ ಸ್ಥಾಪನೆಯಾಗಿದೆ. 1984ರಲ್ಲಿ ಅದಕ್ಕೆ ಸ್ವಾಯತ್ತ ಅಧಿಕಾರ ಸಿಕ್ಕಿದೆ. ಸ್ವಾಯತ್ತ ಅಧಿಕಾರ ಸಿಕ್ಕಿದ ಮೇಲೆ ಸಾರ್ವಜನಿಕರಿಂದ ವಿಶೇಷವಾಗಿ ವಂತಿಗೆ ಕೂಡ ಬರುತ್ತಾ ಇತ್ತು. ಸರ್ಕಾರ ಕೂಡ ಅಷ್ಟೇ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದೆ. ಜಯದೇವ ಹೃದ್ರೋಗ ಆಸ್ಪತ್ರೆ ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದಕ್ಷಿಣಭಾರತದಲ್ಲಿ ಇದು ಒಳ್ಳೆಯ ಹೃದ್ರೋಗ ಆಸ್ಪತ್ರೆಯೆಂದು ಹೇಳಬಹುದು. ಆದರೆ ಅಂಕಿ ಅಂಶಗಳ ವಿಷಯದಲ್ಲಿ ಹೇಳಬೇಕಾದರೆ, ಇವತ್ತಿನ ದಿವಸಗಳಲ್ಲಿ ಅದು ಸೇವೆ ಮಾಡತಕ್ಕ ವಿಚಾರದಲ್ಲಿ ಗುಣಮಟ್ಟದ ವಿಚಾರಲ್ಲಿ ಚೆನ್ನಾಗಿಲ್ಲ ರೋಗಿಗಳು ಕೂಡ ಸ್ವಲ್ಪ ಆತಂಕ ವ್ಯಕ್ತಮಾಡುತ್ತಾರೆಂದು ಹೇಳಿದರು. ಅದು ವಾಸ್ತವಾಂಶಕ್ಕೆ ಸತ್ಯವಾಗಿಲ್ಲ. Number of outpatients treated 1989-90 ರಲ್ಲಿ 49 ಸಾವಿರ ಚಿಲ್ಲರೆ ಇತ್ತು. ಈಗ 54 ಸಾವಿರ ಚಿಲ್ಲರೆ ಹೊರರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಒಳರೋಗಿಗಳು 1990-91ರಲ್ಲಿ 4 ಸಾವಿರ ಚಿಲ್ಲರೆ ಇದ್ದರೆ, ಈಗ ಚಿಕಿತ್ಸೆ ಪಡೆಯತಕ್ಕವರ ಸಂಖ್ಯೆ 6ಸಾವಿರ ಚಿಲ್ಲರೆ ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದೇ ರೀತಿಯಲ್ಲಿ ಹಿಂದಿನಿಂದ ಅದು ಪ್ರಾರಂಭವಾದಾಗಿನಿಂದ ಹೆಚ್ಚು ಹೆಚ್ಚು ಜನರು ಈ ಸಂಸ್ಥೆಯಲ್ಲಿ ಬರುತ್ತಿದ್ದಾರೆ. ಆ ಸಂಸ್ಥೆಯಲ್ಲಿ ವಿಶ್ವಾಸವಿದೆ, ಭರವಸೆ ಇದೆ, ನಾವು ಚೆನ್ನಾಗಿ ಗುಣ ಮುಖರಾಗಬಹುದೆಂಬ

ಕಾರಣದಿಂದ ಹಿಂದಿಗಿಂತ ಹೆಚ್ಚು ಹೆಚ್ಚು , ಸಂಖ್ಯೆಯಲ್ಲಿ ಜನರು ಬರುತ್ತಿದ್ದಾರೆ. ಅದಕ್ಕೆ ಸರ್ಕಾರ ಕೂಡ ಇನ್ನೂ ಹೆಚ್ಚು ಸೌಲಭ್ಯಗಳನ್ನು ಒದಗಿಸಿ ಕೊಡುವ ದೃಷ್ಟಿಯಿಂದ ಅತ್ಯಂತ ಆಧುನೀಕರಣ ಉಪಕರಣಗಳನ್ನು ನಾವು ಅಳವಡಿಸಿದ್ದೇವೆ. ಮೊನ್ನೆ ಆಗಸ್ಟ್ 15ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ನಾನು ಇಬ್ಬರೂ ಸೇರಿ ಸುಮಾರು 3ಕೋಟಿ ರೂಪಾಯಿಯ ಅತ್ಯಂತ ಆಧುನೀಕರಣ ಉಪಕರಣವನ್ನು ಉದ್ಘಾಟನೆ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಈ ವಿಚಾರದಲ್ಲಿ ಸೆಳೆಯುತ್ತಿದ್ದೇನೆ. ಸಮಯದ ಅಭಾವದಿಂದ ಆಸ್ಪತ್ರೆಯಲ್ಲಿರುವ ಉಪಕರಣಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗಿರಲಿಲ್ಲ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳು ಮುಖಮಂತ್ರಿಗಳ ರಿಲೀಫ್ ಫಂಢ್‌ನಿಂದ ಹಣ ಪಡೆಯಲು ತಮ್ಮ ಹತ್ತಿರ ಯಾರಾದರೂ ಅರ್ಜಿ ಕೊಟ್ಟರೆ ಹಣ ಸಿಗುತ್ತದೆ. ಸಾಮಾನ್ಯವಾಗಿ ಜನರಸ್ ಆಗಿ ಕೊಡುತ್ತಿದ್ದಾರೆ ಸ್ವಲ್ಪ ಅನುಕೂಲವಾಗಿದೆ. ಬಡಜನರು ಮುಖ್ಯಮಂತ್ರಿಗಳ ಕಛೇರಿಗೆ ಹೋಗಿ ಅಪ್ರೋಚ ಮಾಡುವುದಕ್ಕಾಗುವುದಿಲ್ಲ ಅಂತಹವರಿಗೆ ಬಹಳ ತೊಂದರೆಯಾಗಿದೆ. ಜಯದೇವ ಹೃದ್ರೋಗ ಆಸ್ಪೆತ್ರೆಯಲ್ಲಿ ಮೂರು ವರ್ಷಗಳ ಹಿಂದೆ ಫ್ರೀ ಆಗಿ ಮಾಡುತ್ತಿದ್ದರು. ಈಗ ಬಡವರಿಗೂ ಸಹ ಚಾರ್ಜ್ ಮಾಡುತ್ತಿದ್ದಾರೆ. ಅದನ್ನು ತಾವು ಗಮನಿಸಿದ್ದೀರಾ? ನೀವು 3ಕೋಟಿ ರೂಪಾಯಿ ಎಕ್ವಿಪ್‌ಮೆಂಟ್ ತಂದಿರುವುದು ನಿಜ. ಅದರ ಉಪಯೋಗವಾಗುತ್ತಿರುವುದು ಯಾರಿಗೆ? ಬಡವರಿಗೆ ಉಪಯೋಗವಾಗುತ್ತಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಬಡವರಿಗೆ ಉಪಯೋಗವಾಗದೆ, ನಮ್ಮಂತಹವರಿಗೆ ಫೆಸಿಲಿಟೀಸ್ ಇರತಕ್ಕವರಿಗೆ ಇನ್‌ಕಂಟ್ಯಾಕ್ಸ್ ಕೊಡುವವರಿಗೆ ಉಪಯೋಗವಾದರೆ ಏನು ಉಪಯೋಗ?

ಡಾ : ಎ.ಬಿ. ಮಲಕರೆಡ್ಡಿ : ಮೂರ್‍ನಾಲ್ಕುವರ್ಷಗಳ ಹಿಂದೆ ಮಾನ್ಯಸದಸ್ಯರು ಹೇಳಿದಹಾಗೆ ಬಹಳಷ್ಟು ಜನರಿಗೆ ಉಚಿತ ಚಿಕಿತ್ಸೆ ಸಿಗುತ್ತಿತ್ತು ನಿಜ. ಈಗ ಅದು ಸಾಧ್ಯವಾಗುತ್ತಿಲ್ಲ. ಅದಕ್ಕೆ ಕಾರಣವುಂಟು. The All India Institute of Medical Sciences, the best and richest institution in the country also charges the patients; even a begger patient has to pay . ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಇತ್ತೀಚೆಗೆ ವಾಲ್ವ್ ರಿಪೇರಿ ಮಾಡುತ್ತಿದ್ದಾರೆ. ಒಂದು ವಾಲ್ವ್ ರಿಪೇರಿ ಮಾಡಬೇಕಾದರೆ 60-70 ಸಾವಿರ ರೂಪಾಯಿ ಖರ್ಚು ಬರುತ್ತದೆ. ಪ್ರತಿಯೊಬ್ಬ ರೋಗಿಗೆ ಒಂದೆರಡು ಅಪರೇಷನ್ ಮಾಡಬೇಕಾದರೆ ಯಾವ ಸರ್ಕಾರ ಕೂಡ ಇಷ್ಟೊಂದು ಹಣ ಖರ್ಚುಮಾಡುವುದಕ್ಕೆ ಸಾಧ್ಯವಿದೆ? ಯಾರಿಗೆ ಹಣ ಕೊಡುವ ಯೋಗ್ಯತೆಯಿದೆ ಅವರು ಕೊಡಬೇಕು. ಅವರೇ ಹೇಳಿದಂತೆ ಮುಖ್ಯಮಂತ್ರಿಗಳ ಫಂಡ್‌ನಿಂದ ಉದಾರತೆಯಿಂದ ಕೊಡುತ್ತಿದ್ದಾರೆ. ಅದಕ್ಕೆ ಚಾಜ್ ಮಾಡತಕ್ಕ ಪ್ರಸಂಗ ಬರುತ್ತದೆ. ಇನ್ನೊಂದು ವಿಚಾರ ಪ್ರಸ್ತಾಪ ಮಾಡಿದ್ದಾರೆ. ಎಸ್‌ಡಿಎಸ್ ಸ್ಯಾನಿಟೋರಿಯಂ ಮತ್ತು ಜಯದೇವ ಹೃದ್ರೋಗ ಆಸ್ಪ್ರೆತ್ರೆ ಎರಡನ್ನು ಕ್ಲಬ್ ಮಾಡುವ ಬಗ್ಗೆ ಹೇಳಿದ್ದಾರೆ. ಅವು ಸ್ವಾಯತ್ತಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಲ್ಲ, 40-50ಸಾವಿರ ಖರ್ಚು ಬರುತ್ತದೆ ಯಾರು ಕೊಡಬೇಕು? ಸರ್ಕಾರ ಅನುದಾನವನ್ನು ಕೊಡಬಹುದು ಅಷ್ಟೆ, ತಾವೆಲ್ಲರೂ ಕೂಡಿ ಕಾಂಟ್ರಿಬ್ಯೂಷನ್ ಸಲುವಾಗಿ ಒಂದು ಮಾಸ್ ಕ್ಯಾಂಪ್ ಮಾಡಿದರೆ ಆಗ ಆಗಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯಮಂತ್ರಿಗಳು ಮೊದಲೇ ಹೇಳಿದಹಾಗೆ ಒಂದು ವಾಲ್ವ್ ರಿಪೇರಿ ಮಾಡಬೇಕಾದರೆ 25-30 ಸಾವಿರ ಆಗುತ್ತದೆ ಎರಡೂ ರಿಪೇರಿ ಮಾಡಬೇಕಾದರೆ 60-70 ಸಾವಿರ ಆಗತ್ತದೆ. ಅದನ್ನು ತಂದು ರೀಪ್ಲೇಸ್ ಮಾಡಬೇಕಾದರೆ ಕಾಸ್ಟಲಿಯಾಗುತ್ತದೆಂದು ಹೇಳುತ್ತಿದ್ದಾರೆ. ಎಂತಹ ದೊಡ್ಡವರು ಬಂದರೂ ಮುಖ್ಯಮಂತ್ರಿಗಳ ಫಂಡ್‌ನಿಂದ 20-25ಸಾವಿರಕ್ಕಿಂತ ಹೆಚ್ಚು ಹಣ ಕೊಡುವುದಕ್ಕಾಗುವುದಿಲ್ಲ. ಕೆಲವು ಕಡೆಗಳಲ್ಲಿ 25ಸಾವಿರ ಕೊಟ್ಟಿದ್ದಾರೆ ನಾನೇ ಹೇಳಿದ್ದೇನೆ. ನಾನು ಹೇಳತಕ್ಕದ್ದು ತೀರಾ ಬಡವರೆಂದು ನಿಮಗೆ ಕನ್ವಿನ್ಸ್ ಆದರೆ, 25-30 ಆಗಿರುತ್ತದೆ. ಕೂಲಿ ಮಾಡಿಕೊಂಡು ಜೀವನ ಮಾಡುತ್ತಿರುತ್ತಾರೆ ಅಂತಹವರು ಎಲ್ಲಿಂದ ಹಣ ತರುತ್ತಾರೆ? ನೀವು ಅವರಿಗೆ 15ಸಾವಿರ ಕೊಡುತ್ತೀರಿ. ಉಳಿದ 45 ಸಾವಿರ ಎಲ್ಲಿಂದ ತರುತ್ತಾರೆ? ನಾನು ಏನು ಹೇಳುತ್ತೇನೆ. ನೀವು ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನವರು ಚಾರ್ಜ್ ಮಾಡುತ್ತಾರೆ ಮತ್ತೊಬ್ಬರು ಚಾರ್ಜ್ ಮಾಡುತ್ತಾರೆ ನಾವೂ ಚಾರ್ಜ್ ಮಾಡುತ್ತೇವೆ ಎಂದರೆ it doesn't sound properly. ನಾವು ಈ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಸ್ಥಾಪನೆ ಮಾಡಿದ್ದೇ ಬಡವರಿಗೋಸ್ಕರ, ಸಾಮಾನ್ಯ ಜನರಿಗೋಸ್ಕರ ಪ್ರವೇಟ್ ಸೆಕ್ಟಾರ್‌ನಲ್ಲಿ ಎಸ್ಟಾಟಿನವರದು ಇದೆ ಅಲ್ಲಿ. ದುಡಿದಿರುವವರು ಹೋಗಿ ಆಪರೇಷನ್ ಮಾಡಿಸಿಕೊಳ್ಳುಬಹುದು. I request the Hon.Chief Minister kindly to consider this issue. ಬಡವರಿಗೆ ಬಹಳ ತೊಂದರೆಯಾಗಿದೆ. ಬಡವರಾಗಿರುವವರು ನಿಮ್ಮ ಕಡೆ ಬಂದರೆ ಅವರು ಬಡತನದ ಬಗ್ಗೆ ಜಿಲ್ಲಾಧಿಕಾರಿಗಳಿಂದ ಅಥವಾ ತಹಶೀಲ್ದಾರವರ ಕಡೆಯಿಂದ ವೆರಿಫೈ ಮಾಡಿಸಿ, ತೀರಾ ಬಡವರು ಹಣ ಒದಗಿಸುವುದು ಬಹಳ ಕಷ್ಟವಾಗುತ್ತದೆ. ಚಾರ್ಜ್ ಮಾಡಿತ್ತಿದ್ದೇವೆಂದು ನೀವೇ ಒಪ್ಪಿಕೊಂಡಿದ್ದೀರಿ. ಮೂರು ವರ್ಷಗಳ ಹಿಂದೆ ಬಡವರಿಗೆ ಚಾರ್ಜ್ ಮಾಡುತ್ತಿರಲಿಲ್ಲ, ಈಗ ಚಾರ್ಜ್ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಈಗ ಅಪರೇಷನ್‌ಗೆ ಬರುವವರ ಸಂಖ್ಯೆ ಜಾಸ್ತಿಯಾಗಿದೆ. ಅದನ್ನು ನಾನುಒಪ್ಪಿಕೊಳ್ಳುತ್ತೇನೆ. ನಾನು ಕೇಳುತ್ತಿರುವುದು 100-200ಜನಗಳಿಗೆ ಫ್ರಿ ಆಗಿ ಮಾಡಿ.

ಶ್ರೀ ಎಂ.ವಿರಪ್ಪಮೊಯಿಲಿ : (ಮುಖ್ಯಮಂತ್ರಿ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ಉಪನಾಯಕರಾದ ಸಿಂಧ್ಯಾರವರು ಹೇಳುವಂತಹ ಮಾತು ನಿಜ. ಮಾನವೀಯ ದೃಷ್ಟಿಯಿಂದ ಏನಾದರೂ ಮಾಡಲೇಬೇಕು. ನಮ್ಮ ಹತ್ತಿರ ಹಣ ಕೇಳಲಿಕ್ಕೆ ಬಹಳ ಜನ ಬರುತ್ತಾರೆ. ಹೃದ್ರೋಗ ಮತ್ತು ಕ್ಯಾನ್ಸರ್ ಚಿಕಿತ್ಸೆಗೆ ಹಣ ಬೇಕೆಂದು ದಿನಕ್ಕೆ ಕಡಿಮೆ ಪಕ್ಷ 20ಅರ್ಜಿಗಳು ಬರುತ್ತವೆ. ನಾವು ಅದನ್ನು ಪೂರೈಸುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಗಳ ರಿಲೀಫ್ ಫಂಡ್ ಅಂದರೆ ನಾವು ಬೇರೆಯವರ ಹತ್ತಿರ ಡೊನೇಷನ್ ತೆಗೆದುಕೊಂಡು ಬೇರೆ ಬೇರೆ ಕಾರ್ಪೊರೇಷನ್ಸ್ ಕಂಪನಿಗಳು ಸಾರ್ವಜನಿಕರಿಂದ ತೆಗೆದುಕೊಂಡು ಮಾಡುವುದು. ಸರ್ಕಾರದ ಹಣವನ್ನು ಮುಖ್ಯಮಂತ್ರಿಗಳ ಫಂಡೆಂದು ಕೊಡುವುದಕ್ಕಾಗುವುದಿಲ್ಲ. ನಮಗೂ ಪೂರೈಸುವುದಕ್ಕಾಗುವುದಿಲ್ಲ. ಈಗ ಅವರು ಹೇಳಿದ ಪ್ರಕಾರ ಇದೊಂದು ಸ್ವಾಯತ್ತ ಸಂಸ್ಥೆ. ಸ್ವಾಯತ್ತ ಸಂಸ್ಥೆಯೆಂದರೆ ಸರ್ಕಾರ ಸಹಾಯ ಕೊಡುತ್ತದೆ ಕೇಂದ್ರಸರ್ಕಾರ ಸಹಾಯ ಮಾಡಬಹುದು. ಸಂಪನ್ಮೂಲವನ್ನು ಅವರೇ ಎತ್ತತಕ್ಕ ವ್ಯವಸ್ಥೆ ಮಾಡಬೇಕಾಗುತ್ತದೆ. ಬಡವರು ಅಂದರೆ ಅವರವರ ಆದಾಯದ ಆಧಾರದ ಮೇಲೆ ಅತ್ಯಂತ ಕೆಳ ಅಂತಸ್ತಿನ ಜನರಿಗೆ

ಧರ್ಮಾರ್ಥ, ಹೆಚ್ಚು ಆದಾಯವಿರುವವರಿಗೆ ಸ್ವಲ್ಪ ಕಡಿಮೆ ಬಗ್ಗೆ ಯೋಜನೆ ಮಾಡುತ್ತೇವೆ.

ಡಾ : ಎ.ಬಿ. ಮಲಕರೆಡ್ಡಿ : ಸಂಪೂರ್ಣವಾಗಿ ಫ್ರೀ ಎಂದು ಹೇಳಲಿಲ್ಲ. ಹೆಚ್ಚು ಪ್ರಮಾಣದಲ್ಲಿ ಫ್ರೀ ಅಪರೇಷನ್ ಆಗುತ್ತವೆ. ಆಮೇಲೆ ಅಮಾಲ್ಗಮೇಷನ್ ವಿಷಯದಲ್ಲಿ ಅವರು ಹೇಳಿದ್ದಾರೆ. ಅಂತಹ ಆಲೋಚನೆ ಏನೂ ಸಧ್ಯ ಸಕ್ರಾರದ ಮುಂದೆ ಇಲ್ಲ. ಅದರ ಬಗ್ಗೆ ತಾವೇನೂ ಕಾಳಜಿ ಮಾಡಬೇಕಾದ ಅವಶ್ಯಕತೆ ಇಲ್ಲ. ಅದು ಸರ್ವಥಾ ಸಾಧ್ಯವಿಲ್ಲ.

4.30 ಪಿಎಂ

ಶ್ರೀ ಸಿ. ಬೈರೇಗೌಡ : ಏಕೆಂದರೆ this is an age of specialisation. ಪ್ರತಿಯೊಂದು ಅಂಗಾಂಗಕ್ಕೂ ಅಂಗಾಂಗದಲ್ಲೇ ಇರತಕ್ಕಂಥ ಬೇರೆಬೇರೆ ಭಾಗಗಳಿಗೆ ಸ್ಪೆಷಲೈಸೇಷನ್ ಇದೆ.

ಡಾ : ಎ.ಬಿ. ಮಲಕರೆಡ್ಡಿ : ಆಲೋಚನೆ ಇಲ್ಲ ಎಂದು ನಾನು ಹೇಳಿದೆ.

ಶ್ರೀ ಸಿ. ಬೈರೇಗೌಡ : ಈ ಟಿ.ಬಿ. ಗೂ ಹಾರ್ಟ್‌ಗೂ ಏನು ಸಂಬಂಧ ಇದೆ ಹೇಳಿ ಇದು ಎರಡನ್ನೂ ಅಮಾಲ್ಗಮೇಟ್ ಮಾಡತಕ್ಕಂಥಾದ್ದು ಇದು ಯಾರದ್ದು ಯೋಚನೆಯೋ ಏನೋ ಗೊತ್ತಿಲ್ಲ ಅದನ್ನು ಏಕೆ ಮಾಡಬೇಕೋ ಗೊತ್ತಿಲ್ಲ.

ಶ್ರೀ ಎ.ಬಿ. ಮಲಕರೆಡ್ಡಿ : ಈಗ ಸಂಯ ಬಹಳ ಕಡಿಮೆ ಇದೆ. ನನಗೂ ಒಂದು ಒಂದು ಮಹತ್ವದ ಕಾರ್ಯಕ್ರಮ ಇದೆ. ಆದರೆ ಒಂದು, ಮಾನ್ಯ ಸದಸ್ಯರ ಮುಂದೆ ಕೈಗನ್ನಡಿಯನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ಆರೋಗ್ಯ ಇಲಾಖೆ ಉತ್ತಮವಾದ ಅಧಿಕಾರಿಗಳನ್ನು ಹೊಂದಿದೆ, ಡಾಕಟರುಗಳನ್ನು ಹೊಂದಿದೆ. ಮತ್ತು ಸರ್ಕಾದವರು ಆರೋಗ್ಯ ಇಲಾಖೆಯಲ್ಲಿ ಅತ್ಯಂತ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ ಎಂಬುದಕ್ಕೆ ಒಂದೇಒಂದು ನಿದರ್ಶನವನ್ನು ಕೊಟ್ಟು ನಾನು ತನ್ನ ಮಾತುಗಳನ್ನು ಮುಗಿಸುತ್ತೇನೆ. ಭಾರತ ದೇಶದಲ್ಲಿ ಈ ಉದರೀಕರಣ ನೀತಿ ಜಾರಿಗೆ ಬಂದಮೇಲೆ ಒಂದು ತರಹದ ಮುಕ್ತ ವಾತಾವರಣ ನಿರ್ಮಾಣವಾದ ಮೇಲೆ ಅನೇಕ ಅಂತರರಾಷ್ಟ್ರೀಯ ಸಂಘಸಂಸ್ಥೆಗಳು ಮತ್ತು ರಾಷ್ಟ್ರಗಳು ಈ ದೇಶದ ಒಂದು ಸಮೀಕ್ಷೆಯನ್ನು ಮಾಡಿ ಕರ್ನಾಟಕದಲ್ಲಿ ಆರೋಗ್ಯ ಇಲಾಖೆಯಲ್ಲಿ ಅತ್ಯಂತ ಉತ್ತಮವಾದ ವ್ಯವಸ್ಥೆ ಇದೆ ಎಂದು ಕಂಡುಕೊಂಡು ಸುಮಾರು 1,044 ಕೋಟಿ ರೂಪಾಯಿ ಪ್ರಮಾಣದ ಸಹಾಯವನ್ನು ಕೊಡಲು ಮುಂದೆ ಬಂದಿದ್ದಾರೆ. ಏಕೆ? ಅವರು ಬೆಂಗಳೂರಿಗೆ ಬಂದ ತಕ್ಷಣ ನಮ್ಮ ಸರ್ಕಾರದ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿ, ಮಂತ್ರಿಗಳೊಡನೆ ಸಮಾಲೋಚನೆ ಮಾಡಿ ಇಷ್ಟೊಂದು ಹಣ ಕೊಡಲು ಸಿದ್ಧರಿರಲಿಲ್ಲ. ಅವರು ಬಂದು, ತಮ್ಮ ತಜ್ಞರ ತಂಡಗಳನ್ನು ಕಳಿಸಿ, ರ್‍ಯಾಂಡಮ್ ಆಗಿ ಜರ್ಮನ್ ಸಂಸ್ಥೆಯಂತೂ ಎಂಟು ಜಿಲ್ಲೆಗಳ ಸಮೀಕ್ಷೆಯನ್ನು ಮಾಡಿದೆ. ವರ್ಲ್ಡ್‌ಬ್ಯಾಂಕ್‌ನವರೂ ಕೂಡ ಸಮೀಕ್ಷೆ ಮಾಡಿ ಇಡೀ ಭಾರತ ದೇಶದಲ್ಲಿ ಅತ್ಯಂತ ಉತ್ತಮವಾದ ಇನ್‌ಫ್ರಾಸ್ಟ್ರಕ್ಚರ್, ಪೀಠೋಪಕರಣಗಳು ಮತ್ತು ತಜ್ಞವೈದ್ಯರುಗಳು ಇಲ್ಲಿ ಹೆಚ್ಚು ಪ್ರಮಾಣದಲ್ಲಿ ಇದ್ದಾರೆ ಎಂದು ಕಂಡುಕೊಂಡು, ಬೇರೆ ಬೇರೆ

ಸಂಘಸಂಸ್ಥೆಗಳು ನಮಗೆ ವಿಪರೀತ ಹಣದ ಸಹಾಯವನ್ನು ಕೊಡುತ್ತಾ ಇದ್ದಾರೆ. ಅದರಲ್ಲಿ ಲೋನ್ ಕಾರ್‌ಪೊನೆಂಟ್ ಕೇವಲ ನಾಲ್ಕರಿಂದ ಆರೇ ಪರ್ಸೆಂಟ್ ಮಾತ್ರ. ಇಷ್ಟು ಮಾತ್ರ ಲೋನ್. ಅದೂ ಡೆಫರ್ಡ್ ಪೇಮೆಂಟ್. ಕೆಲವು ಸಂಸ್ಥೆಗಳಿಗೆ ಸುಮಾರು ಹದಿನೈದು ವರ್ಷಗಳಾದ ಮೇಲೆ ನಾವು ಪೇಮಂಟ್ ಮಾಡಬಹುದು. ಇನ್ನೂ ನೆಗೋಸಿಯೇಷನ್ ಸ್ಟೇಜ್‌ನಲ್ಲಿ ಇದ್ದೇವೆ. ಐ.ಪಿ.ಪಿ. ಎಂಟನೇ ಪ್ರಾಜೆಕ್ಟ್‌ರಿಂದ ಬೆಂಗಳೂರು ಸಿಟಿ ಒಂದಕ್ಕೇ ಮೂವತ್ತು ರೂಪಾಯಿಗಳನ್ನು ಕೊಡಲು ವರ್ಲ್ಡ್‌ಬ್ಯಾಂಕ್ ತಯಾರಿದೆ. ಇದು ಬೆಂಗಳೂರು ನಗರದ ಆರೋಗ್ಯ ಸುಧಾರಣೆಗಾಗಿ. ನಮ್ಮಲ್ಲಿ ಹಣ ಇಲ್ಲ, ಸರ್ಕಾರದಲ್ಲಿ ಆರ್ಥಿಕ ಮುಗ್ಗಟ್ಟು ಇದೆ. ಅನೇಕ ಸದಸ್ಯರು ನಮಗೆ ಪ್ರಶ್ನೆ ಮಾಡುತ್ತಾರೆ. ಆಸ್ಪತ್ರೆಗಳು ಶಿಥಿಲಗೊಂಡಿವೆ, ರಿಪೇರಿ ಮಾಡುವುದಕ್ಕೆ ಹಣ ಇಲ್ಲವೆಂದು ಹೇಳುತ್ತಿದ್ದೀರಿ, ಆದ್ದರಿಂದ ಈ ಹಣವನ್ನು ಬೇರೆ ಚಟುವಟಿಕೆಗಳಿಗೆ ವಿನಿಯೋಗ ಮಾಡಿ, ಸಂಘಸಂಸ್ಥೆಗಳಿಂದ ಬರುವಂಥ ಇಂತಹ ಸುಲಭ ಸಾಲವನ್ನು ತೆಗೆದುಕೊಂಡು ನಮ್ಮ ಸಂಸ್ಥೆಗಳನ್ನು ನಾವು ಭದ್ರಗೊಳಿಸಬಹುದು. ಐ.ಪಿ.ಪಿ. ಒಂಭತ್ತನೇ ಪ್ರಾಜೆಕ್ಟ್‌ನಲ್ಲಿ 133 ಕೋಟಿ ರೂಪಾಯಿಗಳನ್ನು ನಾವು ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ಭದ್ರ ಮಾಡುವುದಕ್ಕೆ ಉಪಯೋಗ ಮಾಡುತ್ತಿದ್ದೇವೆ. ಪ್ರೈಮರಿ ಹೆಲ್ತ್ ಸೆಂಟರ್ಸ್ ಎಂದರೆ ತಾಲ್ಲೂಕು ಲೆವಲ್ ಆಸ್ಪತ್ರೆಗಳು, ಕಮ್ಯುನಿಟಿ ಹೆಲ್ತ್ ಸೆಂಟರ್ಸ್. ಮತ್ತು ಸಬ್ ಸೆಂಟರ್ಸ್ ಅಲ್ಲಿ ಬಿಲ್ಡಿಂಗ್ಸ್ ಕಟ್ಟುವುದೇ ಆಗಲಿ, ಅಲ್ಲಿ ಉಪಕರಣಗಳನ್ನು ಒದಗಿಸಿಕೊಡುವುದೇ ಆಗಲಿ, ಮತ್ತು ನರ್ಸ್‌ಗಳಿಗೆ ಹಾಗೂ ಇತರ ಸಿಬ್ಬಂದಿಯವರಿಗೆ ಟ್ರೈನಿಂಗ್ ಕೊಡುವ ಕಾರ್ಯಕ್ರಮದ ಸಲುವಾಗಿ ಈ ಹಣವನ್ನು ಉಪಯೋಗ ಮಾಡುತ್ತಿದ್ದೇವೆ. ಮತ್ತು ಜರ್ಮನ್ ಸಂಸ್ಥೆಗಳು, ಇತ್ತೀಚೆಗೆ ತಾವು ಪತ್ರಿಕೆಗಳಲ್ಲಿ ಓದಿರಬಹುದು. ಪ್ರಧಾನಮಂತ್ರಿಗಳು ಜರ್ಮನ್ ದೇಶದ ವಿದೇಶ ಮಂತ್ರಿಗಳು ಬಂದಾಗ ಒಪ್ಪಂದಕ್ಕೆ ಹಸ್ತಾಕ್ಷರ ಹಾಕಿದ್ದಾರೆ. ಆ ಒಪ್ಪಂದದ ಪ್ರಕಾರ 42 ಕೋಟಿ ರೂಪಾಯಿಗಳು ಜರ್ಮನ್ ಸಂಸ್ಥೆಯಿಂದ ಹಣ ಬರುತ್ತಾ ಇದೆ. ಇದುವರೆಗೆ ನಾವು ಕೇವಲ ಪ್ರೈಮರಿ ಹೆಲ್ತ್ ಸೆಂಟರ್‌ಗಾಗಿ ಹೆಚ್ಚು ಖರ್ಚು ಮಾಡುತ್ತಿದ್ದೆವು. ಈ ಹಣದಿಂದ ಸೆಕೆಂಡರಿ ಲೆವೆಲ್‌ಡಿಸ್ಟ್ರಿಕ್ಟ್ ಆಸ್ಪತ್ರೆಗಳನ್ನು ಭದ್ರ ಮಾಡುವುದಕ್ಕೆ ಅಥವಾ ಅಭಿವೃದ್ಧಿಗೊಳಿಸುವುದಕ್ಕೆ ನಾವು ಈ ಹಣವನ್ನು ಖರ್ಚುಮಾಡುತ್ತಿದ್ದೇವೆ. ಅನೇಕ ವೇಳೆ 20,30 ಲಕ್ಷ ರೂಪಾಯಿಗಳು ರಿಪೇರಿಗೋಸ್ಕರ ಬೇಡಿಕೆ ಬಂದರೂ ಕೂಡ, ಸರ್ಕಾರದಿಂದ ಹಣ ಒದಗಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ಈಗ ಈ 42 ಕೋಟಿ ರೂಪಾಯಿಗಳನ್ನು ನಮ್ಮ 20 ಜಿಲ್ಲಾ ಆಸ್ಪತ್ರೆಗಳಿಗೆ ವಿನಿಯೋಗ ಮಾಡಬಹುದಾಗಿದೆ. ಇದೇ ರೀತಿ ಡಚ್ ಸರ್ಕಾರ ಕೂಡ ಸುಮಾರು ನೂರು ಕೋಟಿ ರೂಪಾಯಿ ಕೊಡುವುದಕ್ಕೆ ಮುಂದಾಗಿದೆ. ಈಗಾಗಲೇ ತಮಗೆಲ್ಲರಿಗೂ ಅನುಭವಕ್ಕೆ ಬಂದಿದೆ. ಹೈವೇ ಮೇಲೆ ಅದರಲ್ಲೂ ಹಿರಿಯೂರಿನಿಂದ ಹಿಡಿದು ಬೆಂಗಳೂರಿನವರಿಗೆ, ತುಮಕೂರಿನಿಂದ ಬೆಂಗಳೂರಿನವರೆಗೆ ಪ್ರತಿದಿವಸ ಒಂದು–ಎರಡು ಭೀಕರ ಅಪಘಾತಗಳು ಆಗುತ್ತಿರುತ್ತವೆ. ಈ ನೂರು ಕೋಟಿ ರೂಪಾಯಿಯಿಂದ ಈ ಮುಖ್ಯವಾದ ಹೆದ್ದಾರಿಗಳಲ್ಲಿ ಪ್ರತಿ 40 ಕಿಲೋಮೀಟರ್‌ಗೆ ಒಂದು ತಾಲ್ಲೂಕು ಹೆಡ್‌ಕ್ವಾಟರ್ಸ್‌ನ್ನು ಆರಿಸಿಕೊಂಡು ಆಕ್ಸಿಡೆಂಟ್ ಕೇರ್ ಸೆಂಟರ್ ಅಥವಾ ಎಮರ್ಜೆನ್ಸಿ ಟ್ರೀಟ್‌ಮೆಂಟ್ ಸೆಂಟರ್ಸ್ ಎಂದು ಸ್ಥಾಪನೆ ಮಾಡುವುದಕ್ಕೆ ನಿರ್ಧಾರ ಮಾಡಿದ್ದೇವೆ. ಅದರಲ್ಲಿ ಅಂದರೆ ನೂರು ಕೋಟಿಯಲ್ಲಿ–ಇಪ್ಪತ್ತು ಕೋಟಿ ರೂಪಾಯಿಗಳನ್ನು ಕ್ಯಾನ್ಸರ್ ರೋಗವನ್ನು ಪ್ರಥಮ ಹಂತದಲ್ಲೇ ಕಂಡುಹಿಡಿಯುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಉದ್ದೇಶ ಹೊಂದಿದೆ. ಇನ್ನೊಂದು ಅತ್ಯಂತ ಸಂತಸದ ಸುದ್ದಿ

ಎಂದರೆ, ಇವತ್ತು ಮುಂಜಾನೆ ಕೇಂದ್ರಸರ್ಕಾರದಿಂದ ಒಂದು ಸುದ್ದಿ ಬಂತು. ಕರ್ನಾಟಕವನ್ನು ವರ್ಲ್ಡ್‌ಬ್ಯಾಂಕ್ ಎಡ್‌ನಲ್ಲಿ ಇನ್‌ಕ್ಲೂಡ್ ಮಾಡಲಾಗಿದೆ, ಅದಕ್ಕೆ ನಿಮ್ಮ ಕಾರ್ಯದರ್ಶಿಯವರನ್ನು ಕಳಿಸಿಕೊಡಿ ಎಂದು ಒಂದು ಪತ್ರ ಬಂದಿದೆ. ಈ ವರ್ಲ್ಡ್‌ಬ್ಯಾಂಕ್ ಸಹಾಯದಲ್ಲಿ 700 ಕೋಟಿ ರೂಪಾಯಿಗಳ ಸಹಾಯ ಬರುತ್ತದೆ. ಈ ಹಣದಿಂದ ನಮ್ಮಲ್ಲಿರತಕ್ಕಂಥ ಎಲ್ಲಾ ಆಸ್ಪತ್ರೆಗಳಲ್ಲಿ, ಆ ಆಸ್ಪತ್ರೆಗಳು ಹಳ್ಳಿಯಲ್ಲಿ ಕೂಡ ಇರಬಹುದು, ತಾಲ್ಲೂಕಿನಲ್ಲಿ ಇರಬಹುದು, ಜಿಲ್ಲೆಯಲ್ಲಿರಬಹುದು. ಅಥವಾ ದೊಡ್ಡದೊಡ್ಡ ನಗರಗಳಲ್ಲಿ ಇರಬಹುದು, ಅಥವಾ ಟೀಚಿಂಗ್ ಆಸ್ಪತ್ರೆಯಾಗಿರಬಹುದು. ಈ ಎಲ್ಲಾ ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸಬಹುದು, ಬಿಲ್ಡಿಂಗ್‌ನಿಂದ ಹಿಡಿದು ಉಪಕರಣಗಳವರೆಗೆ, ಈ ಹಣವನ್ನು ನಾವು ಉಪಯೋಗ ಮಾಡಬಹುದು. ಒಟ್ಟು 1,044 ಕೋಟಿ ರೂಪಾಯಿ ಹಣದಿಂದ ಬರುವ ಐದು ವರ್ಷಗಳಲ್ಲಿ ಅತ್ಯಂತ ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಂತ ಆಧುನಿಕ ವ್ಯವಸ್ಥೆಯನ್ನು ಕೊಡತಕ್ಕಂಥಾದ್ದನ್ನು ನಾವು ಸ್ಥಾಪನೆ ಮಾಡಬಹುದು. ಸನ್ಮಾನ್ಯ ಅಧ್ಯಕ್ಷರೇ, 1975ರಲ್ಲಿ ಭಾರತ ರಾಷ್ಟ್ರ ಕೂಡ ಪ್ರತಿಯೊಬ್ಬ ನಾಗರೀಕನಿಗೆ ಉಚಿತವಾಗಿ ಆರೋಗ್ಯವ್ಯವಸ್ಥೆಯನ್ನು ಮಾಡಿಕೊಡುತ್ತದೆ ಎಂದು ಅಲಮಾಆಟದಲ್ಲಿ ಸಹಿಮಾಡಿದೆ. ಅದಕ್ಕೆ ಅಂಗವಾಗಿ ಕರ್ನಾಟಕ ಸರ್ಕಾರ, ಅನೇಕ ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು, ಸಬ್‌ಸೆಂಟರ್‌ಗಳನ್ನು, ಪ್ರೈಮರಿ ಹೆಲ್ತ್‌ಯುನಿಟ್‌ಗಳನ್ನು, ಕಮ್ಯುನಿಟಿ ಹೆಲ್ತ್‌ಸೆಂಟರ್‌ಗಳನ್ನು, ವಿವಿಧ ಹಂತದಲ್ಲಿ ಆಸ್ಪತ್ರೆಗಳನ್ನು ನಾವು ನಿರ್ಮಾಣ ಮಾಡುತ್ತಿದೆ. ಈ ವರ್ಷ ಅನೇಕ ಬೇಡಿಕೆಗಳು ಸನ್ಮಾನ್ಯ ಸದಸ್ಯರುಗಳಿಂದ ಬರುವುದರಿಂದ, 100ಕ್ಕಿಂತಲೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರ ಉದ್ದೇಶ ಹೊಂದಿದೆ. ಅದಕ್ಕೆ ಹಣವನ್ನು ಕೂಡ ತೆಗೆದಿಡಲಾಗಿದೆ. ಇನ್ನು ಬರುವ ಎರಡು-ಮೂರು ವಾರಗಳಲ್ಲಿ ನೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಈ ಇಲಾಖೆಯಲ್ಲಿ ಇನ್ನೊಂದು ದೂರು ಆಗಾಗ ಕೇಳಿಬರುವುದು ಏನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ತಾಲ್ಲೂಕು ಪ್ರದೇಶಗಳಲ್ಲಿ ಈ ಔಷಧಿಗಳ ಕೊರತೆ ಯಾವಾಗಲೂ ಕಂಡುಬರುತ್ತದೆ, ಸರ್ಕಾರ ಇದರ ಬಗ್ಗೆ ಸಾಕಷ್ಟು ಕ್ರಮ ತೆಗೆದುಕೊಂಡಿಲ್ಲ ಎಂಬುದು. ಈ ವರ್ಷ ಗಣನೀಯವಾಗಿ ಹೆಚ್ಚು ಹಣವನ್ನು ಇದಕ್ಕಾಗಿ ಒದಗಿಸಿ ಕೊಟ್ಟಿದ್ದೇವೆ. ಕಳೆದ ಸಲ 20 ಕೋಟಿ ಕೊಟ್ಟಿದ್ದರೆ, ಈ ಸಲ 30 ಕೋಟಿ ರೂಪಾಯಿಗಳನ್ನು ಕೇವಲ ಔಷಧಿ ಖರೀದಿಗಾಗಿ ಒದಗಿಸಿಕೊಟ್ಟಿದ್ದೇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮೊದಲು 30 ಸಾವಿರ ಇದ್ದವು. ಈಗ ಅದನ್ನು 50 ಸಾವಿರಕ್ಕೆ ಏರಿಸಿದ್ದೇವೆ. ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಮೊದಲು ವರ್ಷಕ್ಕೆ 30 ಸಾವಿರ ರೂಪಾಯಿಗಳನ್ನು ಕೊಡುವುದು ಇತ್ತು. ಈ ವರ್ಷ ಎಪ್ಪತ್ತು ಸಾವಿರಕ್ಕೆ ಏರಿಸಿದ್ದೇವೆ. ಪ್ರತಿ 5 ಸಾವಿರ ಜನಸಂಖ್ಯೆಗೆ ಒಂದು ಉಪಕೇಂದ್ರವನ್ನು ಮಾಡಿದ್ದೇವೆ. ಅದರ ಉಸ್ತುವಾರಿಯನ್ನು ಇಬ್ಬರು ನರ್ಸ್‌ಗಳು ಮಾಡುತ್ತಿದ್ದಾರೆ. ಪ್ರಾಥಮಿಕ ಕಿರಿಯ ಆರೋಗ್ಯ ಸಹಾಯಕ ಮತ್ತು ಕಿರಿಯ ಆರೋಗ್ಯ ಸಹಾಯಕಿ - ಇವರಿಬ್ಬರೂ ಈ ಆರೋಗ್ಯ ಉಪಕೇಂದ್ರದಲ್ಲಿ ಕೆಲಸ ಮಾಡುತ್ತಾರೆ. ಈ ಔಷಧಿಗಳನ್ನು ಮೊದಲು ಏನು ಮಾಡಿತ್ತಿದ್ದೆವು ಎಂದರೆ ಡಿಸ್ಟ್ರಿಕ್ಟ್ ಹೇಲ್ತ್ ಆಫೀಸರ್‌ಗೆ ಕೊಟ್ಟು, ಅಲ್ಲಿಂದ ರವಾನೆಯಾಗುವಂತೆ ಮಾಡುತ್ತಿದ್ದೆವು. ಈ ಸಲ ಆ ವ್ಯವಸ್ಥೆಯನ್ನು ಬದಲು ಮಾಡಿದ್ದೇವೆ. ಈಗ ಬೆಂಗಳೂರಿಂದ ಆ ಉಪಕೇಂದ್ರಕ್ಕೇ ಔಷಧಿಗಳು ಹೋಗುತ್ತವೆ. ಯಾವ ಡಾಕ್ಟರುಗಳು ಕೈಗೂ ಕೊಡುವುದಿಲ್ಲ. ಆ ನರ್ಸ್‌ಗಳ ಕೈಗೇ ಹೋಗುತ್ತದೆ. ಆಕೆ ತಕ್ಷಣ ಹಳ್ಳಿಗಳಲ್ಲಿ ಯಾವ್ಯಾವ ರೋಗಗಳನ್ನು

ಪತ್ತೆ ಹಚ್ಚಿರುತ್ತಾರೆ, ಅಲ್ಲಿ ತಕ್ಷಣ ಔಷಧ ಕೊಟ್ಟು ಚಿಕಿತ್ಸೆ ಮಾಡಲು ಇದರಿಂದ ಸಾಧ್ಯವಾಗುತ್ತದೆ. ಇನ್ನೊಂದು ದೂರು ಆಗ್ಯಾಗೆ ಕೇಳಿಬರುವುದು ಏನೆಂದರೆ .....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳು ಒಳ್ಳೆಯ ಯೋಜನೆಗಳು, ಸಲಹೆಗಳನ್ನು ಕೊಡುತ್ತಾ ಇದ್ದಾರೆ ಈ ಕಾಲರಾ ಮತ್ತು ಮೆದುಳು ಜ್ವರ ಬಂದಾಗ ಔಷಧಿಗಳ ಕೊರತೆ ಇರುತ್ತದೆ ಎಂದು ಅನೇಕ ಟೀಕೆಗಳು ಕೇಳಿ ಬರುತ್ತವೆ. ಅನೇಕ ಕಡೆ ಔಷಧಿಗಳು ನಿಧಾನವಾಗಿ ಬಂದಿರತಕ್ಕಂಥಾದ್ದು ಕೂಡ ಇದೆ. ಈ ಮುನ್ನೆಚ್ಚರಿಕೆ ಕಾರ್ಯಕ್ರಮವಾಗಿ ಏನೇನು ಕ್ರಮವನ್ನು ತಾವು ಕೈಗೊಂಡಿದ್ದೀರಿ?

ಡಾ : ಎ.ಬಿ. ಮಲಕರೆಡ್ಡಿ : ಹೋದ ತಿಂಗಳು 10 ಜಿಲ್ಲೆಗಳಲ್ಲಿ ಪ್ರವಾಹ ಬಂದಾಗ ಜನರಿಗೆ ಖಾಯಿಲೆ ಬಂದು ನರುಳುತ್ತಿದ್ದರು. ಆಗ ಈ 10 ಜಿಲ್ಲೆಗಳಿಗೆ ಸುಮಾರು 70 ಜನರ ತಂಡಗಳನ್ನು ಮಾಡಿ ಅವರಿಗೆ ವಾಹನ ಕೊಟ್ಟು 73 ಲಕ್ಷ ರೂಪಾಯಿಗಳ ಔಷಧಿಯನ್ನು ಕೊಟ್ಟು ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲೇ ಇದ್ದಾರೆ ಅವರು ಇನ್ನು ನಮಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಇಲಾಖೆಯಿಂದ ನಾನು ಈ ಹಣವನ್ನು ರೆಗ್ಯುಲರ್ ಬಜಟ್‌ನಿಂದ್ ತೆಗೆದು ಖರ್ಚು ಮಾಡಿದ್ದೇನೆ. ಈ ಇಲಾಖೆಯಲ್ಲಿ ಕಾಂಟ್ರಿಬ್ಯೂಶನ್ ಹಣ ಇಲ್ಲ. ಇನ್ನು ಉಳಿದ ಹಣ 50 ಲಕ್ಷ ರೂಪಾಯಿಗಳು ಅವರು ಕೊಡಬೇಕು. ಆದರೆ ಜನರಿಗೆ ತೊಂದರೆ ಬರಬಾರದು ಎನ್ನುವ ದೃಷ್ಟಿಯಿಂದ ಸಾಮಾನ್ಯ ಬಜೆಟ್ ಹಣದಿಂದ ಖರ್ಚು ಮಾಡಿ ಕ್ಲೋರೋಪಿನ್ ಟ್ಯಾಬ್‌ಲೇಟ್ಸ್ ಕೊಂಡುಕೊಂಡು ಪ್ರತಿಯೊಂದು ಮನೆಗೂ ಹಂಚಿ ಒಂದು ಕೇಸ್ ಕೂಡ ಗ್ಯಾಸ್ಟ್ರೋ ಎಂಟ್ರಾಸ್ಟ್ ಯಾವಾಗ ಪ್ರವಾಹ ಬಂದಾಗ ಕಲುಷಿತ ನೀರು ಕುಡಿದಾಗ ಅದು ಗ್ಯಾಸ್ಟ್ರೋ ಎಂಟರ್‌ಟೀಸ್ ಬರುತ್ತದೆ. 10 ಜಿಲ್ಲೆಗಳಲ್ಲಿ ಒಂದು ಕೇಸ್ ಕೂಡ ರಿಪೋರ್ಟ್ ಆಗಿಲ್ಲ ಸರ್ಕಾರ ಸಾಕಷ್ಟು ಕಾಳಜಿಯನ್ನು ತೆಗೆದುಕೊಂಡು ಮತ್ತು ನೀರನ್ನು ಸ್ವಚ್ಛತೆ ಮಾಡುವುದರಲ್ಲಿ ಮನೆ ಮನೆಗೂ ಹೋಗಿ ಕ್ಲೋರಿನ್ ಗುಳಿಗೆಯನ್ನು ಕೊಟ್ಟು ನೀರನ್ನು ಸ್ವಚ್ಛ ಮಾಡಿದ್ದರಿಂದ ಅವರಿಗೆ ಯಾವ ಖಾಯಿಲೆಯೂ ಬರಲಿಲ್ಲ. ಅದರಲ್ಲೂ ಕೂಡ ಮಳೆಗಾಲದಲ್ಲಿ ರೈತರು ಹೊಲದಲ್ಲಿ ನೀರು ಕುಡಿಯುತ್ತಾರೆ ಹೊಲದ ನೀರು ಸ್ವಚ್ಛ ಇರದ ಕಾರಣದಿಂದ ಅವರಿಗೆ ಗ್ಯಾಸ್ಟ್ರೋ ಎಂಟರ್‌ಟೀಸ್ ಆಗುತ್ತದೆ. ಆದ್ದರಿಂದ ಆ ಖಾಯಿಲೆ ಬಂದಾಗ ತಕ್ಷಣ ಪರಿಹಾರ ಒದಗಿಸುವುದು ಪ್ರತಿಯೊಂದು ಆರೋಗ್ಯ ಕೇಂದ್ರದಲ್ಲಿ ಮತ್ತುತಾಲ್ಲೂಕು ಹೇಡ್‌ಕ್ವಾಟ್ರಸ್‌ನಲ್ಲಿ ಸಾಕಷ್ಟು ಒ.ಆರ್.ಎಸ್ ಪ್ಯಾಕೆಟ್ಸ್ ಎಂದು ಕರೆಯುತ್ತೇವೆ ಮತ್ತು ರಕ್ತನಾಳದಲ್ಲಿ ಕೊಡತಕ್ಕಂಥ ಪ್ಲೂಯಿಡ್ಸ್ ಅನ್ನು ನಾವು ಎಲ್ಲಾ ಕಡೆ ವ್ಯವಸ್ಥೆ ಮಾಡಿರುವುದರಿಂದ ನಿಮಗೆ ನಿಜ ಹೇಳಬೇಕೆಂದರೆ ಗೌರಿಬಿದನೂರಿನಲ್ಲಿ ಈ ರೀತಿ ಗ್ಯಾಸ್ಟ್ರೋ ಎಂಟರ್‌ಟೀಸ್ ಕೇಸ್‌ಗಳು ಬಂದಾಗ ಮೂರು ದಿನದಲ್ಲಿ ಆ ರೋಗವನ್ನು ನಿಯಂತ್ರಣ ಮಾಡಿದ್ದರಿಂದ ಜನರು ಹೇಳಿದಲು ಸ್ವಾಮಿ ನಿಮ್ಮ ಆರೋಗ್ಯ ಇಲಾಖೆಯವರು ಬಹಳ ಉತ್ತಮವಾದ ಸೇವೆಯನ್ನು ಮಾಡಿದ್ದಾರೆ, ನಿಮ್ಮ ಆರೋಗ್ಯ ಇಲಾಖೆ ಕಡೆಯಿಂದ ನಮಗೆ ತೊಂದರೆ ಆಗಿಲ್ಲ, ಆದರೆ ನಿಸರ್ಗದ ಕೃಪೆಯಿಂದ ನಮಗೆ ಈ ಖಾಯಿಲೆ ಬಂದಿದೆ ಎಂದು ಹೇಳಿದರು. ಹೀಗೆ ಅನೇಕ ಉತ್ತಮವಾದ ಯೋಜನೆಗಳನ್ನು ಹಾಕಿಕೊಂಡು ....

ಶ್ರೀ ಸಿ ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈಗ ಕಳೆದ ಹಲವಾರು ವರ್ಷಗಳಿಂದ ನಮ್ಮ ದೇಶದಲ್ಲಿ ಅತ್ಯಂತ ಭೀಕರವಾದಂತಹ ಮಾರಕವಾದಂತಹ ರೋಗ ಬರುತ್ತಿದೆ. ಏಯ್ಡ್ಸ್ ಈಗ ಏನಾಗುತ್ತಿದೆ ಎಂದರೆ, ಇದನ್ನು ತಡೆಗಟ್ಟತಕ್ಕಂಥ ಕೆಲಸ ಆಗುತ್ತಿಲ್ಲ. ಉದಾಹರಣೆಗೆ ಈಗ ಸೇವಿಂಗ್ಸ್ ಶಾಪ್ಸ್ ಇವೆ, ಅವರು ಉಪಯೋಗಿಸಿದಂತಹ ಬ್ಲೇಡ್ಸ್ ಮತ್ತು ಕತ್ತಿಯನ್ನು ಮತ್ತೆ ಮತ್ತೆ ಉಪಯೋಸುತ್ತಾರೆ. ಅದನ್ನೂ ಸ್ಟರಲೈಜ್ ಮಾಡುವುದಿಲ್ಲ ಏನು ಮಾಡುವುದಿಲ್ಲ ಯಾವುದೇ ಶೇವಿಂಗ್‌ಶಾಪ್ಸ್‌ಗೆ ಹೋದರೂ ಸಹ ಚವರ ಮಾಡತಕ್ಕಂಥ ಕತ್ತಿಯನ್ನು ಸ್ಟರ್‌ಲೈಜ್ ಮಾಡುವಂತೆ ಯಾವ ನಿರ್ಬಂಧ ಕೂಡ ಇಲ್ಲ. ಉಪಯೋಗಿಸಿದಂತಹ ಬ್ಲೇಡ್ ಇರುತ್ತದೆಯಲ್ಲಾ ಅದನ್ನು ಕೂಡ ಉಪಯೋಗಿಸುತ್ತಾರೆ. ಜೊತೆಗೆ ಸಿರಂಜಸ್ ಇದ್ದಾವಲ್ಲ ರೀ ಸೈಕಲ್ ಮಾಡತಕ್ಕಂಥಾದ್ದು ಡಿಸ್‌ಪೋಜಲ್ ಸಿರಂಜಸ್‌ನ್ನು ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ರೀ ಸೈಕಲಿಂಗ್ ಮಾಡುತ್ತಿದ್ದಾರೆ ಎನ್ನುವ ದೂರು ಇದೆ. ಇದರಿಂದ ಈಗಾಗಲೇ ಸಾಕಷ್ಟು ಅನಾಹುತಗಳು ಆಗುತ್ತಿದೆ. ಈ ಖಾಯಿಲೆ ಬಂದರೆ ಏನು ಮಾಡುವುದಕ್ಕಾಗುವುದಿಲ್ಲ ಕೊನೆಯ ಪಕ್ಷ ಅದನ್ನು ತಡೆಗಟ್ಟುವಂತಹ ಕ್ರಮ ಏನು ಮಾಡಿದ್ದೀರಿ?

ಶ್ರೀ ವಾಟಾಲ್ ನಾಗರಾಜ್ :- ತಡೆಗಟ್ಟುವ ಮಾತು ಇರಲಿ ಯಾರ್ಯಾರಿಗೆ ಬಂದಿದೆ ಎಂದು ಹೇಳಿ.

ಡಾ :- ಎ.ಬಿ.ಮಲಕರೆಡ್ಡಿ : ಈ ಪ್ರೋಗ್ರಾಂ ನೂರಕ್ಕೆ ನೂರರಷ್ಟು ಕೇಂದ್ರದ ಯೋಜನೆ. ನೂರಕ್ಕೆ ನೂರರಷ್ಟು ಹಣದ ಮಂಜೂರಾತಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದು ಒಂದು ದೊಡ್ಡ ವಿಷಯವೇ ಇದೆ. ಅದಕ್ಕೆ ವಿದ್ಯಾಭ್ಯಾಸ ಬಹಳ ಮುಖ್ಯ ಅದಕ್ಕೆ ಔಷಧಿ ಇಲ್ಲ ಅದನ್ನು ಪ್ರಿವೆಂಟ್ ಮಾಡುವುದಕ್ಕೆ ಬೇರೆ ದಾರಿ ಇಲ್ಲ. ಸಮಾಜದಲ್ಲಿ ಎಲ್ಲಿಯವರೆಗೆ ಕೆಲವು ಈವಿಲ್ಸ್ ಇರುತ್ತವೆ ಅಲ್ಲಿಯವರೆಗೆ ಇದನ್ನು ತಡೆಗಟ್ಟಲು ಕಷ್ಟ ಮತ್ತು ಜನರಲ್ಲಿ ವಿದ್ಯಾಭ್ಯಾಸ ಇರಬೇಕು. ಅದಕ್ಕಾಗಿ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ರೇಡಿಯೋದಲ್ಲಿ ಮತ್ತು ಟಿ.ವಿ. ಯಲ್ಲಿ ಅಡ್ವರ್‌ಟೈಜ್‌ಮೆಂಟ್ಸ್ ಕೊಡುತ್ತಿದ್ದೇವೆ. ಇದು ಬಹಳ ದೊಡ್ಡ ವಿಷಯ ಅದರ ಬಗ್ಗೆ ಸಾಕಷ್ಟು ಕಾಳಜಿಯನ್ನು ವಹಿಸಿದ್ದೇವೆ. ಈಗಾಗಲೇ ಸುಮಾರು 12 ಎಲಸ್ಟ್ರೋ ಲೀಡರ್ಸ್ ಅದರ ಶೋಧನೆಗಾಗಿ ಪರ್ಚೇಸ್ ಮಾಡಲು ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದನ್ನು ಮಾಡೋಣ ಅದು ಬಹಳ ಉತ್ತಮವಾದ ಸಲಹೆ.

ಶ್ರೀ ಸಿ. ಬೈರೇಗೌಡ :- ತಾವು ಆ ದಿಕ್ಕಿನಲ್ಲಿ ಆಲೋಚನೆ ಮಾಡಿ.

ಡಾ . ಎ .ಬಿ. ಮಲಕರೆಡ್ಡಿ :- ಹೀಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಉತ್ತಮವಾದ ಸೇವೆಯನ್ನು ಒದಗಿಸಲು ಇನ್ನೊಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಈ ಸರ್ಕಾರ ಬಂದ ಮೇಲೆ ಸುಮಾರು 5 ಸಾವಿರ ಪ್ಯಾರಾ ಮೆಡಿಕಲ್ ವರ್ಕರ್ಸ್, ಅಪಾಯಿಂಟ್‌ಮೆಂಟ್‌ಗಾಗಿ ಸಚಿವ ಸಂಪುಟ ಅನುಮತಿ ಕೊಟ್ಟಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್

ಕ್ಲಿಯರೆನ್ಸ್ ಕೊಟ್ಟಿದೆ ಇನ್ನೇನು ಸಿಬ್ಬಂದಿಯನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಲು ಕೆಲಸ ಶುರು ಆಯಿತು, ಅಷ್ಟರಲ್ಲಿ ಸುಪ್ರೀಂ ಕೋರ್ಟ್‌ನಿಂದ ಸ್ಟೇ ಆರ್ಡರ್ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. 1987ನೇ ಇಸವಿಯಿಂದ ತಾವು ಅಪಾಯಿಂಟ್‌ಮೆಂಟ್ಸ್ ಮಾಡಿಕೊಂಡಿದ್ದು ಇಲ್ಲ. 1987ನೇ ಇಸವಿಯಿಂದ ಬ್ಯಾನ್ ಆರ್ಡರ್ ಇತ್ತು. ಆ ಬ್ಯಾನ್ ಆರ್ಡರನ್ನು ತೆಗೆದು ಸರ್ಕಾರ ಸುಮಾರು 5 ಸಾವಿರ ಜನರ ಅಪಾಯಿಂಟ್‌ಮೆಟ್ಸ್ ಮಾಡಿಕೊಳ್ಳಬಹುದು ಎಂದು ಅನುಮತಿ ಕೊಟ್ಟಿದೆ. ಅವರನ್ನು ನೇಮಕ ಮಾಡಿಕೊಳ್ಳುವ ವಿವಿಧ ಹಂತದಲ್ಲಿ ನಾವು ಇದ್ದೇವೆ. ಹೀಗೆ ಅನೇಕ ಉತ್ತಮವಾದ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ಮಾನ್ಯ ಸದಸ್ಯರ ಸಹಕಾರ ಮತ್ತು ಸಹಾಯದಿಂದ ಇನ್ನೂ ಉತ್ತಮವಾದ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಕೆ.ಆರ್. ಆಸ್ಪತ್ರೆ ಬಗ್ಗೆ ಮಾತನಾಡಿದ್ದೆ.

ಡಾ . ಎ.ಬಿ. ಮಲಕರೆಡ್ಡಿ :-ಕೆ.ಆರ್.ಆಸ್ಪತ್ರಿ ಬಗ್ಗೆ ಅವರು ಮಾತನಾಡಿದರು ಕೆ.ಆರ್. ಆಸ್ಪತ್ರೆ ಎಷ್ಟು ಗಲೀಜು ಆಗಿದೆ, ಆ ಆಸ್ಪತ್ರೆಗೆ ಹೋಗಿ ಬರುವಷ್ಟರಲ್ಲಿ ನಾವು ಖಾಯಿಲೆ ಅಂಟಿಸಿಕೊಂಡೇ ಬರುತ್ತೇವೆ ಎನ್ನುವ ಮಾತನ್ನು ಹೇಳಿದರು. ಅವರು ಏನೋ ಒಂದು ರೀತಿ ಅಲಂಕಾರವಾಗಿ ಹೇಳಿದರು.

ಶ್ರೀ ವಾಟಿಳ್ ನಾಗರಾಜ್ :- ನಾಳೆ ತಾವು ನನ್ನ ಜೊತೆ ಬನ್ನಿ ಬರುವಷ್ಟರಲ್ಲಿ ಏನಾದರೂ ಆಗಿರುತ್ತದೆ.

ಡಾ . ಎ.ಬಿ. ಮಲಕರೆಡ್ಡಿ :- ಅದಕ್ಕೆಲ್ಲಾ ಒಂದು ಕಾರಣ ಇದೆ. ನಾನು ಹೇಳುವುದೇನೆಂದರೆ, 1987ನೇ ಇಸವಿಯಿಂದ ಏನು ಅಪಾಯಿಂಟ್‌ಮೆಂಟ್ಸ್ ಮಾಡಿಕೊಳ್ಳಲು ಬ್ಯಾನ್ ಆರ್ಡರ್ ಬಂತು ಅದು ಕಾರಣ. ಅದಕ್ಕೆ ಈಗ ನಾವು ಏನು ಮಾಡಿದ್ದೇವೆ. ಅಂದರೆ, ಗ್ರೂಪ್ ಡಿ ಅಪಾಯಿಂಟ್‌ಮೆಂಟ್ಸ್ ಎಷ್ಟು ಖಾಲಿ ಇದೆ ಅಷ್ಟೆಲ್ಲಾ ಅಪಾಯಿಂಟ್‌ಮೆಂಟ್ಸ್ ಮಾಡಿಕೊಳ್ಳಬೇಕು. ಯಾರು ಅಂದರೆ ಡಿಸ್ಟ್ರಿಕ್ಟ್ ಸರ್ಜನ್ ಮತ್ತು ಡಿ.ಎಚ್.ಒ ಮತ್ತು ಸೂಪರಿನಟೆಂಟ್ಸ್ ಆಸ್ಪತ್ರೆ ಅವರು ಅಪಾಯಿಂಟ್‌ಮೆಂಟ್ಸ್ ಮಾಡಿಕೊಳ್ಳಬಹುದು ಎಂದು ಅಧಿಕಾರ ಕೊಟ್ಟಿದ್ದೇವೆ. ಅವರು ಎಂಪ್ಲಾಯಿಮೆಂಟ್ ಎಕ್ಸಚೇಂಜ್‌ನಿಂದ ಅರ್ಜಿಗಳನ್ನು ತರಿಸಿಕೊಂಡು ಅವರು ಅಪಾಯಿಂಟ್‌ಮೆಂಟ್ಸ್ ಮಾಡಿಕೊಳ್ಳಬಹುದು. ಆಮೇಲೆ ಸ್ವಚ್ಚತಾ ಕೆಲಸ ಚೆನ್ನಾಗಿ ಆಗುತ್ತದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :- ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ನಿಜ. ಇಂಡಿಯಾ ಪಾಪ್ಯುಲೇಶನ್ ಪ್ರಾಜೆಕ್ಟ್ ಮತ್ತು ಅದರ್ ವೆರಿಯಸ್ ಸ್ಕೀಮ್ಸ್‌ಗೆ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಫೈನಾನ್ಸ್ ಬಂದಿರತಕ್ಕಂಥಾದ್ದರ ಬಗ್ಗೆ ಸಾಲದ ರೂಪದಲ್ಲಿ ಬಂದಿರತಕ್ಕಂಥ ಭರವಸೆಗಳ ಬಗ್ಗೆ ಈ ಸದನಕ್ಕೆ ತಿಳಿಸಿದ್ದಾರೆ. ಇದು ಹೊಸ ಕಾರ್ಯಕ್ರಮ ಏನು ಅಲ್ಲ. ಇಂಡಿಯಾ ಪಾಪ್ಯುಲೇಶನ್ ಪ್ರಾಜೆಕ್ಟ್ 1979ರಿಂದ ಇದು ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್,

ಥರ್ಡ್ ಸ್ಟೇಜ್, ಅಂತ ಈಗ ನಾವು 9ನೇ ಸ್ಟೇಜ್‌ನಲ್ಲಿ ಇದ್ದೇವೆ. ಅದನ್ನು ಕವರ್ ಮಾಡುತ್ತಿದ್ದಾರೆ. ಬಹಳ ಮುಖ್ಯವಾಗಿ ಅಗಬೇಕಾದಂಥಾದ್ದು, ಈ ಇಂಡಿಯಾ ಪಾಪ್ಯುಲೇಶನ್ ಪ್ರಾಜೆಕ್ಟ್‌ನಲ್ಲಿ ಪಿ.ಎಚ್.ಸಿ ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಎ.ಎನ್.ಎಂ. ಸೆಂಟರ್‌ಗಳನ್ನು ಕಟ್ಟಲಿಕ್ಕೆ ಈಗ ಇದೆ ಆದರೆ ಮುಖ್ಯವಾಗಿ ಹಳ್ಳಿಗಳಲ್ಲಿ ಇರಬೇಕಾದುದು ಏನು? ಈಗ ತಾವು ಹೇಳಿದಿರಿ, 1983ರಿಂದ 87ರವರೆಗೂ ಬ್ಯಾನ್ ಆರ್ಡರ್ ಇರಲಿಲ್ಲ. ನಮ್ಮ ಫೈನಾನ್ಸ್ ಚೆನ್ನಾಗಿರಲಿಲ್ಲ ಅದಕೋಸ್ಕರ ನಾವು ಬ್ಯಾನ್ ಆರ್ಡರ್ ಮಾಡಿದ್ದು ನಿಜ. ಅದಾದ ಮೇಲೆ ಇದುವರೆಗೂ ಅಕ್ಚುಯಲ್ ಆಗಿ ರಿಕ್ರೂಟ್‌ಮೆಂಟ್ ಆಗಿಲ್ಲ. ತಾವು ಬ್ಯಾನ್ ಆರ್ಡರ್ ಲಿಫ್ಟ್ ಮಾಡಿ ರಿಕ್ರೂಟ್‌ಮೆಂಟ್ ಮಾಡಬೇಕೆಂದು ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿದ್ದೀರಿ ಹೊರತು ಇನ್ನು ಒಂದೂವರೆ ತಿಂಗಳಲ್ಲಿ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ನೀವು ಏನು ಮಾಡುತ್ತೀರೋ ಗೊತ್ತಿಲ್ಲ ಸುಪ್ರೀಂ ಕೋರ್ಟಿಗೆ ಬೇರೆ ಹೋಗಿದೆ. ಈ ರಿಜರ್‌ವೇಶನ್ ಬ್ಯಾಕವಗ್ರೌಂಡ್‌ನಲ್ಲಿ ನಿಮ್ಮ ಕೈಯಲ್ಲಿ ಏನಾಗುತ್ತದೆಯೋ ಗೊತ್ತಿಲ್ಲ ಅಲ್ಟಿಮೇಟ್‌ಲಿ ಫಲಿತಾಂಶ 5 ವರ್ಷಗಳ ತರುವಾಯ ನಿಮ್ಮ ಪರ್‌ಫಾರ್ಮೆನ್ಸ್ ನೋಡಿದರೆ ಅದು ಸೊನ್ನೆ. ಏನೂ ಆಗಿಲ್ಲ. ಆದ್ದರಿಂದ ನಾನು ಆ ಆಸ್ಪತ್ರೆಯನ್ನು ಅಲ್ಲಿಗೆ ಬಿಟ್ಟು ಬಿಡುತ್ತಿದ್ದೇನೆ. ನಾನೇನು ಕೇಳುತ್ತಿದ್ದೇನೆಂದರೆ, ಡಾಕ್ಟರೇ ತಾವು ಪ್ರೊಫೆಶನಲ್ ಡಾಕ್ಟರ್ ತಾವು ಮಾಡಬೇಕಾದಂಥಾದ್ದು ಏನೆಂದರೆ, ಇದು ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ, ಎಲ್ಲರಿಗೂ ಸಂಬಂಧಪಟ್ಟಂತೆ,ಹೋಬಳಿ ಹೆಡ್‌ಕ್ವಾರ್ಟಸ್‌ನಲ್ಲಿ ಮಿನಿಮಮ್ ಮೆಟರ್ನಿಟಿ ಹೋಮ್ ಇಲ್ಲ. ಒಂದು ಹೋಬಳಿ ಅಂದರೆ ಮಿನಿಮಮ್ 70 ಸಾವಿರದಿಂದ ಒಂದು ಲಕ್ಷ ಜನ ಪಾಪ್ಯುಲೇಶನ್ ಅಂದರೆ 40 ಸಾವಿರ ಹೆಣ್ಣು ಮಕ್ಕಳು ಇರುತ್ತಾರೆ. ನಾವು ಹೋಗಿ ಆ ಎ.ಎನ್‌ಗಳಿಗೆ ಮತ್ತು ಆ ಹೆಲ್ತ್ ಅಸಿಸ್ಟೆಂಟ್ಸ್‌ಗೆ ಡೆಲಿವರಿಗೆ ಹೆಲ್ಪ ಮಾಡಬೇಕೆಂದು ಹೇಳುತ್ತೇವೆ. ಅದನ್ನು ನಾವು ಪುಸ್ತಕದಲ್ಲಿ ಬರೆದುಕೊಂಡರೂ ಅವರು ಏನು ಮಾಡುತ್ತಾರೆಂದು ನಮಗೆ ಗೊತ್ತಿದೆ. ಇವತ್ತು ಕ್ಲಾಸ್ ಡಿ ನವರು ನಾವು ಹೇಳುತಕ್ಕಂಥಾದ್ದನ್ನು ಸಂಪೂರ್ಣವಾಗಿ ಕೇಳುವಂತೆ ಇದಿದ್ದರೆ ಏಕೆ ಅಸ್ಪತ್ರೆಗಳು ಈ ರೀತಿ ಇರುತ್ತಿದ್ದವು. ಬಹಳ ಮುಖ್ಯವಾಗಿ ಆಗಬೇಕಾದಂತಾದ್ದು ಮೆಟರ್ನಿಟಿ ಹೋಮ್‌ಗಳನ್ನು ಹೋಬಳಿ ಹೆಡ್‌ಕ್ವಾರ್ಟಸ್‌ಗಳಲ್ಲಿ ಮಿನಿಮಮ್ As a matter of policy ತೆಗೆದುಕೊಳ್ಳಿ. ಕರ್ನಾಟಕ ರಾಜ್ಯದಲ್ಲಿ ಸುಮಾರು 400 ಕಡೆಗಳಲ್ಲಿ ಮೆಟರ್ನಿಟಿ ವಾರ್ಡ್‌ಗಳನ್ನು ತೆಗೆದು ಲೇಡಿ ಮೆಡಿಕಲ್ ಆಫೀಸರ್ಸ್‌ನ್ನು ಅಪಾಯಿಂಟ್ ಮಾಡಿಕೊಳ್ಳಲು ಸಾಧ್ಯವೇ?

ಡಾ ಎ.ಬಿ. ಮಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ, ಜೂನ್ 20ಕ್ಕೆ 300 ಜನ ಡಾಕ್ಟರ್ಸ್‌ನ್ನು ಸರ್ಕಾರ ಅಪಾಯಿಂಟ್‌ಮೆಂಟ್ ಮಾಡಿಕೊಂಡಿತು. ಅದರಲ್ಲಿ 52 ಜನ ರಿಪೋರ್ಟ್ ಮಾಡಿಕೊಂಡಿದ್ದಾರೆ ನಾವು ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಪಿ.ಜಿ.ಅರ್ ಸಿಂಧ್ಯ :- ತಾವು ಮಾತನಾಡಬೇಕಾದರೆ ನೀವು ನಿಮ್ಮ ಅಸಹಾಯಕತೆಯನ್ನು ಹೇಳಿ ನಿಜವಾಗಿ ಏನು ತೊಂದರೆ ಇದೆ ಎಂದು ಹೇಳಿ. ನಿಮ್ಮ ಸರ್ಕಾರ ಮಾಡಿಲ್ಲ ಎಂದು ಹೇಳಿದಾಗ ನಾವು ಇಲ್ಲಿ ಸುಮ್ಮನೆ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಸಹ ಹೆಲ್ತ್ ಮಿನಿಸ್ಟರ್ ಆಗಿದ್ದವನು.

ಡಾ॥ .ಎ.ಬಿ. ಮಲಕರೆಡ್ಡಿ :- ಅದಕ್ಕೆ ಕಾರಣವನ್ನು ತಮಗೆ ನಾನು ಈಗಾಗಲೇ ಹೇಳಿದ್ದೇನೆ. ಪೋಸ್ಟ್ ಗ್ರಾಜುಯೇಶನ್ ಮಾಡಿಕೊಂಡು ಬಂದವರು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಲು ತಯಾರಾಗುವುದಿಲ್ಲ.

SRI K.C. MODAGEKAR DESAI : Why this Government is not taking interest to use the services of Doctors? Atleast if, the services of Allopathy and Homeopathy Doctors are used in Taluk level, it will be easy as a general. Second thing, from the last fouryears,I am asking for sanctioning 2 Primary Health Centres in my area. So far, it has not been sanctioned. They are Kadoli village and Halage village in Belgaum Taluk.

ಡಾ॥ ಎ.ಬಿ. ಮಲಕರೆಡ್ಡಿ :- ಅದನ್ನು ಪರಿಶೀಲನೆ ಮಾಡುತ್ತೇನೆ.

ಸಾರಿಗೆ ಸಚಿವರಿಂದ ಉತ್ತರ

*ಶ್ರೀ ಭೀಮಣ್ಣ ಖಂಡ್ರೆ :- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ಒಟ್ಟು 18ಲಕ್ಷ ವಾಹನಗಳು ಓಡಾಡುತ್ತಾ ಇವೆ. ಅದರಲ್ಲಿ 12 ಲಕ್ಷ ಟೂ ವೀಲರ್ಸ್, 60 ಸಾವಿರ ಆಟೋರಿಕ್ಷಾಗಳು, ಕಾರ್ ಮತ್ತು ಜೀಪ್‌ಗಳು 1 ಲಕ್ಷ, 80 ಸಾವಿರ, ಮಾಕ್ಸಿಕ್ಯಾಬ್ಸ್ 7500ಗಳಷ್ಟು ಇವೆ. ಮಾನ್ಯ ಸಿಂಧ್ಯಾರವರು ಮಾತನಾಡುವಾಗ ಮ್ಯಾಕ್ಸಿಕ್ಯಾಬ್‌ಗಳ ಹಾವಳಿ ಬಗ್ಗೆ ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಂತೆಯೇ ಅವರು ಮಾಡಿದ ಸಲಹೆಗಳ ಬಗ್ಗೆಯೂ ಒಪ್ಪಿಕೊಳ್ಳುತ್ತೇನೆ. ನಮ್ಮಲ್ಲಿ 1988ಕ್ಕಿಂತ ಮೊದಲು ಮೋಟಾರ್ ಕ್ಯಾಬ್ಸ್ ಇದ್ದುವು. ಅದರಲ್ಲಿ 5+1 ಅಂದರೆ ಆರು ಪ್ಯಾಸೆಂಜರ್ಸ್‌ದು ಇತ್ತು. ಮುಂದೆ 1988ರಲ್ಲಿ ಲಿಬರಲೈಸಿಂಗ್ ಪ್ರೊವಿಶನ್ ಮಾಡಿ ಕೇಂದ್ರ ಸರಕಾರದವರು ಮೋಟಾರ್ ವೆಹಿಕಲ್ಸ್ ಆಕ್ಟನ್ನು ಅಮೆಂಡಮೆಂಟ್ ಮಾಡಿದರು. ಅದರ ನಂತರ ಕರ್ನಾಟಕ ಸರಕಾರದವರು 1-9-90ರಲ್ಲಿ Contract Carriage Acquisition Act ಏನಿತ್ತು ಅದಕ್ಕೆ ಸಡಿಲು ಮಾಡಿ ಮ್ಯಾಕ್ಸಿಕ್ಯಾಬ್‌ಗೆ ಎಕ್ಸ್‌ಂಪಶನ್ ಕೊಟ್ಟರು. ಅವಾಗಿನಿಂದ ಈ ಮಾಕ್ಸಿಕ್ಯಾಬ್‌ಗಳು ಶುರವಾದುವು. ಮೋಟಾರ್‌ಕ್ಯಾಬ್‌ನಲ್ಲಿ ಐದು + ಒಂದು ಇದ್ದುದು. ಮ್ಯಾಕ್ಸಿಕ್ಯಾಬ್‌ನಲ್ಲಿ 12+1 ಎಂದು ಆಯಿತು. ಇದರಲ್ಲಿ 1991-92ರಲ್ಲಿ ರಾಜ್ಯ ಸರಕಾರದವರು ಪರವಾನಿಗೆಯನ್ನು 932 ಮ್ಯಾಕ್ಸಿಕ್ಯಾಬ್‌ಗಳಿಗೆ ಕೊಟ್ಟಿದ್ದಾರೆ. 1992-93 ರಲ್ಲಿ 1852 ಪರವಾನಿಗೆಗಳನ್ನು ಕೊಟ್ಟಿದ್ದು, 1993-94ರಲ್ಲಿ 2492 ಪರವಾನಿಗೆಗಳನ್ನು ಕೊಟ್ಟಿದ್ದು, 1994ರ ಆಗಸ್ಟ್ 31ರ ತನಕ 704 ಮ್ಯಾಕ್ಸಿಕ್ಯಾಬ್‌ಗಳಿಗೆ ಪರವಾನಿಗೆಗಳನ್ನು ಕೊಡಲಾಗಿದೆ. ಹೀಗೆ ಒಟ್ಟು 7500ರಿ ಮ್ಯಾಕ್ಸಿಕ್ಯಾಬ್‌ಗಳು ಓಡಾಡುತ್ತಾ ಇವೆ. ಇವರಿಗೆ 12 ಪ್ಲಸ್ 1 ಪರ್ಮಿಟ್ ಇರುತ್ತದೆ. ಆದರೆ ಅವರು ತಮ್ಮ ಮಿತಿಗಿಂತ ಹೆಚ್ಚು ಪ್ರಯಾಣಿಕರನ್ನು ಹಾಕಿಕೊಂಡು ಹೋಗುವಾಗ ಅವರ ಮೇಲೆ ಕೇಸ್‌ಗಳನ್ನು ಹಾಕಿದ್ದೇವೆ. 1992-93ರಲ್ಲಿ 11,714ಗಳಷ್ಟು ವಾಹನಗಳನ್ನು ಚೆಕ್ ಮಾಡಲಾಗಿದೆ. ಅವುಗಳಲ್ಲಿ

ಕೇಸ್ ಬುಕ್ ಮಾಡಿದವುಗಳು 1260. ಸೀಸ್ಡ್ ವೆಹಿಕಲ್ಸ್ 194. 1993-94ರಲ್ಲಿ ಚೆಕ್ ಮಾಡಿದ್ದು 37,500ಗಳಷ್ಟು. ಕೇಸ್ ಬುಕ್ ಮಾಡಿದ್ದು 4446. ಸೀಸ್ಡ್ ವೆಹಿಕಲ್ಸ್ 503. 1994-95 ಜೂನ್ 3317ರಷ್ಟು ಚೆಕ್ ಮಾಡಿದ್ದು, 1099 ಕೇಸ್ ಬುಕ್ ಮಾಡಿದ್ದೇವೆ. 43 ವೆಹಿಕಲ್ಸ್‌ಗಳನ್ನು ಸೀಸ್ಡ್ ಮಾಡಲಾಗಿದೆ. ಈ ಪ್ರಕಾರವಾಗಿ ಒಂದು ಸಾವಿರ ವೆಹಿಕಲ್ಸ್‌ಗಳನ್ನು ರೋಡ್‌ನಿಂದ ಸಸ್ಪೆಂಡ್ ಮಾಡಿದಂತಾಗಿದೆ. ಈ ಪ್ರಕಾರವಾಗಿ ಕ್ರಮಗಳನ್ನು ತೆಗೆದುಕೊಂಡಿದ್ದರಿಂದಾಗಿ ಮ್ಯಾಕ್ಸಿಕ್ಯಾಬ್‌ಗಳ ಹಾವಳಿಯು ಸ್ವಲ್ಪ ಕಡಿಮೆಯಾಗಿದೆ. ಆದರೂ ಕೂಡ ಹತೋಟಿ ಸ್ವಲ್ಪ ಕಷ್ಟವೇ. ಅವರಿಗೆ ಕೇಂದ್ರ ಸರಕಾರದ ಕಾನೂನು ಪ್ರಕಾರ ಕೋರ್ಟ್‌ಗೆ ಹೋಗುವ ಸಂದರ್ಭ ಇದೆ. ತಾವುಗಳು ಮಾತನಾಡುವಾಗ ಇನ್ನು ಮುಂದೆ ಮ್ಯಾಕ್ಸಿಕ್ಯಾಬ್‌ಗಳಿಗೆ ಪರ್ಮಿಶನ್ ಕೊಡಬಾರದು ಎಂದು ಹೇಳಿದ್ದೀರಿ. ಆದರೆ ಪರ್ಮಿಷನ್ ಕೊಡಬಾರದು ಎಂದು ಹೇಳಲು ನಮಗೆ ಯಾವ ಅಧಿಕಾರವೂ ಇಲ್ಲ. ಆ ದೃಷ್ಟಿಯಿಂದ ಹೋಗಿರುವ ಕೇಸ್‌ಗಳಲ್ಲಿ ಹೈಕೋರ್ಟ್ ಮತ್ತು ಇತರ ಕೋರ್ಟ್‌ಗಳಲ್ಲಿ ಅವರಂತೆ ಆಗಿವೆ. Not to play on the roads ಎಂದು ಕಂಡಿಶನ್ ಏನು ಕೊಟ್ಟಿದ್ದೆವು. ಅದನ್ನು ಅವರು ಕೋರ್ಟ್‌ನಿಂದ ರದ್ದು ಮಾಡಿಸಿಕೊಂಡು ಬಂದರು. ಅಂದರೆ we have no authority and we have no power ತಾವು ಹೇಳಿದಂತೆ ವಾಸ್ತವಿಕ ಪವರ್ ಇಲ್ಲ. ಒಂದು ಸಲ ಕೊಡುವುದು ಸುಲಭ. ಆದರೆ ವಾಪಸ್ ತೆಗೆದುಕೊಳ್ಳುವುದು ಬಹಳ ಕಷ್ಟ ಇದೆ. ಆ ದೃಷ್ಟಿಯಿಂದ ಅದು ಆಗುವುದಿಲ್ಲ. ಇವತ್ತು ಚೆಕಪ್ ಕೆಲಸ ಸರಿಯಾಗಿ ಮಾಡುತ್ತಿದ್ದೇವೆ ಎಂದು ತಮಗೆ ತಿಳಿಯಬಯಸುತ್ತೇನೆ. ಸಬ್ಜೆಕ್ಟ್ ಕಮಿಟಿಗಳಿಂದ ಏನು ಶಿಫಾರಸ್ ಬಂದಿವೆ. ಅವನ್ನು ನಾವು ಫಾಲೊ ಮಾಡುತ್ತಿದ್ದೇವೆ. ಮ್ಯಾಕ್ಸಿಕ್ಯಾಬ್ ಬಗ್ಗೆ ರೆಗ್ಯುಲರ್ ಮಾಡುತ್ತಿದ್ದೇವೆ. ಫೋರ್‌ವಿಲರ್ ವೆಹಿಕಲ್ಸ್‌ಗೊ ಲೈಫ್‌ಟೈಂ ಟ್ಯಾಕ್ಸ್ ಕೊಡಬೇಕೆಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಈ 1993-94ರಲ್ಲಿ 275 ಕೋಟಿ ಒಂದು ಟಾರ್ಗೆಟ್ ಇತ್ತು ಮತ್ತು ಅದು ಅಚೀವ್ ಕೂಡ ಆಗಿದೆ. ಈ ವರ್ಷ 60 ಕೋಟಿ ಹೆಚ್ಚಿನ ಟಾರ್ಗೆಟ್ ಇಟ್ಟಿದ್ದೇವೆ ಮತ್ತು ನನಗೆ ಆಶ ಇದೆ ಅದು ಹೆಚ್ಚಿನ ಇನ್‌ಕಂ ಆಗುತ್ತಿದೆ. ಎಂಬ ಭರವಸೆ ನಾನು ನಿಮಗೆ ಕೊಡುತ್ತಿದ್ದೇನೆ. .ಹಾಗೆ ಪೋಲಿಸ್ ಹೆಲ್ತ್ ಬಗ್ಗೆ ಎಲ್ಲೆಲ್ಲಿ ಏನು ಮಾಡಬೇಕೆಂಬ ಬಗ್ಗೆ ಕೂಡ ವಿಚಾರ ಮಾಡುತ್ತಿದ್ದೇವೆ. ಒಂದು ಮಾತು ಇಲ್ಲಿ ಬಂತು. ಏನೆಂದರೆ, ನಮ್ಮ ಕೆಎಸ್‌ಆರ್‌ಟಿಸಿ ಇವತಿನತನಕ ಲಾಸ್‌ನಲ್ಲಿತ್ತು. ಇವತ್ತಲ್ಲ. 10 ವರ್ಷಗಳಿಂದ ತೆಗೆದುಕೊಂಡರೂ ಮೊದಲಿನಿಂದ ಲಾಸ್ ಬರುತ್ತಿದೆ. ಕಾರಣ ಡೀಸಲ್ ಟೈರ್ ಬೆಲೆಗಳು ಏರುತ್ತಿವೆ ಹಾಗೆ ಸ್ಟ್ಯಾಂಪ್ ಹೆಚ್ಚಾಗುತ್ತಿದೆ ಲಾಸಾಗಲು ಇವು ಕಾರಣಗಳು 84-85, 85-86 ತಾವು ಎರಡು ವರ್ಷ ತೆಗೆದುಕೊಂಡಿದ್ದರೆ ಅದರಲ್ಲಿ wages to staff ನಲ್ಲಿ 17 ಪರ್ಸೆಂಟ್ ಹೆಚ್ಚಾಗಿದೆ. ಹಾಗೆಯೇ 26.4 ಪರ್ಸೆಂಟ್ ತಮ್ಮ ಕಾಲಕ್ಕೆ ಹೆಚ್ಚಾಯಿತು. ಒಂದೂವರೆ ವರ್ಷದಲ್ಲಿ ಚಾರ್ಜ್ ಮಾಡಿರುವುದು 47 ಪರ್ಸೆಂಟ್ ಆದರೂ ಲಾಸಾಗಿದ್ದು 20.48 ಕೋಟಿ 50 ಸಾವಿರ ಹಾಗೆಯೇ ಎರಡನೇ ವರ್ಷ 14.13 ಕೋಟಿ ಲಾಸಾಗಿದೆ. ಅನಂತರ 8 ವರ್ಷದಲ್ಲಿ 87 ನಂತರ 94ವರೆಗೆ ಎರಡು ಸಾರಿ ಮಾತ್ರ ಚಾರ್ಜಸ್ ಹೈಕಾಗಿದೆ. ಒಂದು ಸಾರಿ 26.4, 1990ರಲ್ಲಿ ಮತ್ತು 1992-93 ಕೇವಲ 18 ಪರ್ಸೆಂಟ್. ಅಂದರೆ 8 ವರ್ಷದಲ್ಲಿ ಚಾರ್ಜಸ್ ಏನು ಹೈಕಾಗಿದೆ ಆ ದೃಷ್ಟಿಯಿಂದ ನೋಡಿದರೆ ಕಳೆದ ಮೂರು ವರ್ಷಗಳಿಂದ ವೇಜಸ್ 35 ಕೋಟಿ ಕೊಟ್ಟಿದ್ದೇವೆ. 95 ಕೋಟಿ ಬರೀ ಡೀಸೆಲ್‌ಗಾಗಿ 89-90 ರಿಂದ 93-94ವರೆಗೆ ಈ ನಾಲ್ಕು ವರ್ಷಗಳಲ್ಲಿ ಡೀಸೆಲ್ ಬೆಲೆ ಹೆಚ್ಚಾಗಿದ್ದು ಲೀಟರ್‌ಗೆ

4.66 ರೂಪಾಯಿ ಇದ್ದುದು 8.10 ರೂಪಾಯಿ ಆಯಿತು. ಅಂದರೆ which means that we have to bear 95 crores ಹೆಚ್ಚು ಹಣವನ್ನು ನಾವು ಕೊಡಬೇಕಾಗಿದೆ. ಹಾಗೆ ಟೈರ್ಸ್ ಮತ್ತು ಟ್ಯೂಬಿನಲ್ಲಿ 7.29 ಕೋಟಿ ರೂಪಾಯಿ ಹೆಚ್ಚಾಗಿದೆ, ಹಾಗೆಯೇ ಅಲ್ಯುಮಿನಿಯಂ ಶೀಟ್‌ನಲ್ಲಿ 4.66 ಅಂಡ್ ಚಾಸೀಸ್ 14 ಕೋಟಿ - ಇಷ್ಟೆಲ್ಲ ಹೆಚ್ಚಾಗಿದ್ದರೂ 89ರ ವರ್ಷದಲ್ಲಿ ಏನು ಲಾಸಾಗಿದ್ದ ಪ್ರಮಾಣದಂತೆ 58 ಕೋಟಿ, 66,78 ಕೋಟಿಗಳು. ಈ ವರ್ಷ 84 ಕೋಟಿ ಲಾಸಿದೆ. ಅಲ್ಲದೆ ಸ್ಟೂಡೆಂಟ್ಸ್ ಚಾರ್ಜಸ್ ಏನಿವೆ ಇವರಿಗೆ 84ರಿಂದ 90ರವರೆಗೆ ಇದ್ದದ್ದನ್ನು ಈ ವರ್ಷ ಲೆಕ್ಕ ಹಾಕಿದರೆ 121 ಕೋಟಿ ರೂಪಾಯಿಗಳನ್ನು ವಿದ್ಯಾರ್ಥಿಗಳ ರಿಯಾಯ್ತಿಗೆ ಕೊಟ್ಟಿದೆ. ಇದರಲ್ಲಿ ಅವರು ಬಂದಿದ್ದಾಗ ಸರ್ಕಾರ ವಿಚಾರ ಮಾಡಿ ಏನು ರಿಯಾಯ್ತಿ ಕೊಟ್ಟಿದೆ ಎಂದರೆ, 1993-94ರಲ್ಲಿ 50 ಕೋಟಿ ರೂಪಾಯಿಗಳ ಕ್ಯಾಪಿಟಲ್ ಕಾಂಟ್ರಿಬ್ಯೂಷನ್ ಮಾಡಲಾಗಿದೆ. ಹಾಗೂ 25 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟಿದ್ದೇವೆ. ಈ ವರ್ಷ ಕ್ಯಾಪಿಟಲ್ ಕಾಂಟ್ರಿಬ್ಯೂಷನ್ ಎಂದು 16.38 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ವಿದ್ಯಾರ್ಥಿಗಳ ರಿಯಾಯಿತಿ ಪಾಸ್‌ಗೆ 10 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ. ಅಂದರೆ 35 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸ್ಟೂಡಂಟ್ ಚಾರ್ಜಸ್‌ಗಳಿಗೆ 121 ಕೋಟಿ ರೂಪಾಯಿಗಳು ಆಗುತ್ತವೆ. ಇದಕ್ಕೆ ನಾವು ರಿಯಾಯಿತಿ ಕೊಟ್ಟಿದ್ದೇವೆ. ಆ ಹಣವನ್ನು ಸರ್ಕಾರದಿಂದ ಕೊಟ್ಟಿದ್ದೇವೆ. ಆ ವರ್ಷದಿಂದ ಇನ್ನೂ ಹೆಚ್ಚು ಕೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ವಿಚಾರ ಮಾಡುತ್ತಿದೆ. ಇವತ್ತು ಎಷ್ಟೇ ತೊಂದರೆಗಳು ಇದ್ದರೂ ಸಹ ಅಲ್ಲಿ ಒಳ್ಳೆಯ ಕೆಲಸ ನಡೆಯುತ್ತಿದೆ. ಇದರ ಬಗ್ಗೆ ಏನೇನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ನಾವು ವಿಶೇಷವಾಗಿ ಇದರ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದೇವೆ. ಬಸ್ಸುಗಳ ಸಂಖ್ಯೆಯನ್ನು ಒಂದು ಸಾವಿರಕ್ಕೆ ಹೆಚ್ಚು ಮಾಡಿದ್ದೇವೆ. ಸ್ಕ್ರಾಪ್‌ನ್ನು ರೀಪ್ಲೇಸ್ ಮಾಡುವುದನ್ನು ಹೊಸದಾಗಿ ಆಗ್‌ಮೆಂಟ್ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದೇವೆ. ಕಳೆದ ಒಂದು ವರ್ಷ ಹತ್ತು ತಿಂಗಳಿನಲ್ಲಿ ನಾವು ಒಳ್ಳೆಯ ಕೆಲಸಗಳನ್ನು ಮಾಡಿದ್ದೇವೆ. ಸೋರಿಕೆಯನ್ನು ಕಡಿಮೆ ಮಾಡಿದ್ದೇವೆ. ಕ್ಯಾನ್ಸಲೇಷನ್ ಕಡಿಮೆ ಮಾಡಿದ್ದೇವೆ. ಮ್ಯಾನೇಜ್‌ಮೆಂಟಿಗೂ ಹಾಗೂ ಲೇಬರ್‌ಗೂ ಸ್ವಲ್ಪ ಸಾಮರಸ್ಯ ಇರಲಿಲ್ಲ. ಈಗ ಅದು ಸರಿಯಾಗಿದೆ. ಈಗ ಮ್ಯಾನೇಜ್‌ಮೆಂಟ್‌ನವರಾಗಲೀ , ಲೇಬರ್ ಯೂನಿಯನ್‌ರವರಾಗಲೀ ಸಂಸ್ಥೆಗಾಗಿ ಒಂದುಗೂಡಿ ಕೆಲಸ ಮಾಡುತ್ತಿದ್ದಾರೆ. ಆದರೂ ಲಾಸ್ ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಈ ವರ್ಷ ವಿಶೇಷ ಖರ್ಚುಗಳು ಬಂದಿವೆ. ಅದು ಇಲ್ಲದಿದ್ದರೆ ಇದು ಇನ್ನು ಒಳ್ಳೆಯ ರೀತಿಯಲ್ಲಿ ನಡೆಯುತ್ತಿತ್ತು.

ಶ್ರೀ ಸಿ. ಬೈರೇಗೌಡ :- ಮಾನ್ಯ ಖಂಡ್ರೆಯವರು ಈ ವಿಷಯವನ್ನು ಗಮನಿಸಬೇಕು, ಎಮಿಷನ್ ಕಂಟ್ರೋಲ್ ಇಲ್ಲದೆ ಬೆಂಗಳೂರು ನಗರದಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಮ್ಮ ಬಸ್ಸುಗಳು ಓಡಾಡುತ್ತಿರುವುದರಿಂದ ಬಹಳ ತೊಂದರೆಯಾಗಿದೆ, ನಿಮ್ಮ ಬಸ್ಸುಗಳ ಹಾರನ್ ಕಿವಿಗಳನ್ನು ತೂತು ಮಾಡುತ್ತವೆ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಹಾರನ್ ಮ್ಯೂಸಿಕ್ ಹಾರನ್ ತರಹ ಇದೆ. ನಿಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸು ಬಂದರೆ ಎರಡು ಕಿವಿಗಳನ್ನು ಒಂದೇಸಾರಿ ಮುಚ್ಚಿ ಕೊಳ್ಳಬೇಕಾಗಿದೆ. ನಿಮ್ಮ ಅಧೀನದಲ್ಲಿರತಕ್ಕ ಬಸ್ಸುಗಳು

ಕಾನೂನಿಗೆ ವಿರುದ್ಧವಾಗಿ ನಡೆಯುತ್ತಿವೆ. ಆದ್ದರಿಂದ ತಕ್ಷಣವೇ ಎಮಿಷನ್ ಕಂಟ್ರೋಲ್ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ಸದಸ್ಯರ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ಅದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಲು ಪ್ರಯತ್ನ ಮಾಡುತ್ತೇನೆ. ಪಲ್ಯೂಷನ್ ಕಂಟ್ರೋಲ್ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಸಾರಿಗೆ ಇಲಾಖೆಯ ಮಾನ್ಯ ಮಂತ್ರಿಗಳು, ಕೊಟ್ಟಿರತಕ್ಕ ಉತ್ತರದಿಂದ ನನಗೆ ಸಮಾಧಾನವಿಲ್ಲ. ಎರಡು ವಿಚಾರಗಳ ಬಗ್ಗೆ ತಮ್ಮ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ. ಒಂದನೆಯದು, ನನ್ನ ಅಧ್ಯಕ್ಷತೆಯಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತು-ಎರಡು ಸದನಗಳ ಸದಸ್ಯರುಗಳ ಒಂದು ಸಮಿತಿಯನ್ನು ಮಾಡಿ ಒಂದು ವರದಿಯನ್ನು ಕೊಡಬೇಕೆಂದು ಹೇಳಿದ್ದೀರಿ. ಆ ವರದಿಯನ್ನು ನಾವು ತಮಗೆ ಅರ್ಪಣೆ ಮಾಡ್ಡಿದ್ದೇವೆ. ತಾವು ಅದನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೀರಿ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಮ್ಯಾಕ್ಸಿಕ್ಯಾಬ್ ಬಗ್ಗೆ ತಾವು ಏನು ಹೇಳಿದ್ದೀರಿ ಅದನ್ನು ನಾನು ಒಪ್ಪುತ್ತೇನೆ. 1988ರಲ್ಲಿ ಮೋಟಾರ್ ವೆಹಿಕಲ್ಸ್ ಆ್ಯಕ್ಟಗೆ ಆದ ಅಮೆಂಡಮೆಂಟ್ ಆದ ಮೇಲೆ ಲಿಬರಲೈಸೇಷನ್ ಪಾಲಿಸಿ ಬಂತು. ಬೇರೆ ಬೇರೆ ಮಾಡ್ಲ್ ವೆಹಿಕಲ್ಸ್ ಮಾಡಬೇಕು ಎಂದು ಬೇರೆ ಬೇರೆ ಪ್ರೈವೇಟ್ ಇಂಡಸ್ಟ್ರಿಯಲ್ ಸೆಕ್ಟ್ರರ್ಸಗೆ, ಮಲ್ಟಿ ನ್ಯಾಷನಲ್ ಕಂಪನಿಗಳಿಗೆ ಕೇಂದ್ರ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಆದ್ದರಿಂದ ನಾನು ಈ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಬರೀ ಕೆ.ಎಸ್.ಆರ್.ಟಿ.ಸಿ ಬಗ್ಗೆ ನಾನು ಮಾತನಾಡುವುದಿಲ್ಲ. ನನ್ನ ಕಾಲದಲ್ಲಿ 10 ಲಕ್ಷ ರೂಪಾಯಿಗಳು ಕೆ.ಎಸ್.ಆರ್.ಟಿ.ಸಿ ಗೆ ಲಾಭ ಆಗಿತ್ತು, ಇನ್ನೊಬ್ಬರ ಕಾಲದಲ್ಲಿ ನಷ್ಟ ಆಯಿತು ಎಂದು ದೂಷಣೆ ಮಾಡುವ ಮಟ್ಟಕ್ಕೆ ನಾನು ಹೋಗುವುದಿಲ್ಲ. ಅದನ್ನು ನಾನು ಸಮಗ್ರವಾಗಿ ಓದಿ ಅರ್ಥಮಾಡಿ ಕೊಂಡಿರತಕ್ಕವನು. I feel one for the public sector undertakings.

5 ಪಿ.ಎಂ

ನಮ್ಮ ಕೆ.ಎಸ್.ಆರ್.ಟಿ.ಸಿ ನಲ್ಲಿ ಮೂಲಭೂತ ಬಂಡವಾಳಾವಾಗಿ ಹಾಕಿರತಕ್ಕದು ಐದು ನೂರು ಕೋಟಿ ರೂಪಾಯಿಗಳು. ಇವತ್ತು ಬರೀ ಕೆ.ಎಸ್.ಆರ್.ಟಿ.ಸಿ ಯದು ಎರಡು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಆಸ್ತಿ ಬರೀ ಕರ್ನಾಟಕದಲ್ಲಿದೆ. ಈ ರೀತಿ ಇಡೀ ರಾಷ್ಟ್ರದಲ್ಲಿ 54 ಕಾರ್ಪೊರೇಷನ್‌ಗಳಿಗೂ ಎರಡು ಸಾವಿರ,ಮೂರು ಸಾವಿರ ಕೋಟಿ ರೂಪಾಯಿಗಳ ಬಂಡವಾಳವಿದೆ ಎಂಬುದನ್ನು ಗಮನಿಸಬೇಕು. ಇಂಥಾದ್ದನ್ನು ಪ್ರೈವೇಟ್‌ನವರಿಗೆ ಕೊಟ್ಟರೆ ಆಗತಕ್ಕ ಗತಿ ಏನು ಎನ್ನುವುದನ್ನು ನಮಗಿಂತಲೂ ಹೆಚ್ಚಾಗಿ ಕೇಂದ್ರ ಸರ್ಕಾರದವರು ವಿಚಾರ ಮಾಡಬೇಕು. ಮಾಕ್ಸಿಕ್ಯಾಬ್‌ಗೆ ಪರ್ಮಿಟ್ ಕೊಟ್ಟು ಆಗತಕ್ಕ ಅನಾಹುತ ಏನು ಎಂಬುದನ್ನು ಕೇಂದ್ರ ಸರ್ಕಾರದವರು ವಿಚಾರ ಮಾಡಬೇಕು. ಈ ವಿಷಯವನ್ನು ತಾವು, ಮುಖ್ಯಮಂತ್ರಿಗಳು ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನ ಗಮನಕ್ಕೆ ತೆಗೆದುಕೊಂಡು ಬಂದು ಎಲ್ಲಾ

ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ಗಳು ಮತ್ತೆ ಸಿಎಂಡಿ.ಗಳು, ಪಬ್ಲಿಕ್ ಸೆಕ್ಟಾರ್ ಕಂಪನಿಗಳು ಕೆಎಸ್‌ಆರ್‌ಟಿಸಿಯ ರೀತಿ ಬೇರೆ ಬೇರೆ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ಸ್ ಏನು ಇವೆ, ಇದರ ಉಳಿವಿಗೋಸ್ಕರ ನೀವು ಹೋರಾಟವನ್ನು ಮಾಡಬೇಕಾಗುತ್ತದೆ. It is not a question of 60,000 employees alone there. ಇದನ್ನು ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ತಾವು ರೈಜ್ ಮಾಡಬೇಕೆಂದು ಸಲಹೆಯನ್ನು ಕೊಡುತ್ತಿದ್ದೇನೆ. ನಾನು ಎರಡು ವಿಚಾರಗಳನ್ನು ತಮಗೆ ಕೇಳಿದ್ದೇನೆ, ಒಂದು ಈ ರಿಪೋರ್ಟ್ ಬಗ್ಗೆ. ಇನ್ನೊಂದು ಭರವಸೆಯನ್ನು ನಾನು ನಿಮಗೆ ಕೇಳುತ್ತಿದ್ದೇನೆ ಅಲ್ಲಿ ಏನಾಗಿದೆ ಎಂದರೆ, ಅದಕ್ಕೋಸ್ಕರ ಬೆಳ್ಳಿಗೆ ನಾನು ವಿವರವಾಗಿ ಮಾತನಾಡುವುದಕ್ಕೆ ಹೋಗಲಿಲ್ಲ. ನಾನು ಹೇಳಿದೆ ಈ ನಾಲ್ಕು ವರ್ಷಗಳಲ್ಲಿ ನೀವು ಮಾಡಿರತಕ್ಕಂಥ ಮೊದಲನೇ ತಪ್ಪು ಎಂದರೆ ಆ ಸಿ.ಎಂ.ಡಿಗಳನ್ನು ಆರು ತಿಂಗಳಿಗೆ ಒಂದು ಸಾರಿ ಬದಲಾವಣೆ ಮಾಡುತ್ತೀರಿ. ಈಗ ನವೆಂಬರ್‌ನಲ್ಲಿ ಚುನಾವಣೆ ಇದೆ, ಅಲ್ಲಿಯವರೆಗೂ ಇರತಕ್ಕಂಥ ಎಂ.ಡಿ.ಗಳನ್ನು ಬದಲಾವಣೆ ಮಾಡುತ್ತೀರೋ? ಅಥವಾ ಅವರನ್ನು ಹಾಗೆಯೇ ಬಿಡುತ್ತಿರೋ? Every four months you have been changing ಸಾಮಾನ್ಯವಾಗಿ ಕೆ.ಎಸ್.ಆರ್.ಟಿ.ಸಿ. ಎಂ.ಡಿ.ಯಾಗಿ ಹೋಗತಕ್ಕಂಥವರು ಸೀನಿಯರ್ ಐಎಎಸ್ ಆಫೀಸರ್‌ರವರು ಅಡಿಷನಲ್ ಚೀಫ್ ಸೆಕ್ರೆಟರಿಯ ಮಟ್ಟಕ್ಕೆ ತಲುಪಿರತಕ್ಕಂಥವರೇ ಅಲ್ಲಿಗೆ ಹೋಗುವುದು. ಏತಕ್ಕೋಸ್ಕರ ನೀವು ಅವರನ್ನು ಬದಲಾವಣೆ ಮಾಡುತ್ತೀರಿ? ನನಗಂತೂ ಇದು ಅರ್ಥವಾಗುತ್ತಿಲ್ಲ. ನಿಮ್ಮ ಪಾರ್ಟಿಸಿಪೇಷನ್ ಸರ್ಕಾರದಲ್ಲಿ, ಬೋರ್ಡ್‌ನಲ್ಲಿ ಇರತಕ್ಕಂಥದ್ದು ಅಷ್ಟರಮಟ್ಟಿಗೇ Not beyond that.ಬಾಕಿಯದೆಲ್ಲ ಅವರು ಫಂಕ್ಷನ್ ಮಾಡಿ ಕೊಂಡು ಹೋಗುತ್ತಾರೆ. But why you are doing this? ಇದಕ್ಕೆ ತಾವು ಉತ್ತರವನ್ನು ಈ ಸಂದರ್ಭದಲ್ಲಿ ರಾಜ್ಯದ ಜನತೆಗೆ ಕೊಡಬೇಕೆಂದು ಹೇಳುತ್ತೇನೆ. ನಾನು ಒಂದು ವಿಷಯವನ್ನು ಕೇಳುತ್ತೇನೆ, ನಿಮಗೆ ಉಳಿದಿರುವ ಜೀವ ನೂರು ದಿನದ್ದು, ಈ ನೂರು ದಿವಸಗಳಲ್ಲಿ ನೀವು ಮಾಡಬಹುದಾದ್ದು ಏನು ಎಂದರೆ, ಅಲ್ಲಿ ಕಾರ್ಮಿಕರಿಗೂ ಮತ್ತು ಆಡಳಿತ ಮಂಡಳಿಯವರಿಗೂ ಒಳ್ಳೆಯ ವಾತಾವರಣ ಇಲ್ಲ. ದಯವಿಟ್ಟು ಅದನ್ನು ಸರಿಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೀರಾ? ಎನ್ನುವಂಥ ಒಂದು ಭರವಸೆಯನ್ನು ಕೊಡಿ.

ಶ್ರೀ ಭೀಮಣ್ಣ ಖಂಡ್ರೆ :- ಮಾನ್ಯ ಅಧ್ಯಕ್ಷರೇ, ಜಾಯಿಂಟ್ ಕಮಿಟಿ ರಿಪೋರ್ಟ್ ಏನು ಇದೆ, ಆ ರಿಪೋಟ್ ಇಲ್ಲಿಗೆ ಬಂದಿದ್ದು ನಾಲ್ಕು ದಿವಸಗಳ ಮೊದಲು ನಾಲ್ಕು ದಿವಸಗಳ ಮೊದಲು ಈ ವರದಿಯಲ್ಲಿ ಸದನದಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ಮೂರು ತಿಂಗಳ ಒಳಗಾಗಿ ವಿಚಾರ ಮಾಡಬೇಕು ಎಂದು ಇದೆ. ನಮಗೆ ಎರಡು ತಿಂಗಳು ಅವಕಾಶ ಇದೆ. ಅದರ ಒಳಗಾಗಿ ಇದನ್ನು ವಿಚಾರ ಮಾಡುತ್ತೇವೆ. ಏಕೆಂದರೆ ಕೂಲಂಕುಷವಾಗಿ ತಮ್ಮ ವರದಿಯನ್ನು ವಿಚಾರ ಮಾಡಿ ಅದರ ಪ್ರಕಾರ ಯಾವ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತಿದ್ದೇವೆ. I assure you that I will do it within two months. ಈಗ ತಾವು ಏನು ಹೇಳಿದಿರಿ, ಮ್ಯಾಕ್ಸಿಕ್ಯಾಬ್ ಬಗ್ಗೆ ಆಲ್ ಇಂಡಿಯಾ ಲೆವೆಲ್‌ನಲ್ಲಿ ಮಾಡಬೇಕೆಂದು ಹೇಳಿದ್ದೀರಿ. ನಾನು ತಮ್ಮ ಸಲಹೆಯನ್ನು ಒಪ್ಪುತ್ತೇನೆ. ಮಾಕ್ಸಿಕ್ಯಾಬ್‌ಗೆ ನಾವೇನು ಪರ್ಮಿಟ್ ಕೊಡುತ್ತಿದ್ದೇವೆ, ಅದರಲ್ಲಿ ಸ್ಪಷ್ಟವಾಗಿ ಇದೆ. ಅದು ಕಂಟ್ರಾಕ್ಟ

ಕ್ಯಾರೇಜ್, ಸ್ಟೇಟ್ ಕ್ಯಾರೇಜ್ ಅಲ್ಲ. ಕಂಟ್ರಾಕ್ಟ್ ಕ್ಯಾರೇಜ್ ಪ್ರಕಾರ ಟ್ಯಾಕ್ಸಿ ಕಾರು ಹೇಗೆ ಓಡಾಡುತ್ತಿದೆಯೋ ಆ ರೀತಿಯಲ್ಲೇ ಓಡಾಡಬೇಕು. ಟ್ಯಾಕ್ಸಿ ಕಾರಿನಲ್ಲಿ 4+1 ಆಗುತ್ತಿದೆ. ಇದರಲ್ಲಿ 12+1 ಆಗುತ್ತಿದೆ. ಇವರು ಸ್ಟೇಟ್ ಕ್ಯಾರೇಜ್ ಮಾಡುತ್ತಿದ್ದಾರೆ ಎಂದು ಬಹಳ ಜನ ಸದಸ್ಯರು ಹೇಳಿದರು. ಇದರ ಮೇಲೆ ನಾವು 40 ಸಾವಿರ ಕೇಸನ್ನು ಹಾಕಿದ್ದೇವೆ. ಇಷ್ಟು ಕೇಸುಗಳನ್ನು ಇನ್ನೂ ಆಗುತ್ತಿದೆ ಎಂದರೆ ಇದರ ಅರ್ಥ practically it is very difficult to control ಎನ್ನತಕ್ಕಂಥ ಮಾತನ್ನು ಹೇಳುತ್ತೇವೆ. ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ, ಅದರಂತೆ ಆಲ್‌ಇಂಡಿಯಾ ಲೆವೆಲ್‌ನಲ್ಲಿ ಇದರ ಬಗ್ಗೆ ಏನುಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಒಪ್ಪುತ್ತೇನೆ. ನಾವು ನೂರು ದಿವಸ ಇದ್ದರೆ ಮಾಡುತ್ತೇವೆ. ಮುಂದೆ ನಂತರ ನೀವು ಬರುತ್ತೀರೋ ನಾವು ಬರುತ್ತೇವೋ ಆ ವಿಚಾರವನ್ನು ಹೇಳುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಮುಂದೆ ಇದರ ಬಗ್ಗೆ ವಿಚಾರ ಮಾಡೋಣ. ನಮ್ಮ ಸ್ನೇಹಿತರು ಹೇಳುತ್ತಿದ್ದಾರೆ, ಖಚಿತವಾಗಿ ನಾವೇ ಬರುತ್ತೇವೆ ಎಂದು ನೀವು ಅಲ್ಲಿಗೆ ಬರುತ್ತೀರೋ ಇಲ್ಲವೋ ಅದನ್ನು ಸ್ವಲ್ಪ ನೋಡಿಕೊಳ್ಳಬೇಕು.

ಶ್ರೀ ಸಿ.ಜಿ.ಆರ್.ಸಿಂಧ್ಯ :- ನಾನು ಇಲ್ಲಿ ಅಸೆಂಬ್ಲಿಗೆ ನಿಮ್ಮ ಮರ್ಜಿಯಲ್ಲಿ ಬರತಕ್ಕಂಥ ಅವಶ್ಯಕತೆ ನನಗೆ ಇಲ್ಲ. ನಾನು ಯಾವತ್ತು ಕಾಂಗ್ರೆಸ್‌ನ್ನು 22 ವರ್ಷಗಳಿಂದ ವಿರೋಧ ಮಾಡಿದ್ದೇನೆ. ವಿರೋಧ ಮಾಡಿಕೊಂಡೇ ಬಂದಿದ್ದೇನೆ. ಮತ್ತೆ ನೆಕ್ಸ್ಟ್ ಅಸೆಂಬ್ಲಿಗೆ ಬರುವುದರ ಬಗ್ಗೆ ನಿಮ್ಮ ಮರ್ಜಿ ನನಗೆ ಬೇಕಾಗಿಲ್ಲ. ನಮ್ಮ ಕನಕಪುರದ ಜನರು ಬಹಳ ಒಳ್ಳೆಯವರು. ನನ್ನನ್ನು ಗೆಲ್ಲಿಸುತ್ತಾರೆ. ಮತ್ತೆ ಈ ಅಸೆಂಬ್ಲಿಗಂತೂ ಬರುತ್ತೇನೆ. ಅದು ಅಷ್ಟೇ ಅಲ್ಲ, ನಾನು ಆ ಕಡೆ ಕುಳಿತುಕೊಳ್ಳದೇ ಇರಬಹುದು, ಆ ಕಡೆ ಕುಳಿತುಕೊಳ್ಳುವ ಪಕ್ಷದಲ್ಲಿ ಇರುತ್ತೇನೆ. ನಮ್ಮ ಪಾರ್ಟಿಯೇ ಸರ್ಕಾರವನ್ನು ರಚನೆ ಮಾಡುತ್ತದೆ. ನೀವೇನು ಅದರಲ್ಲಿ ಸಂಶಯ ಇಟ್ಟುಕೊಳ್ಳಬೇಡಿ. Don't have any doubts. ನಮ್ಮದೇ ಸರ್ಕಾರ , ದಳದ್ದೇ ಸರ್ಕಾರ ಬರುತ್ತದೆ. ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ನಾನು ಹೇಳಿದ್ದನ್ನು ಬರೆದು ಕೊಳ್ಳುವುದೂ ಇಲ್ಲ. ಲೇಬಲ್ ರಿಲೇಷನಷಿಪ್ ಮ್ಯಾನೇಜ್‌ಮೆಂಟ್ ಜೊತೆಗೆ ಚೆನ್ನಾಗಿಲ್ಲ, ಅವರು ಬೇಡಿಕೆಗಳನ್ನು ಇಟ್ಟಿದ್ದಾರೆ, ಅವರನ್ನು ಕರೆದು ಮಾತನಾಡಿ ಎಂದು ನಾನು ಹೇಳಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಮೊದಲು ಮ್ಯಾನೇಜ್‌ಮೆಂಟ್‌ನವರು ಅವರಿಗೆ ಕೊಟ್ಟು, ಮನಸ್ಸು ಬಂದಂತೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದರು. ನಾವು ಅದನ್ನು ಕಂಟ್ರೋಲ್ ಮಾಡಿ ಸೋರಿಕೆಯನ್ನು ಕಡಿಮೆ ಮಾಡಬೇಕು, ಡಿಸಿಪ್ಲಿನ್ ತರಬೇಕು ಎಂದಾಗ ಮ್ಯಾನೇಜ್‌ಮೆಂಟ್‌ಗೂ ಮತ್ತು ಅವರಿಗೂ ಸ್ವಲ್ಪ ದಿವಸ ಕ್ಲಾಷ್ ಆಯಿತು.

ಶ್ರೀ ಪಿ.ಜಿ. ಆರ್ ಸಿಂಧ್ಯ : ಆಪ್ರೋಚೇ ತಪ್ಪು . The very approach itself is wrong ನೀವು ಏನು ಹೇಳುತ್ತಿದ್ದೀರಿ ಎಂದರೆ ಮುಂಚಿನ ಮ್ಯಾನೇಜ್‌ಮೆಂಟ್‌ನವರು ಸೋರಿಕೆಗೆ ಅವಕಾಶವನ್ನು ಕೊಟ್ಟಿದ್ದರು ಎಂದು ನಾಲ್ಕು ವರ್ಷಗಳಿಂದ ನೀವೇ ಇರತಕ್ಕವರು, ಮುಂಚಿನ ಮ್ಯಾನೇಜ್‌ಮೆಂಟ್ ಎಂದರೆ ಏನರ್ಥ. ಹಾಗೆ ಹೇಳಬೇಡಿ, ಅವರನ್ನು ಕರೆದು ಸರಿ ಮಾಡಲಿಕ್ಕೆ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ : ಸರಿ ಹಾಗೆಯೇ ಮಾಡುತ್ತೇವೆ. ನಾನೇನು ಹೇಳಿದೆ ಎಂದರೆ, ಇದು ಪಾಸಿಂಗ್ ರೆಫರೆನ್ಸ್ ಎಂದು ಹೇಳಿದೆ. ನಾನು ಹೇಳುವುದು ಏನೆಂದರೆ ನಮ್ಮ ರಿಲೇಷನ್ಸ್ ಈಗ ಒಳ್ಳೆಯದು ಇಲ್ಲ ಎಂಬ ಮಾತು ಇಲ್ಲ. ಮ್ಯಾನೇಜ್‌ಮೆಂಟ್‌ನವರಿಗೂ ಅವರಿಗೂ ಮಾತುಕತೆ ಮಾಡಿಸುತ್ತಿದ್ದೇವೆ, ನಾವು ಪ್ರಾಬ್ಲಮ್ ಅನ್ನು ಸಾಲ್ವ್ ಮಾಡುತ್ತೇವೆ.

ಸಹಕಾರ ಸಚಿವರಿಂದ ಉತ್ತರ

* ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : ಇವತ್ತು 1994-95ರ ನಮ್ಮ ಕೈಗಾರಿಕಾ ಬೇಡಿಕೆಯ ಮೇಲೆ ಈಗಾಗಲೇ ಒಬ್ಬಿಬ್ಬರು ಸದಸ್ಯರು ಪಾಸಿಂಗ್ ರಿಮಾರ್ಕ್ ಮಾಡಿದ್ದಾರೆ ಎಂದು ಹೇಳಿದರೆ ತಪ್ಪೇನು ಆಗುವುದಿಲ್ಲ. ಆದರೆ ಇದನ್ನು ಬಹಳ ಗಹನವಾಗಿ ವಾಣಿಜ್ಯ ಮತ್ತು ಕೈಗಾರಿಕಾ ವಿಷಯ ಸಮಿತಿಯವರು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಸುಮಾರು ಎರಡು ವರದಿಗಳಲ್ಲಿ 15 ಸಲಹೆಗಳನ್ನು ಅವರು ಮಾಡಿದ್ದಾರೆ. ಅದರಲ್ಲಿ ವಿಶೇಷವಾಗಿ ನಮ್ಮ ಕಿಯಾನಿಕ್ಸ್ ಬಗ್ಗೆ ಟೆಕ್ಸಾಕ್ ಬಗ್ಗೆ ಹಾಗೂ ಈಗ ಇರತಕ್ಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ ಬಗ್ಗೆ ಮತ್ತು ಮೈಸೂರು ಲ್ಯಾಂಪ್ಸ್ ಬಗ್ಗೆ, ರಿಜಿಸ್ಟ್ರೇಷನ್ಸ್ ಬಗ್ಗೆ ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಇದೇ ರೀತಿಯಾಗಿ ಇವೆಲ್ಲಕ್ಕೂ ಮಾಡಬೇಕು ಎನ್ನತಕ್ಕ ಸಲಹೆಯನ್ನು ಕೊಟ್ಟಿದ್ದಾರೆ. ಮತ್ತು ಕೈಗಾರಿಕೆಗಳಲ್ಲಿ 80 ಪರ್ಸೆಂಟ್ ಪೋಸ್ಟ್‌ನ್ನು ಸ್ಥಳೀಯರಿಗೆ ಕಾಯ್ದಿರಿಸಬೇಕು ಎನ್ನತಕ್ಕದ್ದರ ಬಗ್ಗೆ ಸಲಹೆಯನ್ನು ಕೊಟ್ಟಿದ್ದಾರೆ. ಹೀಗೆ ಸುಮಾರು 15 ಸಲಹೆಗಳನ್ನು ಈಗಾಗರೇ ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನು ಖಂಡಿತವಾಗಿ ನಾವು ಪರಿಶೀಲಿಸಿ ಯಾವ್ಯಾವುದು ಸಾಧ್ಯ ಇದೆ, ಅವನ್ನು ಮಾಡೇ ಮಾಡುತ್ತೇವೆ. ಈಗ ಹೊಸ ಒಂದು ಕೈಗಾರಿಕಾ ನೀತಿಯಿಂದ ಈಗಾಗಲೇ ಅನೇಕ ಸಲ ಮುಖ್ಯಮಂತ್ರಿಗಳ ಭಾಷಣದ ಮುಖಾಂತರ ಕೂಡ ತಾವು ಕೇಳಿದ್ದೀರಿ. ಮತ್ತು ಇಲ್ಲಿ ಸದನದಲ್ಲಿ ಕೂಡ ಅನೇಕ ಸಲ ಚರ್ಚೆಗೆ ಬಂದಾಗ ಅಥವಾ ಪ್ರಶ್ನೋತ್ತರ ಕಾಲದಲ್ಲಿಯೂ ಕೂಡ ಅನೇಕ ಸಲ ಮಾಹಿತಿಯನ್ನು ಪಡೆದಿದ್ದೀರಿ. ಈಗ ಹೊಸ ಒಂದು ಕೈಗಾರಿಕಾ ನೀತಿಯ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಸುಮಾರು 40 ಸಾವಿರ ಕೋಟಿ ರೂಪಾಯಿ ಬಂಡವಾಳವನ್ನು ಹೂಡತಕ್ಕ ಒಂದು ಸಾಧ್ಯತೆ ಇದೆ. ಅದರಲ್ಲಿ ವಿಶೇಷವಾಗಿ ಇಂಡಸ್ಟ್ರಿ ಮಾಡತಕ್ಕಂಥದ್ದು ಸುಮಾರು 20 ಸಾವಿರ ಅಥವಾ 25 ಸಾವಿರ ಕೋಟಿ ರೂಪಾಯಿ ಇದೆ. ಆದರೆ ಪವರ್ ಮತ್ತು ಎನರ್ಜಿ ಶಾಖೆಯಲ್ಲಿ ಸುಮಾರು 16 ಸಾವಿರಕೋಟಿ ರೂಪಾಯಿ ಮತ್ತು ಉಳಿದಂತಹ ಬೇರೆ ಬೇರೆ ಸಣ್ಣ ಪುಟ್ಟ ಇಲಾಖೆಯಲ್ಲಿ ಸುಮಾರು ಐದಾರು ಸಾವಿರ ಕೊಟ್ಟಿದ್ದೇವೆ. ಈ ರೀತಿಯಾಗಿ ಸುಮಾರು 40 ಸಾವಿರ ಕೋಟಿ ರೂಪಾಯಿ ಬಂಡವಾಳವನ್ನು ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಹೂಡುತ್ತಿದ್ದೇವೆ. ಇದರಿಂದ ಸಾಕಷ್ಟು ಜನರಿಗೆ ಉದ್ಯೋಗವನ್ನು ಒದಗಿಸತಕ್ಕ ಸಾಧ್ಯತೆ ಇದೆ. ಮತ್ತು ಈ ಒಂದು ಉದಾರೀಕರಣ ನೀತಿಯಿಂದಾಗಿ ಈಗಾಗಲೇ ಬೆಳವಣಿಗೆ ಪ್ರಾರಂಭ ಆಗಿದೆ. ಅದರ ಒಂದು ಫಲ ನಮಗೆ ಈಗ ಸಿಗುತ್ತಿದೆ. ಈ ವಿಜಯನಗರ ಸ್ಟೀಲ್ ಪ್ಲಾಂಟ್ ಈಗಾಗಲೇ ಪ್ರಾರಂಭ ಆಗಿದೆ. ಆಮೇಲೆ ನಮ್ಮ ಮಂಗಳೂರಿನ ರಿಫೈನರಿ ಮತ್ತು ಪೆಟ್ರೋ ಕೆಮಿಕಲ್‌ನ ಕೆಲಸ ಕೂಡ ಪ್ರಾರಂಭ ಆಗಿದೆ. ಈಗ ಕಿರ್ಲೋಸ್ಕರ್ ಕಂಪನಿಯವರು ರಾಯಚೂರಿನಲ್ಲಿ ಪ್ರಾರಂಭ ಮಾಡಿದ್ದಾರೆ. ಹೀಗೆ ಅನೇಕ ಜನ ಇವತ್ತು ಯಾರ್‍ಯಾರು ಇಲ್ಲಿ ದೊಡ್ಡ ಉದ್ದಿಮೆದಾರರು ಬಂಡವಾಳವನ್ನು ಹೂಡತಕ್ಕ

ಆಸಕ್ತಿಯನ್ನು ತೋರಿಸಿದ್ದರು ಅವರೆಲ್ಲರೂ ಕೂಡ ಇವತ್ತು ಒಂದೊಂದಾಗಿ ಆ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಈ ಒಂದು ಸರ್ಕಾರದ ನೀತಿ ಏನು ಇದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು 1990 ರಲ್ಲಿ ಒಂದು ಹೊಸ ಇಂಡಸ್ಟ್ರಿಯಲ್ ಪಾಲಿಸಿಯನ್ನು ಕೊಟ್ಟಿದ್ದರು ಅದರ ಪ್ರಕಾರ ಸಾಕಷ್ಟು ಫ್ಯಾಕ್ಟರಿಗಳು ಇವತ್ತು ಬರುತ್ತಿವೆ. ವಿಶೇಷವಾಗಿ ಸಿಮೆಂಟ್ ಫ್ಯಾಕ್ಟರಿಗಳು, ಸ್ಟೀಲ್ ಫ್ಯಾಕ್ಟರಿಗಳು ಮತ್ತು ಅದಕ್ಕೆ ಅಲೈಡ್ ಇನ್‌ಸ್ಟಿಟ್ಯೂಷನ್ಸ್ ಬಂದು ತಮ್ಮ ಕೆಲಸವನ್ನು ಪ್ರಾರಂಭ ಮಾಡಿದೆ. ಅದಕ್ಕಾಗಿ ನಾನು ಹೆಚ್ಚಿನ ವಿಷಯ ಪ್ರಸ್ತಾಪಮಾಡದೇ ಈ ಒಂದು ಬೇಡಿಕೆ ಏನು ಇದೆ; ಡಿಮ್ಯಾಂಡ್ ನಂಬರ್ - 5 ಅದಕ್ಕೆ ತಾವೆಲ್ಲ ಮುಕ್ತ ಮನಸ್ಸಿನಿಂದ ಸಹಾಯ ಮಾಡಿ ಪಾಸ್ ಮಾಡಿಕೊಡಬೇಕೆಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಬೈರೇಗೌಡ : ಈಗ ಮಾನ್ಯ ಮಂತ್ರಿಗಳು ಹೇಳಿದರು. ಈಗ ದೇಶದಲ್ಲಿ ಒಂದು ವಾತಾವರಣ ಇದೆ, ಲಿಬರಲೈಸೇಷನ್ ಎನ್ನತಕ್ಕ ಮಾತನ್ನು ಹೇಳಿದರು. ಈಗ ಸರ್ಕಾರದ ವಶದಲ್ಲಿರತಕ್ಕ ಕಾರ್ಖಾನೆಗಳನ್ನು ಖಾಸಗೀಕರಣ ಮಾಡತಕ್ಕ ಒಂದು ದೊಡ್ಡ ಹುನ್ನಾರ ಇವತ್ತು ಇಡೀ ದೇಶದಲ್ಲಿ ನಡೆಯುತ್ತಿದೆ. ದೇಶದ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಕಾರ್ಖಾನೆಗಳು ಏನು ಇವೆ ಇವುಗಳನ್ನು ಖಾಸಗೀಕರಣ ಮಾಡತಕ್ಕದ್ದಕ್ಕೆ ಇವರ ಸರ್ಕಾರದವರು ಏನು ಆಲೋಚನೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಮೈಸೂರು ಸಾಬೂನು ಮತ್ತು ಮಾರ್ಜಕ ನಿಯಮಿತವನ್ನು ಖಾಸಗೀಕರಣಗೊಳಿಸುತ್ತಿಲ್ಲವೆಂದು ಇದೇ ಸಂದರ್ಭದಲ್ಲಿ ಹೇಳಿದ್ದರು. ಆದರೆ, ಇದಕ್ಕಿಂತ ಮುಖ್ಯವಾಗಿ ನಮ್ಮ ರಾಜ್ಯದ ಪ್ರತಿಷ್ಠಿತ ಕಾರ್ಖಾನೆಯಾಗಿರುವ ಎನ್.ಜಿ.ಇ.ಎಫ್. ಬಗ್ಗೆ ನಾನು ಮುಖ್ಯಮಂತ್ರಿಯವರಿಗೆ ಮತ್ತು ಮಲ್ಲಿಕಾರ್ಜುನ ಖರ್ಗೆಯವರಿಗೆ ಸಾಕಷ್ಟು ಪತ್ರಗಳನ್ನು ಬರೆದಿದ್ದರೂ ಒಂದು ಪತ್ರಕ್ಕೂ ಉತ್ತರ ಬಂದಿಲ್ಲ. 'ಸೂಕ್ತ ಕ್ರಮ ತೆಗೆದುಕೊಳ್ಳಲು ಇಂತಹ ಕಾರ್ಯದರ್ಶಿಯವರಿಗೆ ಕಳುಹಿಸಿದ್ದೇವೆ. ಎಂಬುದು ಬಿಟ್ಟರೆ ಬರೆದಂಥ ಇತರ ಪತ್ರಗಳಿಗೆ ಪೂರ್ತಿಯಾಗಿ ಅಕ್‌ನಾಲೆಡ್ಜ್‌ಮೆಂಟ್ ಸಹ ಬಂದಿಲ್ಲ. ಕೆಲವೊಂದನ್ನು ಕಾಟಾಚಾರಕ್ಕೆ ಕಳುಹಿಸಿದ್ದಾರೆ. ಎನ್.ಜಿ.ಇ.ಎಫ್ ಕುರಿತು ಅಧ್ಯಯನ ಮಾಡಲು ನೇಮಿಸಲಾಗಿದ್ದ ಮೇಲ್ಮನೆ ಮತ್ತು ಕೆಳಮನೆಯ ಸದನ ಸಮಿತಿಗಳು ತಮ್ಮ ವರದಿ ಕೊಟ್ಟಿವೆ. ಅದರಲ್ಲಿ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದು, ಎನ್‌ಜಿಇಎಫ್‌ನಲ್ಲಿ ಏನು ಕಾಯಿಲೆ ಇದೆಯೆಂದು ತಿಳಿಯುವುದಕ್ಕೋಸ್ಕರ ಸದಸ್ಯರ ಜ್ಞಾನಮಟ್ಟಕ್ಕೆ ಸಂಬಂಧಿಸಿದಂತೆ ಒಂದು ಸಮಿತಿ ರಚಿಸಲಾಗಿದ್ದಿತು. ಈಗ ಲೋಕೋಪಯೋಗಿ ಮಂತ್ರಿಯಾಗಿರುವರಂಗನಾಥ್‌ರವರು ಆಗ ಆ ಸಮಿತಿಯಲ್ಲಿದ್ದರು. ಅವರು ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲೂ ಸಹ ಇದ್ದರು. ಅವರು ವರದಿಯಲ್ಲಿ ಬಹಳ ಗಹನವಾದ ಶಿಫಾರಸ್ಸುಗಳನ್ನು ಮಾಡಲು ಸಹಕರಿಸಿದ್ದಾರೆ. ಈ ಯಾವುದೇ ಶಿಫಾರಸ್ಸುಗಳನ್ನು ಕೂಡ ಕಾರ್ಯಗತಗೊಳಿಸುವುದಕ್ಕೆ ಸರ್ಕಾರ ಮುಂದಾಗಿಲ್ಲ. ಉದಾಹರಣೆಗೆ, ಸರ್ಕಾರಕ್ಕೆ ಸಮಿತಿಯು ಸಲ್ಲಿಸಿರುವ ವರದಿಯಲ್ಲಿರುವ ಒಂದೇ ಒಂದು ಅಂಶವನ್ನು . ನಾನು ಸದನದ ಗಮನಕ್ಕೆ ತರುತ್ತೇನೆ. ಸಮಿತಿಯು ತನ್ನ 41ನೇ ವರದಿಯನ್ನು ದಿನಾಂಕ 13.4.89ರಲ್ಲಿ ಕೊಟ್ಟದ್ದು, ಆ ವರದಿಯನ್ನು ಗೆದ್ದಲು ತಿಂದಿದೆಯೋ ಏನೋ ಗೊತ್ತಿಲ್ಲ. ಈ ವರದಿಯ ಹಾಳೆಗಳನ್ನು ತೆಗೆದು ಅದರ ಮೇಲೆ ಕಣ್ಣಾಡಿಸುವುದಕ್ಕೂ ಸರ್ಕಾರಕ್ಕೆ ಪುರುಸೊತ್ತಿಲ್ಲ. ಆ ವರದಿಯಲ್ಲಿ

ಬಹಳ ತೀವ್ರತರವಾದ, ಉಪಯುಕ್ತವಾದ ಶಿಫಾರಸ್ಸುಗಳನ್ನು ಮಾಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ವರದಿಯಲ್ಲಿನ ಒಂದು ಶಿಫಾರಸ್ಸನ್ನೂ ಸಹ ಕಾರ್ಯಗತ ಮಾಡಲಿಲ್ಲ ಇನ್ನು 43ನೇ ವರದಿಯನ್ನು ನಿಮ್ಮ ಸರ್ಕಾರ ಬಂದ ನಂತರ ದಿನಾಂಕ 29ನೇ ಏಪ್ರಿಲ್ 1992ರಲ್ಲಿ ಕೊಟ್ಟಿದ್ದಾರೆ. ಈ ವರದಿಯಲ್ಲಿ ಎನ್‌ಜಿಇಎಫ್ ನಲ್ಲಿ ಎಂತಹ ಅಧಿಕಾರಿಗಳಿದ್ದರೆಂಬುದನ್ನು ಸ್ಪಷ್ಟವಾಗಿ ಉದಾಹರಣೆ ಸಮೇತ ಕೊಟ್ಟಿದ್ದಾರೆ. ಸದರಿ ವರದಿಯ ಪ್ಯಾರಾ 3.38ರಲ್ಲಿ ಏನು ಹೇಳಿದ್ದಾರೆಂದರೆ.

"The Committee strongly recommends initiation of the criminal and Civil Proceedings as the case may be, against Sri Prabhakar Rao, Former Chairman and Managing Director of the Company in regard to his role in the Commission Episode." ಆ ಕಮಿಷನ್ ಎಪಿಸೋಡ್ ತೆಗೆದುಕೊಂಡರೆ ನಾನು ಗಂಟೆಗಟ್ಟಳೆ ಮಾತನಾಡಬೇಕಾಗುತ್ತದೆ.

ಎ.ಇ.ಜಿ ದು ಕಮೀಷನ್ ಸುಮಾರು ಐದು ಕೋಟಿ ರೂಪಾಯಿಗಳನ್ನು ಗುಳುಂ ಮಾಡಿರುವುದರ ಬಗ್ಗೆ ಸೂಕ್ಷ್ಮವಾಗಿ ಹೇಳಬಯಸುತ್ತೇನೆ. ಸಂಬಂಧಿಸಿದವರ ಮೇಲೆ ಕ್ರಿಮಿನಲ್ ಆಕ್ಷನ್ ತೆಗೆದು ಕೊಳ್ಳಬೇಕೆಂದು ಸಮಿತಿಯು ವರದಿ ಕೊಟ್ಟಿದ್ದರೆ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ವರದಿಯ ಪ್ಯಾರಾ 3.40 ರಲ್ಲಿ

"The Committee emphatically recommends such action may be initiated with immediate effect and brought into effect at the earliest."

ಇದು ತಪ್ಪು ಮಾಹಿತಿ ಕೊಟ್ಟಿರುವುದಕ್ಕೆ ಮತ್ತು ಸಮಿತಿಯನ್ನು ದಾರಿ ತಪ್ಪಿಸಲು ಪ್ರಯತ್ನ ಪಟ್ಟಿರುವುದರ ಬಗ್ಗೆ ಹೇಳಿರುವುದು. ಅದೇ ವಿಷಯಕ್ಕೆ ಸಂಬಂಧಿಸಿದಂತೆ, "The Committee recommends that a through enquiry should be ordered in this regard against the Government Eominees on the Board of the relevant time from 1993 onwards and necessary action taken thereon."

ಏಕೆಂದರೆ, ಅಲ್ಲಿನ ಆಡಳಿತ ಮಂಡಳಿಯಲ್ಲಿರುವ ಸರ್ಕಾರದ ಹಿರಿಯ ಅಧಿಕಾರಿಗಳ ಪಾತ್ರವೇನು? ಆಡಳಿತ ಮಂಡಳಿಯಲ್ಲಿರತಕ್ಕಂಥವರು, ಅಂದಿನ ಕೈಗಾರಿಕಾ ಕಾರ್ಯದರ್ಶಿಗಳು ಮತ್ತು ಹಣಕಾಸು ಕಾರ್ಯದರ್ಶಿಗಳಾಗಿದ್ದವರು ನಡೆಸಿದಂಥ ದುರ್ವ್ಯವಹಾರದ ಬಗ್ಗೆ ಈ ಸದನದ ಸಮಿತಿ ಈಗ ನಾನು ಓದಿದ ರೀತಿಯಲ್ಲಿ ಶಿಫಾರಸ್ಸುಗಳನ್ನು ಮಾಡಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ? ಇಲ್ಲವೋ? ಗೊತ್ತಿಲ್ಲ. ನಾನು ಎಲ್ಲಾವನ್ನೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಆಮೇಲೆ ಪ್ಯಾರಾ 3.47 ರಲ್ಲಿ ಈರೀತಿ ಇದೆ.

ಉಪಾಧ್ಯಕ್ಷರು : ಪ್ಯಾರಾಗ್ರಫ್ ಓದಿ ಬಿಡಿ...

ಶ್ರೀ ಸಿ.ಬೈರೇಗೌಡ : ಇದರಲ್ಲಿ ಚರ್ಚೆಗೆ ಅವಕಾಶವೇ ಇಲ್ಲ.

"The Committee recommends that a thorough enquiry shold be ordered into the circumstances, background, motives and consequences of the aforesaid interventionists, motives and in view of the fact that the beneficiary thereon could not be taken based on the enquiry against the Commerce and Industry and Finance Secretaries."

ಎನ್ನತಕ್ಕ ರೆಕ್ಮೆಂಡೇಷನ್ಸ್ ಕೊಟ್ಟಿದ್ದಾರೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಅದನ್ನು ಖಾಸಗೀಕರಣ ಮಾಡತಕ್ಕ ಬಗ್ಗೆ ಮೊನ್ನೆ ಹೇಳಿದ್ದಾರೆ. ಈಗ ಖಾಸಗೀಕರಣ ಮಾಡುವುದಿಲ್ಲ ಅದನ್ನು ಬಿಎಚ್ಇಎಲ್‌ಗೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಬಿಎಚ್ಇಎಲ್ ಕಥೆ ಕೂಡ ಇದಕ್ಕಿಂತ ಉತ್ತಮವಾಗಿ ಏನು ಇಲ್ಲ. ಅದಕ್ಕೂ ಕೂಡ ಬಲವಂತವಾಗಿ ವಿಷಪಾನ ಮಾಡಿ ಸತಕ್ಕಂಥ ಒಂದು ವ್ಯವಸ್ಥೆ ದೆಹಲಿ ಮಟ್ಟದಲ್ಲಿ ನಡೆಯುತ್ತಿದೆ. ನಾನು ಅಲ್ಲಿಗೆ ಹೋಗುವುದಿಲ್ಲ. ಆದರೆ ಬಿಎಚ್ಇಎಲ್ ಏನಾಗುತ್ತದೆ ಎನ್ನುವ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಎಲ್ಲಿಯವರೆಗೆ ನಡೆಯುತ್ತಿದೆ ಎಂದರೆ ಬಿಎಚ್ಇಎಲ್ ಕಥೆ ಏಕೆ ಎಂದರೆ, ಇವರು ಬಿಎಚ್ಇಎಲ್‌ಗೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬಿಎಚ್ಇಎಲ್ ಬೇರೆ ಖಾಸಗಿ ಮಲ್ಟಿ ನ್ಯಾಶನಲ್ ಕಂಪನಿ ಆಗಿರತಕ್ಕ ಅದರ ಛೇರ್ಮನ್ ಆಗಿರತಕ್ಕವರು, ಛೇರ್ಮನ್ ಅಫ್ ಜೆಇಸಿ ಹಾಲ್ ಸ್ಟೋನ್ ಜೆಇಸಿ ಹಾಲ್‌ಸೊಡೀನ್ ಛೇರ್ಮನ್ ಮ್ಯಾನೇಜಿಂಗೆ ಡೈರೆಕ್ಟರ್ ಆಗಿರತಕ್ಕವರು ದೆಹಲಿಗೆ ಬಂದು ಒಂದು ಪ್ರೆಸ್ ಕಾನ್‌ಫೆರೆನ್ಸ್ ಮಾಡಿ ಏನು ಮಾಡಿದ್ದಾರೆ.ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

" Some time ago, the Chairman of the G.E.C Halstome, had the adacity to address to press conference in New Delhi on as to how his Company Proposes to restructure the B.H.E.L.,"

ನನ್ನ ಮಾಹಿತಿ ಪ್ರಕಾರ ಇಲ್ಲಿಯವರೆಗೂ ಬಿಎಚ್ಇಎಲ್‌ನ ಒಂದು ಶೇರ್ ಕೂಡ ಎಪಿಜೀಸ್ ಹಾಲ್ ಸ್ಟೋನ್‌ಗೆ ವರ್ಗಾವಣೆ ಆಗಿಲ್ಲ. ಅಂತಹ ಕಂಪನಿಗೆ ಜೆ.ಇ.ಸಿ ಹಾಲ್ ಸ್ಟೋನ್‌ಗೆ ಛೇರ್ಮನ್ ಆಗಿರತಕ್ಕವರು ದೆಹಲಿಗೆ ಬಂದು ನಾವು ಈ ಬಿಎಚ್ಇಎಲ್ ಅನ್ನು ರೀಸ್ಟ್ರಕ್ಚರ್ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಹೊರಟಿದ್ದಾರೆ. ಅಲ್ಲಿಗೆ ಅದರ ಕಥೆ ಏನಾಗುತ್ತಿದೆ ಎಂದರೆ, ಇವತ್ತೋ ನಾಳೆನೋ ಬಿಎಚ್ಇಎಲ್ ಕೂಡ ಸತ್ತು ಹೆಣವಾಗಿ ಬೀಳುತ್ತದೆ. ಅದರ ಕಥೆ ಬಹಳ ಇದೆ ನಾನು ಅದನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ

ಹೋಗುವುದಿಲ್ಲ. ಏಕೆಂದರೆ ನಮ್ಮ ಈ ಸದನದ ಕಕ್ಷೆಗೆ ಅದು ಬರದೇ ಇರುವ ಕಾರಣದಿಂದ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಅದು ಇವತ್ತೊ ನಾಳೆನೋ ಬೀಳತಕ್ಕ, ಸಾಯಿಸತಕ್ಕ ಕೆಲಸ ಅಲ್ಲಿ ನಡೆಯುತ್ತಿದೆ. ಅಂಥ ಕಂಪನಿಗೆ ಇವತ್ತಿನ ದಿವಸ ವಹಿಸಿಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇವತ್ತು ಏನಾದರೂ ಎನ್‌ಜಿಎಫ್‌ಗೆ ಆರೋಗ್ಯ ಕೆಡಿಸಬೇಕಾಗಿದ್ದರೆ ಯಾರು ಇಲ್ಲಿ ಅಧಿಕಾರವನ್ನು ನಡೆಸಿದ್ದಾರೆ. ಅವರೇ ಕಾರಣ. ಬೇರೆ ಯಾರೂ ಕೂಡ ಅಲ್ಲ. ಅಲ್ಲಿರತಕ್ಕ ಕಾರ್ಮಿಕರಾಗಲೀ ಅಥವಾ ಅಲ್ಲಿರತಕ್ಕ ಸಿಬ್ಬಂದಿ ವರ್ಗದವರಾಗಲೀ ಕಾರಣ ಅಲ್ಲ. ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತಿರತಕ್ಕ ನಿಮ್ಮ ಇಲಾಖೆಯ ಕಾರ್ಯದರ್ಶಿಗಳಾಗಿರತಕ್ಕವರು, ಹಿರಿಯ ಅಧಿಕಾರಿಗಳಾಗಿರತಕ್ಕವರು ಕ್ರಿಮಿನಲ್ ಆಕ್ಷನ್ ಅನ್ನು ಅಲ್ಲಿ ಮಾಡಿ ಆ ಕಂಪನಿಯನ್ನು ಹಾಳು ಮಾಡತಕ್ಕದುರುದ್ದೇಶವನ್ನು ಇಟ್ಟುಕೊಂಡು, ಇದನ್ನು ಹೇಗಾದರೂ ಮಾಡಿ ಹಾಳು ಮಾಡಬೇಕು ಎಂಬ ಉದ್ದೇಶದಿಂದ ಈ ಎನ್‌ಜಿಇಎಫ್ ಅನ್ನು ಇವತ್ತು ನಡೆಸಿದ್ದಾರೆ. ಅದಕ್ಕೇ ಇವತ್ತು ಎನ್‌ಜಿಇಎಫ್ ಬಲಿ ಅಗತಕ್ಕ ಪರಿಸ್ಥಿತಿ ಇದೆ. ಈಗ ಅದನ್ನು ಖಾಸಗೀಕರಣ ಮಾಡುವುದಿಲ್ಲ. ಬಿಎಚ್‌ಎಲ್‌ಗೆ ಅದನ್ನು ಕೊಡುತ್ತೇವೆ ಎಂದು ಹೇಳತಕ್ಕದ್ದು, ಬಿಎಚ್‌ಇಎಲ್ ಇವತ್ತೋ ನಾಳೆಯೇ ಸತ್ತು ಬೀಳುತ್ತಿದೆ. ಅದು ಖಾಸಗೀಕರಣ ಆಗತಕ್ಕ ಪರಿಸ್ಥಿತಿಯಲ್ಲಿದೆ ಆದ್ದರಿಂದ ಇವತ್ತಿನ ದಿವಸ ನಾನು ಕೆಲವು ಸಲಹೆಗಳನ್ನು ಬರವಣಿಗೆಯ ಮೂಲಕ ಕೊಟ್ಟಿದ್ದೇವೆ. ನಾವು ಪತ್ರ ಬರೆದರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ ಅದರ ಬಗ್ಗೆ ಉತ್ತರ ಇಲ್ಲ. ಇಲ್ಲಿ ಚರ್ಚೆ ಮಾಡುವುದಕ್ಕೂ ತಾವು ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ .

(ಗೊಂದಲ)

ಉಪಾಧ್ಯಕ್ಷರು : ತಾವು ಕಾಲರಿಫಿಕೇಶನ್ ಕೇಳಿ.

ಶ್ರೀ ಸಿ.ಬೈರೇಗೌಡ : ಇವತ್ತು ಕೆಲವು ಸಲಹೆಗಳನ್ನು ಪತ್ರ ಮುಖೇನ ತಿಳಿಸಿದ್ದೇನೆ. ಅದನ್ನು ಕಾರ್ಯಗತ ಮಾಡಿದರೆ ಇವತ್ತು ಎನ್‌ಜಿಇಎಫ್ ಅನ್ನು ಬೇರೆ ಯಾರಿಗದರೂ ಕೂಡ ವಹಿಸಬೇಕಾದ ಅವಶ್ಯಕತೆ ಇಲ್ಲ. ಆದ್ದರಿಂದ ನೀವು ಇವತ್ತಿನ ದಿವಸ ಏನು ಮಾಡುತ್ತೀರಿ ಎನ್ನತಕ್ಕದ್ದನ್ನು ದಯವಿಟ್ಟು ತಾವು ತಮ್ಮ ಉತ್ತರದಲ್ಲಿ ತಿಳಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಇದರದ್ದು ಇನ್ನೊಂದು ವಿಚಾರ ಇದೆ. ಇನ್ನೂ ಕೆಲವು ಅಧಿಕಾರಿಗಳ ಬಗ್ಗೆ ನಾನು ಪತ್ರ ಬರೆದಿದ್ದೇನೆ. ಅದರಲ್ಲಿ ಇವತ್ತು ಒಂದು ಕಂಪೆನಿ ಬಗ್ಗೆ ನನ್ನ ಹೆಸರು ಪ್ರಧಾನವಾಗಿ ಕೂಡ ಒಂದು ಪತ್ರಿಕೆಯಲ್ಲಿ ಬಂದಿದೆ. ಇವತ್ತಿನ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ ಕೆಟಿಎಲ್ ಬಗ್ಗೆ ಬಂದಿದೆ. ಅಲ್ಲಿರತಕ್ಕ ಒಬ್ಬರು ಮ್ಯಾನೆಜಿಂಗ್‌ಡೈರೆಕ್ಟರ್ ಅವರನ್ನು ನೇಮಿಸಿದ್ದಾರೆ. ಅವರಿಗೆ ಮೂರು ಸಾರಿ ಎಕ್ಸ್‌ಟೆನ್‌ಷನ್ ಕೊಟ್ಟಿದ್ದಾರೆ. ಅವರು ಟೆಕ್ನಿಕಲ್ ಪರ್ಸನ್ ಅಲ್ಲ. ಇಂತಹ ಕಂಪನಿಗಳನ್ನು ವ್ಯವಹಾರಿಕವಾಗಿ ನಡೆಸಬೇಕಾದರೆ ಟೆಕ್ನಿಕಲ್ ಆಗಿರತಕ್ಕವರನ್ನು ಕ್ವಾಲಿಫೈ ಆಗಿರತಕ್ಕಂಥವರನ್ನು ನೇಮಿಸಿ ಎಂಬ ಮಾತನ್ನು ನಾವು ಹೇಳಿದ್ದೇವೆ. ಈ ಸಮಿತಿಯಲ್ಲಿ ಎಲ್ಲರೂ ಕೂಡ ಅಭಿಪ್ರಾಯ ಪಟ್ಟಿದ್ದಾರೆ. ಇವತ್ತು ಅದನ್ನು ಖಾಸಗಿಕರಣ ಮಾಡಬೇಕೆಂಬ ಉದ್ದೇಶದಿಂದ ಇವರಿಗೆ ಬೇಕಾದಂಥ ಒಬ್ಬರನ್ನು ಅಲ್ಲಿ ಮ್ಯಾನೆಜಿಂಗ್ ಡೈರಕ್ಟರ್ ಆಗಿ ಹಾಕಿರುವುದು. ಅದರ ಬಗ್ಗೆ ಒಬ್ಬ ಟೆಕ್ನೊಟನ್ನು

ಛೇರ್‌ಮನ್ ಆಗಿ ನೇಮಿಸಿದರು. ಜಿ.ಟಿ. ನಾರಾಯಣ್ ಎಂಬವವರನ್ನು ಕೆ.ಟಿ.ಎಲ್. ಛೇರ್‌ಮೆನ್ ಆಗಿ ನೇಮಿಸಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಏಕೆಂದರೆ, ಛೇರ್‌ಮೆನ್ ಅನ್ನು ಅಪಾಯಿಂಟ್‌ಮೆಂಟ್ ಮಾಡುವುದು ಬಿಡುವುದು ಅವರ ಪರ್ವ್ಯೂಗೆ ಬರುತ್ತದೆ. ನಾಳೆ ತಾವು ಪ್ರಸ್ತಾಪ ಮಾಡುವಾಗ ಅಂದರೆ 5ನೇ ತಾರೀಖು ಅವರ ಬೇಡಿಕೆಗಳು ಇವೆ. ಅದರ ಬಗ್ಗೆ ಮಾತನಾಡುವಾಗ ತಾವು ಹೇಳಬಹುದು ಛೇರ್‌ಮನ್ಸ್ ಅನ್ನು ಅಪಾಯಿಂಟ್‌ಮೆಂಟ್ ಮಾಡುವುದು ಮೋರ್ ಆರ್ ಲೆಸ್ ಮುಖ್ಯಮಂತ್ರಿಗಳು ಪರ್ವ್ಯೂಗೆ ಬರುತ್ತದೆ ಆಗ ತಾವು ಕೇಳಬಹುದು. ಈಗ ಎನ್.ಜಿ.ಇ.ಎಫ್. ಬಗ್ಗೆ ತಾವು ಕೇಳಿದ್ದೀರಿ. ಅದರ ಬಗ್ಗೆ ಬೇಕಾದರೆ....

ಶ್ರೀ ಸಿ. ಬೈರೇಗೌಡ :- ಇವತ್ತಿನ ದಿವಸ ನಾರಾಯಣ ಶೆಟ್ಟಿ ಎನ್ನುವವರನ್ನು ಛೇರ್‌ಮನ್ ಮಾಡುವುದಕ್ಕೆ ಹೊರಟಿರುವವರ ಬಗ್ಗೆಯೂ ಕೂಡ ನಾನು ಪತ್ರವನ್ನು ಬರೆದಿದ್ದೇನೆ. ಅವರ ಮೇಲೂ ಗುರುತರವಾದಂತಹ ಆರೋಪಗಳು ಇವೆ. ಅವರನ್ನೆಲ್ಲಾ ಮೇಲೆ ಏರಿಸುವಂತಹ ಪ್ರಯತ್ನ ನಡೆಯುತ್ತಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈಗ ಎನ್.ಜಿ.ಇ.ಎಫ್. ಬಗ್ಗೆ ಪತ್ರದಲ್ಲಿ ಎಲ್ಲಾ ವಿವರಗಳನ್ನು ಬರೆದಿದ್ದೇನೆ. ದಯವಿಟ್ಟು ನೀವು ಅದನ್ನು ಪರಿಶೀಲನೆ ಮಾಡಿ ನಾನೇ ಅಲ್ಲ ತಜ್ಞರನ್ನು ಬೇಕಾದರೂ ಕರೆಯಿಸಿ ಪರಿಶೀಲನೆ ನಡೆಸಿ. ಇವತ್ತು ಮುಳುಗುತ್ತಿರುವಂತಹ ಬಿ.ಹೆಚ್.ಇ.ಎಲ್. ಇವತ್ತೊ ನಾಳೆಯೊ ಬೀಳುತ್ತಿದೆ. ಅದರ ಜೊತೆ ಇದೂ ಸಹ ಸಾಯವಂತಹ ಪ್ರಯತ್ನ ನಡೆಯುತ್ತಿದೆ. ಆದುದರಿಂದ ದಯವಿಟ್ಟು ಇದಕ್ಕೆ ತಾವು ಒಪ್ಪಿಗೆ ಕೊಡಬಾರದು ಎಂಬ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಸಭಾಧ್ಯಕ್ಷರೆ, ಈಗಾಗಲೇ ಮಾನ್ಯ ಬೈರೇಗೌಡರು ಎನ್.ಜಿ.ಇ.ಎಫ್. ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಹಿಂದೆಯೂ ಕೂಡ ಪತ್ರಗಳನ್ನು ಬರೆದಿದ್ದಾರೆ. ಅದರೆ ವಿವರವಾಗಿ ನಮಗೆ ಉತ್ತರವನ್ನು ಕೊಡಲಿಕ್ಕೆ ಆಗಲಿಲ್ಲ. ಆದರೆ ಅವರ ಪತ್ರದ ಬಗ್ಗೆ ನಾವು ಗಮನ ಹರಿಸಿದ್ದೇವೆ. ಒಂದು ವಿಚಾರವೇನೆಂದರೆ, ಸರ್ಕಾರ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೂ ಸಮಗ್ರವಾಗಿ ವಿಚಾರ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ತರಾತುರಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವಂತಹ ಅವಶ್ಯಕತೆಯಿಲ್ಲ. ಆದರೆ ಒಂದು ಮಾತನ್ನು ತಾವು ಕೂಡ ಒಂದು ಮಾತನ್ನು ತಮ್ಮ ಗಮನದಲ್ಲಿಡಬೇಕು. ಈಗ ಲಿಬರ್‌ಲೈಸ್ ಪಾಲಿಸಿ ಬಂದ ಮೇಲೆ ಈಗಾಗಲೇ ಎನ್.ಜಿ.ಇ.ಎಫ್. 60 ಕೋಟಿ ರೂಪಾಯಿಗಳ ಲುಕ್ಸಾನುನಲ್ಲಿದೆ. ಸೋಪ್ಸ್ ಅಂಡ್ ಡಿಟರ್‌ಜಂಟ್ಸ್ ಸುಮಾರು 95 ಕೋಟಿ ಲುಕ್ಸಾನ್‌ನಲ್ಲಿದೆ. ವಿಥ್ ಲೇಟೆಸ್ಟ್ ಮೆಷನರಿ ಟೆಕ್ನಾಲಜಿ ಬೇರೆಯವರು ಖಾಸಗಿಯವರು ಮಾಡುವಾಗ ಅವರೊಡನೆ ಕಾಂಪಿಟ್ ಮಾಡತಕ್ಕಂಥ ಸಾಧ್ಯತೆ ಇದೆ . ಅದನ್ನು ಮಾಡ್ರನೈಸ್ ಮಾಡಬೇಕಾದರೆ ಅಷ್ಟು ಹಣವಿದೆ

ಏನು? ಎರಡನೆಯದು ಹಣ ಇಲ್ಲವೆಂದರೆ ಅದನ್ನು ಸರ್ಕಾರ ಕೊಡಬೇಕು, ಇಲ್ಲವೇ ಲೋನ್ ಕೊಡಿಸಬೇಕು. ಅಲ್ಲಿಯವರೆಗೂ ಬಡ್ಡಿಯನ್ನು ಕೊಡುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಈ ಸಂದರ್ಭದಲ್ಲಿ ಎನ್.ಜಿ.ಇ.ಎಫ್‌ಗೆ ಆ ಶಕ್ತಿ ಇಲ್ಲ ಇದು ಒಂದೇ ದಿವಸದಲ್ಲಿ ನೀವು ಹೇಳಿದ ಹಾಗೆ ಬಂದಿದ್ದಲ್ಲ. ಕ್ರಮೇಣ ಅಂದರೆ 1979ರಿಂದ ನಡೆದುಕೊಂಡು ಬಂದಿದೆ. ಇದು ಮೊದಲನೆಯದು, ಮತ್ತೊಂದು ರಿಪೋರ್ಟ್ 1989ದು ಇಷ್ಟಾದರೂ ಸಹಿತ ನಾನು ಮೊನ್ನೆ ಎನ್.ಜಿ.ಇ.ಎಫ್.ಗೆ ಹೋಗಿ ಅಲ್ಲಿ ಕೇವಲ ಎಂ.ಡಿಯವರನ್ನಷ್ಟೇ ಅಲ್ಲ, ಅಲ್ಲಿನ ಕಾರ್ಮಿಕರ ಜೊತೆಯಲ್ಲಿ ಮತ್ತು ಟ್ರೇಡ್ ಯೂನಿಯನ್ ಲೀಡರ್ಸ್ ಯಾರಿದ್ದಾರೆ ಅವರು 3-4 ಗುಂಪುಗಳು ಇದ್ದಾರೆ. ಅವರೆಲ್ಲರನ್ನೂ ಕರೆಸಿ ಮಾತನಾಡಿದ್ದೇನೆ. ಎಲ್ಲ ಗುಂಪಿನವರು ಏನು ಹೇಳುತ್ತಾರೆಂದರೆ, ಇದನ್ನು ನೀವು ಪಬ್ಲಿಕ್ ಅಂದರೆ ಟೇಕಿಂಗ್ ಮಾಡಿ ಇಟ್ಟುಕೊಳ್ಳಿ. ಇಲ್ಲವೇ ಇದನ್ನು ನೀವು ಬಿ.ಹೆಚ್.ಇ.ಎಲ್‌ಗೆ ಕೊಟ್ಟರೂ ಚಿಂತೆ ಇಲ್ಲ. ಇದು ಜೀವಂತವಾಗಿ ಇರಬೇಕು. ನಾವೆಲ್ಲರೂ ಬದುಕಬೇಕು ಈ ಸಂಸ್ಥೆ ಬದುಕಬೇಕು ಎನ್ನತಕ್ಕದ್ದೇ ನಮ್ಮ ಆಸೆಯಾಗಿದೆಯೇ ಹೊರತು ನಮಗೆ ಇನ್ನಾವ ಉದ್ದೇಶವೂ ಇಲ್ಲ ಎನ್ನತಕ್ಕಂಥ ಮಾತನ್ನು ಒಂದು ಸಲವಲ್ಲ ನೂರು ಸಲ ಹೇಳಿದ್ದಾರೆ. ಇದನ್ನು ನಾವೇ ಹೇಳುತ್ತಿಲ್ಲ ಇದಕ್ಕಿಂತ ಮುಂಚೆ ತಮಗೆ ಗೊತ್ತಿದೆ, ಎ.ಪಿ.ಪಿ., ಮತ್ತು ಬಿ.ಪಿ.ಎಲ್. ಆಫ್‌ರ್ ಇತ್ತು. ಅದನ್ನು ತಪ್ಪಿಸಿ ನಾವು ಯಾವ ರೀತಿ ಇದನ್ನು ಪಬ್ಲಿಕ್ ಅಂದರೆ ಟೇಕಿಂಗ್‌ನಲ್ಲಿಟ್ಟುಕೊಳ್ಳಬೇಕು ಎನ್ನುವಂತಹ ಚಿಂತನೆ ಮಾಡಿ ಹೊಸ ಮಾರ್ಗವನ್ನು ಹುಡುಕಿದೆ. ಅದು ಎರಡು ಮಾರ್ಗಗಳು ಒಂದು ಆಲ್ಟರ್ನೇಟೀವ್ ಏನೆಂದರೆ, ಇವತ್ತು 25-30 ಕೋಟಿ ರಾಪಾಯಿಗಳ ಬಂಡವಾಳವನ್ನು ತೊಡಗಿಸಿ ಯಾವ ರೀತಿ ವ್ಯವಸ್ಥಿತವಾಗಿ ನಡೆಸಬೇಕೆಂಬುದಕ್ಕೆ ಗೌವರ್ನ್‌ಮೆಂಟ್ ಗ್ಯಾರಂಟಿ ಕೊಟ್ಟು ಇಂಟರ್ ಸಬ್ಸಿಡಿ ಕೊಡಿ ಎಂಬುದು ಒಂದು ಪ್ರಪೋಸಲ್ ಎರಡನೆಯದು ಇವತ್ತು ಬಿ.ಹೆಚ್.ಇ.ಎಲ್. ಮಳುಗುತ್ತಿದೆ ಎಂಬ ತಮ್ಮ ಮಾತನ್ನು ನಾನು ಒಪ್ಪುವುದಿಲ್ಲ. ಅಲ್ಲಿ ಕರ್ನಾಟಕದವರೆ ಅಧ್ಯಕ್ಷರಾಗಿದ್ದರೆ, ಅವರ ಹೆಸರು ಗವಿ ಸಿದ್ಧಪ್ಪ ಎಂದು. ಪ್ರತಿದಿವಸ ಒಂದು ಕೋಟಿ ರೂಪಾಯಿ ಲಾಭವನ್ನು ಅವರು ಮಾಡುತ್ತಿದ್ದಾರೆ. 365 ಕೋಟಿ ರಾಪಾಯಿ ಪ್ರಾಫಿಟ್ ಇವತ್ತು ಬಿಹೆಚ್‌ಇಎಲ್‌ನಲ್ಲಿ ಇದೆ. ಅದರಲ್ಲಿ ಇನ್‌ಕಂಟಾಕ್ಸ್ ಹೋಗಿ ಸುಮಾರು 200 ಕೋಟಿ ರೂಪಾಯಿ ಉಳಿದಿದೆ. ಅವರು ಹೇಳುವುದೆನೆಂದರೆ. ಇದು ಒಂದು ಕರ್ನಾಟಕ ರಾಜ್ಯದ ದೊಡ್ಡ ಸಂಸ್ಥೆಯಾಗಿದೆ. ನಾವು ಈ ಸಲ ಇಷ್ಟು ಪ್ರಾಫಿಟ್ ಮಾಡಿದ್ದೇವೆ. ಯಾವುದೋ ಒಂದು ರೀತಿಯಾಗಿ ಇದನ್ನು ಉಳಿಸಿಕೊಂಡು ಹೋಗುವುದಕ್ಕೆ ನಾವೂ ಕೂಡ ಸಹಾಯ ಮಾಡುತ್ತೇವೆ. ನೀವು ಈ ಸಂಸ್ಥೆಯನ್ನು ಬೇರೆಯವರಿಗೆ ಕೊಡುತ್ತೇವೆ ಎನ್ನುವುದಾದರೆ ನಾವೇ ಅದನ್ನು ನಡೆಸುತ್ತೇವೆ ಎನ್ನುವ ಮಾತುಕತೆ ಅದಮೇಲೆ ಇದು ಪಬ್ಲಿಕ್ ಅಂದರೆ ಟೇಕಿಂಗ್ ಆಗಿ ಉಳಿಯುತ್ತದೆ. ಕೇಂದ್ರ ಸರ್ಕಾರದ ಕೈಯಲ್ಲಿ ಇದ್ದರೆ ಅದೂ ಕೂಡ ಇಲ್ಲಿಯ ನಮ್ಮ ನಿಯಾಮವಳಿಗಳ ಪ್ರಕಾರ ನಡೆದುಕೊಂಡು ಹೋಗುತ್ತದೆ. ಸರೋಜಿನಿ ಮಹಿಷಿ ಕಮಿಟಿ ರಿಪೋರ್ಟ್ ಪ್ರಕಾರ ಅಪಾಯಿಂಟ್‌ಮೆಂಟ್ ಸಿಗುತ್ತದೆ. ಇದರಲ್ಲಿ ಯಾವ ರೀತಿಯ ವ್ಯತ್ಯಾಸ ಆಗುವುದಿಲ್ಲ ಎಂದು ತಿಳಿದುಕೊಂಡು ಅದರ ಬಗ್ಗೆ ಚಿಂತನೆ ಮಾಡಿದ್ದೇವೆಯೇ ಹೊರತಾಗಿ ಈಗ ಯಾವ ನಿರ್ಣಯವನ್ನು ಕೂಡ ತೆಗೆದಿಕೊಂಡಿಲ್ಲ. ಆದರೆ ನೀವು ಏನು ಮಾಡುತ್ತಿದ್ದೀರಿ ಎಂದರೆ, ಇದು ಮುಳುಗುತ್ತಿದೆ ಆ ಸಂಸ್ಥೆಗೆ ಕೊಡುತ್ತಿದ್ದೀರಿ, ಮುಂದೆ ಅವರು ಪ್ರೈವೇಟ್ ಕಂಪನಿಗಳಿಗೆ ಕೊಡುತ್ತಿದ್ದಾರೆ ಎಂದು ಹೀಗೆ ಒಂದಕ್ಕೊಂದು ನೀವು ಹೇಳಿಕೊಳ್ಳುತ್ತಿರುವುದು

ಸರಿಯಲ್ಲ. ಆದರೆ ಈಗಿರತಕ್ಕಂಥಾದ್ದು ನಾವು ಕೊಡಬೇಕು ಅಥವಾ ಇದರ ಬಗ್ಗೆ ಚಿಂತನೆ ಮಾಡಬೇಕು ಎನ್ನುವುದು ಇಷ್ಟೆ. ಇದನ್ನುಬಿಹೆಚ್‌ಇಎಲ್‌ಗೆ ಕೊಟ್ಟರೆ ಹೇಗೆ ಎನ್ನುವಂತಹ ಒಂದು ವಿಚಾರ ಇದೆ. ಇನ್ನು ನಾವು ಯವ ನಿರ್ಣಯವನ್ನೂ ಕೂಡ ಅದರ ಬಗ್ಗೆ ತೆಗೆದುಕೊಂಡಿಲ್ಲ. ಒಂದು ವೇಳೆ ನಮಗೆ ಬಂಡವಾಳ ಸಿಕ್ಕರೆ ಅದನ್ನು ನಾವೇ ಏಕೆ ನಡೆಸಬಾರದು ಎನ್ನುವ ಚಿಂತನೆಯೂ ಕೂಡ ಇದೆ. ಇವತ್ತಿನದಿವಸ ಇವೆರಡೂ ಪ್ರಪೋಸಲ್ ನಮ್ಮ ಮುಂದೆ ಇದೆ. ಅದ್ದಕ್ಕಾಗಿ ದಯವಿಟ್ಟು ಅಲ್ಲಿ ಯಾರು ಇಂತಹ ಒಂದು ಒಳ್ಳೆಯ ಸಂಸ್ಥೆಯನ್ನು ನಡೆಸುತ್ತಿದ್ದಾರೆ ಅವರಿಗೆ, ಇದು ಮುಳುಗುವ ಸಂಸ್ಥೆ, ಪ್ರಾಫಿಟ್ ಇಲ್ಲ, ಇದು ಲುಕ್ಸಾನ್‌ನಲ್ಲಿ ಇದೆ ಎಂದು ಹೇಳುವುದು ಅಷ್ಟು ಸರಿಯಲ್ಲ. ಏಕೆಂದರೆ, ನಮ್ಮ ಕನ್ನಡದವರೇ ಅಲ್ಲಿ ಮೊದಲನೆಯ ಸಲ ಅಧ್ಯಕ್ಷರಾಗಿದ್ದಾರೆ. ಅವರಿಗೂ ಕೂಡ ಒಂದು ಗೌರವ ಇದೆ, ರೆಪ್ಯುಟೇಷನ್ ಇದೆ. ಆ ದೃಷ್ಟಿಯಿಂದ ನಾನು ತಮಗೆ ಮನವಿ ಮಾಡಿಕೊಳ್ಳುತ್ತೇನೆ. ನಿಮಗೆ ಆ ಒಂದು ಭಯ ಬೇಡ. ಮತ್ತು ಇದರ ಬಗ್ಗೆ ಯಾವ ರೀತಿಯಾದಂತಹ ತರಾತುರಿಯ ನಿರ್ಣಯ ತೆಗೆದುಕೊಳ್ಳುತಕ್ಕಂಥಾದ್ದು ಇಲ್ಲ. ಇನ್ನೂ ಕ್ಯಾಬಿನೆಟ್ ಮುಂದೆ ಈ ವಿಷಯ ಇದೆ. ಅದನ್ನು ಚರ್ಚೆ ಮಾಡಿ, ಈಗ ಅದು ಪೊಲಿಟಿಕಲ್ ಅಫೇರ್ಸ್ ಕಮಿಟಿ ಮುಂದೆ ಹೋಗಿದೆ. ಅಲ್ಲೂ ಕೂಡ ಅದು ಸವಿಸ್ತಾರವಾಗಿ ಚರ್ಚೆಯಾಗುತ್ತದೆ. ಚರ್ಚೆಯಾದಮೇಲೆ ಪುನಃ ಅದು ಮತ್ತೆ ಕ್ಯಾಬಿನೆಟ್‌ಗೆ ಬರುತ್ತದೆ. ನಂತರ ಅದರ ಮೇಲೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಈಗ ಸಧ್ಯಕ್ಕೆ ಆ ಪ್ರಸ್ತಾವನೆ ಇಲ್ಲ. ಇನ್ನು ಎರಡನೆಯದಾಗಿ ಪಬ್ಲಿಕ್ ಅಂಡರ್ ಟೇಕಿಂಗ್ ಇದೆ. ವಿಷಯ ಸಮಿತಿಗಳು ಇವೆ. ಅದರಲ್ಲೂ ಕೂಡ ನೀವು ಡಿಟೈಲಾಗಿ ಚರ್ಚೆ ಮಾಡಿ ನಮಗೆ ಸಲಹೆ ಕೊಡಬಹುದು. ಬಹುಶಃ ಈ ಸಲ ಕೊಟ್ಟಂತಹ 15 ಸಲಹೆಗಳಲ್ಲಿ ಅದು ಇಲ್ಲ. ಆ ರಿಪೋರ್ಟ್‌ನ್ನು ಕೂಡ ನಾನು ತರಿಸಿದ್ದೆ. 2 ರಿಪೋರ್ಟ ಏನು ನಮಗೆ ಕೊಟ್ಟಿದೆ ಅದರಲ್ಲಿ ಇದು ಇಲ್ಲ. ಹಿಂದಿನ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ರಿಪೋರ್ಟ್‌ನಲ್ಲಿರಬಹುಧು. ಖಂಡಿತವಾಗಿ ಅಂತಹದೇನಾದರೂ ಸಲಹೆ ಇದ್ದರೆ ಆ ಸಲಹೆಗಳನ್ನು ಜಾರಿಯಲ್ಲಿ ತರತಕ್ಕಂತಹ ಹಣದ ಶಕ್ತಿ ನಮ್ಮಲ್ಲಿ ಇದ್ದರೆ ಖಂಡಿತವಾಗಿ ಅದನ್ನು ಮಾಡೋಣ. ಅಥವಾ ಹಣ ಎಲ್ಲಿಂದಲಾದರೂ ಒದಗಿಸಿದರೆ ನಾವು ಅದನ್ನು ಮಾಡುತ್ತೇವೆ. ಆದರೆ ಇವತ್ತು ಅನೇಕ ಫೈನಾನ್ಸಿಯಲ್ ಇನ್ಸಿಟಿಟ್ಯೂಷನ್ ತಮಗೆ ಗೊತ್ತಿದ್ದ ಹಾಗೆ ಯಾವುದೇ ಒಂದು ಇಂಡಸ್ಟ್ರಿ ಸ್ವಲ್ಪ ಮಟ್ಟಿಗೆ ಸಿಕ್ ಆದರೆ ತಕ್ಷಣ ಅದು ಬಿಐಎಫ್‌ಆರ್ ಮುಂದೆ ಹೋಗುತ್ತದೆ. ಅಲ್ಲಿ ನಾವು ಏನಾದರೂ ಒಂದು ಹೇಳಲೇಬೇಕಾಗುತ್ತದೆ. ನಾವು ಸುಮ್ಮನೆ ಕೈಕಟ್ಟಿಕೊಂಡು ಕುಳಿತರೆ ಅವರು ತಮ್ಮ ಕಂಡೀಷನ್ಸ್ ಇಂಪೋಸ್ ಮಾಡುತ್ತಾರೆ. ಆಗ ಅಲ್ಲಿ ಇರತಕ್ಕಂತಹ ಸಂಸ್ಥೆಯನ್ನು ಕಳೆದುಕೊಳ್ಳಬೇಕೋ ಅಥವಾ ಇರತಕ್ಕಂತಹ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಅದನ್ನುಉಳಿಸಿಕೊಳ್ಳುತಕ್ಕಂತಹ ಒಂದು ವ್ಯವಸ್ಥಿತ ರೀತಿಯಲ್ಲಿ ಏನಾದರೂ ನಾವು ಹೇಳಬೇಕಾಗುತ್ತದೆ. ಅದಕ್ಕಾಗಿ ಈ ಒಂದು ಸಮಸ್ಯೆ ನಮ್ಮ ಮುಂದೆ ಇದ್ದ ಕಾರಣ ಆ ರೀತಿಯಾಗಿ ನಾವು ಹೇಳಿದ್ದೇವೆಯೇ ಹೊರತಾಗಿ ಈ ಒಂದು ದೊಡ್ಡ ಸಂಸ್ಥೆ, ರೆಪ್ಯೂಟೆಡ್ ಇನ್ಸಿಟ್ಯೂಷನ್‌ನ್ನು ಮುಳುಗಿಸಿ ಯಾರದೋ ಕೈಯಲ್ಲಿ ಸೇರಿಸಿ ಹೋಗತಕ್ಕಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ಅಂತಹ ಒಳ್ಳೆಯ ಸಂಸ್ಥೆ ಇಲ್ಲಿಯೇ ಉಳಿಯಬೇಕು. ಇಲ್ಲಿಯ ಜನರಿಗೆ ಕೆಲಸ ಸಿಗಬೇಕು. ಮತ್ತು ಅದರ ಕ್ಯಾರೆಕ್ಟರ್‌ಸ್ಟಿಕ್ಸ್ ಅದೇ ಆಗಿ ಉಳಿಯಬೇಕು ಎನ್ನುವುದು ನನ್ನ ಇಚ್ಛೆ.

ಶ್ರೀ ಸಿ.ಭೈರೇಗೌಡ:- ಬಿಹೆಚ್‌ಇಎಲ್‌ಗೆ ಯಾವ ಆಧಾರದ ಮೇಲೆ ಕೊಡಬೇಕು ಎಂದು ಆಲೋಚನೆ ಮಾಡುತ್ತಿದ್ದೀರಿ, ದಯವಿಟ್ಟು ಅದನ್ನು ಹೇಳಿ. ಅದರ ಬಗ್ಗೆ ಏನೂ ಹೇಳಲಿಲ್ಲ. ಪತ್ರ ಬರೆದರೆ ಅದಕ್ಕೆ ಉತ್ತರ ಬರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಎಲ್ಲವನ್ನೂ ಕೂಡ ಪತ್ರದಲ್ಲಿ ಬಹಿರಂಗ ಪಡಿಸುವುದಕ್ಕೆ ಆಗುವುದಿಲ್ಲ. ಕೆಲವು ವಿಷಯಗಳು ಅವರ ಜೊತೆಯಲ್ಲಿ ಮಾತನಾಡುವಂತಾದ್ದು ಇರುತ್ತವೆ. ಅದನ್ನು ಇಲ್ಲೂ ಕೂಡ ಡಿಸ್‌ಕಸ್ ಮಾಡುವುದಕ್ಕೆ ಆಗುವುದಿಲ್ಲ. ನಾಳೆ ಅವರಿಗೆ ಕೇಳುತ್ತಾರೆ ನೀವು ಯಾರು ಅಲ್ಲಿ ಹೋಗಿ ಹೇಳಿದವರು ಎಂದು. ಅದನ್ನು ತಾವು ,ನಾವು ತಿಳಿದುಕೊಳ್ಳಬೇಕು. ಈಗ ಬಿಐಎಫ್‌ಆರ್ ಮುಂದೆ ನಾವು ಏನು ಕಂಡೀಷನ್ ಫೈಲ್ ಮಾಡುತ್ತೇವೆ ಅದು ಅವರಿಗೆ ಒಪ್ಪಿಗೆ ಆದರೆ ನಾವು ಒಪ್ಪಿಕೊಳ್ಳುತ್ತೇವೆ. ಇಲ್ಲದಿದ್ದರೆ ಇಲ್ಲ.

ಶ್ರೀ ಗೋಪಿನಾಥ್ ಆರ್ ಸಾಂಡ್ರಾ : - ಮಾನ್ಯಅಧ್ಯಕ್ಷರೆ, ವಸತಿ ಖಾತೆಯ ಸಮಿತಿಯವರು.....

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಎಲ್ಲರೂ ಉತ್ತರೆ ಕೊಡುತ್ತಿದ್ದಾರೆ?

ಉಪಾಧ್ಯಕ್ಷರು : - ನೋಡೋಣ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟಕ್ಕೆ ...

ಶ್ರೀ ವಾಟಾಳ್ ನಾಗರಾಜ್ :- ಎಷ್ಟು ಸಾಧ್ಯವೊ ಅಷ್ಟು ಏನೂ ಇಲ. ಎಲ್ಲರೂ ತಯಾರಾಗಿದ್ದಾರೆ. ತಾವು ಸಭೆಯನ್ನು ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು : - ಇದುವರೆಗೂ ತಾವು ಇದ್ದೀರಿ ನೋಡೋಣ.

ಶ್ರೀ ವಾಟಾಳ್ :- ತಾವು ಹೀಗೆ ಹೇಳಿಬಿಟ್ಟರೆ ಹೇಗೆ? ನಾವಿಬ್ಬರೂ 3-4 ಮಂತ್ರಿಗಳನ್ನು ಉತ್ತರ ಕೇಳಿದ್ದೇವೆ.

ಉಪಾಧ್ಯಕ್ಷರೂ :- ಈಗ ಬಹಳ ಬೇಡಿಕೆ ಇದೆ. ಎಷ್ಟು ಸಾಧ್ಯವಾಗುತ್ತದೋ .....

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರದ ಬೇಡಿಕೆಗಳು ಇಲ್ಲ ಎಂದು ಹೇಳುತ್ತೇವೆಯೇ ನಾವು ಏನೋ ಒಂದು ರೀತಿ ನಿಶಕ್ತಿಯಾಗುತ್ತಿದೆ, ತಾವು ಅಧ್ಯಕ್ಷರಾಗಿ ಸದನದ ಒಂದು ವ್ಯಕ್ತಿತ್ವವನ್ನು ಕಾಪಾಡಬೇಕು ಎಂದು ಹೇಳುತ್ತೇನೆ.

5.30 ಪಿ ಎಂ

ಎಲ್ಲಾ ಮಂತ್ರಿಗಳಾದ ಮೇಲೆ ಓ ನಿವೇಳಿ ನಿವೇಳಿ ಅಂತ ಅಂದರೆ ಇದೇನು ಬಹಿರಂಗ ಸಭೆ ಆಯಿತೆ, ಇದು ಕರ್ನಾಟಕದ ಇತಿಹಾಸದಲ್ಲೆ, ಶಾಸನ ಸಭೆಯ ಇತಿಹಾಸದಲ್ಲಿಯೇ ಇಂತಹ ಒಂದು ಕರಾಳ ಛಾಯೆ ಎಂದೂ ಬಂದಿರಲಿಲ್ಲ. ಇದು ಬಹಳ ಅತ್ಯಂತ ನೋವಾಗುತ್ತಿದೆ. ಇಲ್ಲಿ ಅನೇಕ ಜನ ಸಂಸದೀಯ ಪಟುಗಳಿದ್ದಾರೆ, ಅನೇಕ ಜನ ಹಿರಿಯ ಸಚಿವರುಗಳಿದ್ದಾರೆ, ಇಲ್ಲಿ ನಡೆದಂತಹ ವ್ಯವಸ್ಥೆಗೂ, ಇವತ್ತು ನಡೆಯುತ್ತಿರತಕ್ಕಂತ ಪರಿಸ್ಥಿತಿಗೂ ಬಹಳ ಅಜಗಜಾಂತರ ಇದೆ ತಾವು ಸಮಗ್ರವಾದ ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ ಈಗಾಗಲೇ ಸಾಕಷ್ಟು ಜನ ಮಾತನಾಡಿದ್ದಾರೆ. ಇದರಿಂದ ಅಜೀರ್ಣವಾಗಿ ಜೀರ್ಣಿಸಿಕೊಳ್ಳುವುದು ನಮಗೆ ಕಷ್ಟವಾಗಿದೆ. ಆದ್ದರಿಂದ ಈ ಅಜೀರ್ಣಕ್ಕೆ ಔಷಧಿ ಈ ಸಭೆಯನ್ನು ಮುಂದೂಡಲಾಗುವುದೊಂದೆ.

ಉಪಾಧ್ಯಕ್ಷರು :- ತಾವು ಹೇಳುವ ಪ್ರಕಾರ ಮಾಡುವುದಕ್ಕಾಗುವುದಿಲ್ಲ, ರೂಲ್ಸ್ ಆಫ್ ಮತ್ತು ಪ್ರೊಸೀಜರ್ ಪ್ರಕಾರ ಹೋಗಬೇಕಾಗುತ್ತದೆ. ಹಿರಿಯ ಸದಸ್ಯರುಗಳೆ ಹೀಗೆ ಮಾಡಿದರೆ ಹೇಗೆ? ಎಲ್ಲಾ ಸದಸ್ಯರು ಒಪ್ಪಿಗೆ ಕೊಟ್ಟ ಪಕ್ಷದಲ್ಲಿ ಮುಂದುವರೆಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಈಗ 5.30 ಗಂಟೆಯಾಗಿದೆ, ಮತ್ತೆ ಇದೆಲ್ಲಾ ಅವರಿಗೂ ಕೂಡ ಪ್ರಚಾರ ಬೇಕಾಗುತ್ತದೆ . ಪತ್ರಿಕೆಗಳಿಗೂ ಸಾಕಷ್ಟು ಹೇಳಿದ್ದಾರೆ. ನಾವೂ ಸಹಿತ ಬೆಳಿಗ್ಗೆ 11 ಗಂಟೆಯಿಂದ ಕುಳಿತುಕೊಂಡು ಎಲ್ಲಾ ಕೇಳಿದ್ದೇವೆ ಮತ್ತು ನಮ್ಮಲ್ಲಿ ಅನೇಕ ಸದಸ್ಯರು ಮಾತನಾಡತಕ್ಕವರು ಸೋಮವಾರ ಇದರಲ್ಲಿ ಭಾಗವಹಿಸುವವರಿದ್ದಾರೆ. ಅದಕ್ಕೆ ಇಲ್ಲಿಗೆ ನಿಲ್ಲಿಸಿ ಸೋಮವಾರ ಹಾಕಿಕೊಳ್ಳೋಣ.

ಶ್ರೀ ಕೆ.ಎಚ್. ರಂಗನಾಥ್ :- ಮಾನ್ಯ ಉಪಾಧ್ಯಕ್ಷರೇ, ನಮಗೆ ಗೊತ್ತಾದ ಹಾಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇವತ್ತು ರಿಪ್ಲೈ ಆಗಿ ಮತ್ತೆ ಅಪ್ರೋಪ್ರಿಯೇಷನ್ ಬಿಲ್ಲು ಮುಗಿಯಬೇಕು, 6ನೇ ತಾರೀಖು ಶಾಸಕರ ದಿನಾಚರಣೆ ಇರುವುದರಿಂದ 7ನೇ ತಾರೀಖು ನಾವು ಸಭೆ ಸೇರುವ ಹಾಗಿಲ್ಲ ಎಂದು ತೀರ್ಮಾನ ತೆಗೆದುಕೊಂಡು ಸಭೆ ಒಪ್ಪಿಕೊಂಡಿದೆ. ಆ ಪ್ರಕಾರ ಇವತ್ತು ಮುಗಿಯಬೇಕಾಗುತ್ತದೆ. ಒಂದೊಂದು ಸಾರಿ ಅನಿವಾರ್ಯವಾಗಿ ಅಂತಹ ಪರಿಸ್ಥಿತಿ ಬಂದಾಗ ನಾವು ಬುದ್ಧಿಪೂರ್ವಕವಾಗಿ ತೀರ್ಮಾನ ತೆಗೆದುಕೊಂಡಾಗ ಅನಿವಾರ್ಯವಾಗುತ್ತದೆ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ ಅಂದಮೇಲೆ ಇವತ್ತು ಮುಗಿಯಬೇಕಾಗುತ್ತದೆ. ಸೋಮವಾರ ಅಪ್ರೂಪ್ರಿಯೇಷನ್ ಬಿಲ್ಲು ಹೋಗಬೇಕಾಗುತ್ತದೆ. ನನಗೆ ಅನಿಸುತ್ತದೆ, ಇದನ್ನೆಲ್ಲಾ ಕೂಲಂಕುಷವಾಗಿ, ಪೂರ್ವಪರ ಯೋಚನೆ ಮಾಡಿಯೇ ಸಮಿತಿ ಆ ತೀರ್ಮಾನವನ್ನು ತೆಗೆದುಕೊಂಡ ಆಗಿದೆ. ಈಗ ಬೆಳಿಗ್ಗೆಯಿಂದ ಇರುವುದೇ ತಾವು ಮೂರು ಜನ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಏನು ಒತ್ತಾಯ ಮಾಡಿದೆವು ಎಂಬು ನಾವು ಹೇಳುವುದು ಬೇಡ.

ಶ್ರೀ ಕೆ.ಎಚ್. ರಂಗನಾಥ್ : ಅದನ್ನು ಹೇಳಲಿಲ್ಲ ತೀರ್ಮಾನ ಎಂದು ನಾನು ಹೇಳಿದ್ದೆ, ಕೊನೆಗೆ ತೀರ್ಮಾನ ತೆಗೆದುಕೊಂಡಿರುತ್ತೇವೆ. ಆ ತೀರ್ಮಾನ ಎಂದು ನಾನು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ರುಜು ನಾವು ಹಾಕಿದ್ದೇವೆ, ಇಲ್ಲವೆಂದು ಹೇಳುವುದಿಲ್ಲ. ಅನೇಕ ಸಾರಿ ಸಲಹಾ ಸಮಿತಿಯ ತೀರ್ಮಾನಗಳು ಬದಲಾವಣೆ ಅಗತಕ್ಕದ್ದನ್ನು ತಾವು ನೋಡಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : ನಾಳೆ 5ನೇ ತಾರೀಖು ಮಾನ್ಯ ಸದಸ್ಯರು ಬರುತ್ತಾರೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ 6ನೇ ತಾರೀಖು ಲೆಜಿಸ್ಲೇಟರ್ಸ್ ಡೇ ಇದೆ ಮತ್ತು ಬೇರೆ ಬೇರೆ ಕಾರ್ಯಕ್ರಮಗಳು ಇವೆ. ಆದಕ್ಕೆಲ್ಲ ತಯಾರಿ ಆಗಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಹಿರಿಯ ಸಚಿವರು ಹೇಳುತ್ತಿದ್ದಾರೆ. ನಾನು ತಮ್ಮಲ್ಲಿ ಒಂದು ಸಾವಿರ ಮನವಿಗಳನ್ನು ಅರ್ಪಿಸುತ್ತೇನೆ. ಈಗ ಈ ಸದನವನ್ನು ಮುಂದೂಡತಕ್ಕದ್ದು ಒಳ್ಳೆಯದು ಎಂದು.

ಉಪಾಧ್ಯಕ್ಷರು : ದಯವಿಟ್ಟು ಸಹಕರಿಸಿ. ನೀವೆಲ್ಲ ಹಿರಿಯ ಸದಸ್ಯರು ಇದ್ದೀರಿ. ಅನೇಕ ಬೇಡಿಕೆಗಳು ಇವೆ. ಮಾನ್ಯ ಸಚಿವರು ಹೇಳಿದರು 6ನೇ ತಾರೀಖು ಲೆಜಿಸ್ಲೇಟರ್ಸ್ ಡೇ ಇರುವುದರಿಂದ 5ನೇ ತಾರೀಖು ಸದಸ್ಯರ ಹಾಜರಾತಿ ಸ್ವಲ್ಪ ಕಡಿಮೆ ಇರುತ್ತದೆ. ಆದ್ದರಿಂದ ಆದಷ್ಟು ಇವತ್ತೇ ಮುಗಿಸೋಣ ಎಂದು ಹೇಳುತ್ತಿದ್ದಾರೆ. ದಯವಿಟ್ಟು ಸಹಕರಿಸಿ, ಸದನವನ್ನು ಮುಂದೂಡುವುದು ಬೇಡ.

ಶ್ರೀ ಕೆ. ಹೆಚ್. ರಂಗನಾಥ್ : ಬಹಳ ಬೇಡಿಕೆಗಳು ಇರುವುದರಿಂದ ಸದನವನ್ನು ಮುಂದಕ್ಕೆ ಹಾಕಿದರೆ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸೋಮವಾರಕ್ಕೆ ತಾವು ಹೋದರೂ ಕೂಡ, ಇವತ್ತು ಸುಮಾರು 43 ಬೇಡಿಕೆಗಳು ಇವೆ.

ಉಪಾಧ್ಯಕ್ಷರು : ಹಿರಿಯ ಸದಸ್ಯರು ಸಹಕಾರ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅದರ ಬಗ್ಗೆ ತಕರಾರು ಇಲ್ಲ. ಈಗ ತಾವು ಮನಸ್ಸು ಮಾಡಿಲ್ಲವೆಂದು ಕಾಣುತ್ತದೆ.

ಉಪಾಧ್ಯಕ್ಷರು : ಇಷ್ಟು ಹೊತ್ತಿಗೆ ಸಾಂಡ್ರಾ ಅವರದ್ದು ಮುಗಿದಿರುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ಅವರದ್ದು ಆದಮೇಲೆ ಮುಂದೂಡುತ್ತೀರಾ?

ಉಪಾಧ್ಯಕ್ಷರು : ಎಲ್ಲ ಅಗ್ರಿಮೆಂಟನ್ನು ಈಗಲೇ ಕೇಳುತ್ತೀರಲ್ಲ. ದಯವಿಟ್ಟು ಕುಳಿತುಕೊಳ್ಳಿ . ನೀವು ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ತುದಿಗಾಲಲ್ಲಿ ನಿಂತಿದ್ದಾರೆ, ಬೇಗ ಉತ್ತರ ಕೊಟ್ಟು ಹೊರಟು ಹೋಗೋಣ ಎಂದು.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ಒಬ್ಬರೇ ಇರಬೇಕು ತುದಿಗಾಲಲ್ಲಿ ನಿಂತಿರುವುದು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ತುದಿಗಾಲಲ್ಲಿ ನಿಂತಿಲ್ಲ. ಅಕೆ ಮುಗಿಸದಿದ್ದರೆ ನಾವು ನಿಮ್ಮ ಮುಂದೆ ಬಂದು ಕೋರುತ್ತೇವೆ.

ವಸತಿ ಸಚಿವರಿಂದ ಉತ್ತರ

*ಶ್ರೀ ಗೋಪಿನಾಥ್ ಆರ್ . ಸಾಂಡ್ರಾ : (ವಸತಿ ಖಾತೆಯ ಸಚಿವರು) :- ಸನ್ಮಾನ್ಯ ಅಧಕ್ಷರೆ, ವಸತಿ ಖಾತೆಯ ಬಗ್ಗೆ ವಿಷಯ ಸಮಿತಿಯವರು, ನಮ್ಮ ಖಾತೆ ಬಹಳ ಚಿಕ್ಕದಾದರೂ ಮಹತ್ವದ ಸಲಹೆಗಳನ್ನು ನೀಡಿದ್ದಾರೆ. ನಮ್ಮ ಖಾತೆಯವರು ಕಳೆದ ಎರಡು ವರ್ಷಗಳಿಂದ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆನ್ನುವುದು ಅವರಿಗೆ ತಿಳಿದಿದ್ದರೆ ಇವು ಮೂರು ಸಲಹೆಗಳನ್ನು ಸಮಸ್ಯೆಗಳನ್ನು ನಮ್ಮ ಮುಂದೆ ಇಡುತ್ತಿರಲಿಲ್ಲವೆಂದು ಅಂದುಕೊಂಡಿದ್ದೇನೆ. ಮೊದಲನೆಯದಾಗಿ ಹೌಸಿಂಗ್ ಬೋರ್ಡ್ ವ್ಯವಸ್ಥೆ ಚೆನ್ನಾಗಿಲ್ಲ. ಹೌಸಿಂಗ್ ಬೋರ್ಡಿನಲ್ಲಿ ಅರ್ಧಂಬರ್ಧ ಕೆಲಸವಾಗಿದೆ, ಪೂರ್ತಿಯಾಗಿದ್ದರೂ ಬೆನಿಫಿಷರೀಸ್‌ಗೆ ಕೊಟ್ಟಿಲ್ಲವೆಂಬ ಮಾತನ್ನು ಅವರು ಹೇಳಿದ್ದಾರೆ. ಭಾಗಶಃ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಸಾವಧಾನವಾಗಿ ನಿಧಾನವಾಗಿ ಕೆಲಸ ನಡೆದಿದೆ. ಅದಕ್ಕೆ ಕಾರಣಗಳು ಅನೇಕ ಉಂಟು. ಒಂದೆರಡು ಕಾರಣಗಳನ್ನು ಮಾತ್ರ ಹೇಳುತ್ತೇನೆ. ಸ್ಟೀಲ್ ಮತ್ತು ಸಿಮೆಂಟ್ ಸಿಕ್ಕದೆ ಇದ್ದ ಕಾರಣ ಕಂಟ್ರಾಕ್ಟರಿಗೂ ಮತ್ತು ಹೌಸಿಂಗ್ ಬೋರ್ಡಿಗೂ ಏನುಕಾಂಟ್ರಾಕ್ಟ್ ಆಗಿತ್ತು ಅದು ಸ್ಟೀಲ್ ಮತ್ತು ಸಿಮೆಂಟಿನ ಧಾರಣೆ ಹೆಚ್ಚಾದುದರಿಂದ ಕುಂಠಿತವಾಗಿದೆ ಎಂಬುದು ಒಂದು ಕಾರಣ. ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟಿಸಿದಾಗ ಸೈಟುಗಳನ್ನು ತೆಗೆದುಕೊಂಡಿದ್ದರು, ಭೂಮಿಯನ್ನು ತೆಗೆದುಕೊಂಡಿದ್ದರು. ಆ ಭೂಮಿ ತಕರಾರಾಗಿ ಕೋರ್ಟಿನಲ್ಲಿ ಸ್ಟೇ ಆರ್ಡರ್‌ಬಂದಿದ್ದರಿಂದ ತಡವಾಗಿದೆ. ಎರಡು ವರ್ಷಗಳಿಂದ ನಾವು ಸಾಕಷ್ಟು ಕ್ರಮ ತೇಗೆದುಕೊಂಡು ತಡವಾದುದು ಏತಕ್ಕೆ ಎಂದು ನೋಡಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಯೋಜನೆಯನ್ನು ಆದಷ್ಟು ಬೇಗನೆ ಕೈಗೊಂಡು ಯಾವ ಕೆಲಸಗಳನ್ನು ಕೈಗೊಂಡಿದ್ದರು ಅವನ್ನು ಪೂರ್ಣ ಮಾಡುವಂತೆ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಪೂರ್ತಿಯಾಗಿ ಮನೆಗಳನ್ನು ಬೆನಿಫಿಷರೀಸ್‌ಗೆ ಕೂಡಲೇ ಕೊಡುವಂತೆ ಆದೇಶ ಮಾಡಿದ್ದೇವೆ. ಈ ಆದೇಶ ತ್ವರಿತಗತಿಯಿಂದ ಕಾರ್ಯಗತವಾಗಬೇಕೆಂದು ನಾವು ಈಗಾಗಲೇ ಅದಿಕಾರಿಗಳಿಗೆ ಹೇಳಿದ್ದೇವೆ. ಎರಡನೆಯದಾಗಿ, ಈ ಆಶ್ರಯ ಯೋಜನೆಯಲ್ಲಿ ಮೊಬಿಲೈಸೇಷನ್ ಅಡ್ವಾನ್ಸ್ ಸೆಕ್ಯೂರಿಟಿ ಅಡ್ವಾನ್ಸ್ ನಾವು ಏನು ಕೊಟ್ಟಿದ್ದೇವೆ ಆ ಹಣ ಇನ್ನೂ ವಾಪಸ್ಸು ಬರುತ್ತಿಲ್ಲ. 5 ಕೋಟಿ ಚಿಲ್ಲರೆ ಹಣವನ್ನು ಮಾತ್ರ ನಾವು ವಾಪಸ್ಸು ಪಡೆದಿದ್ದೇವೆ. ಇನ್ನೂ 13 ಕೋಟಿ ರೂಪಾಯಿ ನಮಗೆ ಬರಬೇಕಾಗಿದೆ.

ಅದನ್ನು ತ್ವರಿತಗತಿಯಿಂದ ವಸೂಲ್ಮಾಡಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ಆದರೆ ಹೈಕೋರ್ಟಿನವರು ಸ್ಟೇ ತಂದದ್ದರಿಂದ ಅದನ್ನು ನಾವು ಎಷ್ಟೇ ಶೀಘ್ರಗತಿಯಲ್ಲಿ ವಾಪಸ್ಸು ತೆಗೆದುಕೊಳ್ಳಬೇಕೆಂದರೂ ಅದು ಆಗುತ್ತಿಲ್ಲ. ಆ ಒಂದು ಕಾರಣದಿಂದ ಅದು ತಡವಾಗಿದೆ. ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯ ಅವರು ಹೇಳಿದರು, ಒಂದುವರೆ ತಿಂಗಳಲ್ಲೇ ಇದು ಆಗಬೇಕು ಎಂದು. ಇದು ನನ್ನ ಕೈಯಲ್ಲಿ ಇಲ್ಲ ಸರ್ಕಾರದ ಕೈಯಲ್ಲಿ ಇಲ್ಲ. ಹೈಕೋರ್ಟಿನವರ ಕೈಯಲ್ಲಿ ಇದೆ. ಆದಷ್ಟು ಬೇಗ ಹೈಕೋರ್ಟಿನವರಿಗೆ ಮನವಿ ಮಾಡಿ ಸ್ಟೇ ಆರ್ಡರ್ ವೆಕೇಟ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. 1993-94ರಲ್ಲಿ ನಾವು ಸುಮಾರು 1,09,882 ಮನೆಗಳನ್ನು ಕಟ್ಟಿ ಬೆನಿಫಿಷರೀಸ್‌ಗೆ ಈಗಾಗಲೇ ಕೊಡುತ್ತಿದ್ದೇವೆ. ಆದ್ದರಿಂದ ವಸತಿ ಖಾತೆ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ಮಾತನ್ನು ಹೇಳಿ 1994-95ರಲ್ಲಿ ನಾವು ಈ ಒಂದು ಕಾರ್ಯಕ್ರಮವನ್ನು ಹಾಕಿ ತ್ವರಿತಗತಿಯಿಂದ ಆಚರಣೆಗೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಆಶ್ರಯ ಯೋಜನೆಯಲ್ಲಿ ಒಂದು ಲಕ್ಷದ 10 ಸಾವಿರ ಮನೆಗಳನ್ನು , ಅಂಬೇಡ್ಕರ್ ಯೋಜನೆಯಲ್ಲಿ 50 ಸಾವಿರ ಮನೆಗಳನ್ನು, ಇಂದಿರಾ ಅವಾಸ್ ಯೋಜನೆಯಲ್ಲಿ 11,517 ಮನೆಗಳನ್ನು ಮತ್ತು ನೆರಳಿನ ಭಾಗ್ಯ ಯೋಜನೆಯಲ್ಲಿ ಒಂದು ಲಕ್ಷ ಮನೆಗಳನ್ನು ನಾವು ಕೊಡಬೇಕೆಂದು ಅದಕ್ಕಾಗಿ ಪ್ರತ್ಯೇಕವಾಗಿ ಹಣ ಕಾದಿರಿಸಲಾಗಿದೆ. ಈ ಕಾರ್ಯಕ್ರಮವನ್ನು 1994-95ರಲ್ಲಿ 200 ದಿನಗಳ ಅವಧಿಯಲ್ಲಿ ಮಾಡಲು ಈಗಾಗಲೇ ಎಲ್ಲ ಯೋಜನೆಗಳನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ, ಹೌಸಿಂಗ್ ಬೋರ್ಡಿಗ್ ಕೊಟ್ಟಿಲ್ಲ. ಅವರು ಕಾರ್ಯಗತ ಮಾಡಿತ್ತಿದ್ದಾರೆಂದು ಹೇಳಲು ನನಗೆ ಸಂತೋಷವಾಗುತ್ತದೆ, ಅಭಿಮಾನವಾಗುತ್ತದೆ. ಇನ್ನು ಹೆಚ್ಚು ಮಾತನಾಡದೆ ನನ್ನ ಇಲಾಖೆಯ ಬೇಡಿಕೆಗಳನ್ನು ಮನ್ನಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಸದನದ ಕಲಾಪವನ್ನು ಮುಂದೂಡಿ, ಮತ್ತೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರುವುದು.

(ಸದನವು ಸಂಜೆ 5 ಗಂಟೆ 40 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ 5ನೇ ಸೆಪ್ಟಂಬರ್ 1994 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದಾಗಿ ತೀರ್ಮಾನವಾಯಿತು.)

* ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನುಬಂಧ I

ಕರ್ನಾಟಕದ ವಿಧಾನ ಸಭೆ

ಒಂಬತ್ತನೆಯ ವಿಧಾನಸಭೆ

(ಹದಿಮೂರನೆಯ ಅಧಿವೇಶನ)

ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1994

(1994ರ ವಿಧಾನ ಸಭಾ ವಿಧೇಯಕ ಸಂಖ್ಯೆ, 20)

ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ, 1991ನ್ನು (1991ರ ಕರ್ನಾಟಕ ಅಧಿನಿಯಮ 29) ಇಲ್ಲಿ ಇನ್ನು ಮುಂದೆ ಕಾಣಿಸಿರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ನಲವತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1994 ಎಂದು ಕರೆಯತಕ್ಕದ್ದು.

(2) ಅದು ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ :- ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮದ (1991ರ ಕರ್ನಾಟಕ ಅಧಿನಿಯಮ 29) ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗುತ್ತದೆ) 3ನೇ ಪ್ರಕರಣದಲ್ಲಿ "ಈ ಅಧಿನಿಯಮವು ಪ್ರಾರಂಭವಾದ ಎರಡು ವರ್ಷಗಳ ಒಳಗೆ " ಎಂಬ ಪದಗಳಿಗೆ, "1994ರ ಅಕ್ಟೋಬರ್ ಮೊದಲನೇ ದಿನಾಂಕಕ್ಕೆ ಮುಂಚೆ" ಎಂಬ ಪದಗಳು, ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದು ಮತ್ತು ಹಾಗೆ ಪ್ರತಿಯೋಜಿಸಲಾಗಿದೆಯೆಂದು ಯಾವಾಗಲೂ ಭಾವಿಸತಕ್ಕದ್ದು.